ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 9 ಗುರುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 23 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4



ಮೈಸೂರು ಮಿತ್ರ ಗುರುವಾರ 9 ಮೇ 2024

ಸ್ವಾಮಿ ಚಿನ್ಮಯಾನಂದ ಜಯಂತಿ: ಗೋವುಗಳಿಗೆ ಮೇವು



ಮೈಸೂರಿನ ನಂಜುಮಳಿಗೆ ಸುತ್ತಮುತ್ತ ಗೋವುಗಳಿಗೆ ಮೇವು ನೀಡುವ ಮೂಲಕ ಅಪೂರ್ವ ಸ್ನೇಹ ಬಳಗ ಗುರುದೇವಸ್ವಾಮಿ ಚಿನ್ಮಯಾನಂದರ 108ನೇ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಈ ವೇಳೆ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ಸ್ವಾಮಿ ಚಿನ್ಮಯ ಮಿಷನ್ ಭಕ್ತಾದಿಗಳಾದ ದಯಾನಂದ್, ಬೈರತಿ ಲಿಂಗರಾಜು, ಆನಂದ್, ಮಂಜುನಾಥ್, ನಟರಾಜ್, ಶಿವು, ದರ್ಶನ್, ದುರ್ಗಾ ಪ್ರಸಾದ್ ಇನ್ನಿತರರು ಉಪಸ್ಥಿತರಿದ್ದರು.

ಮೇ 11ರಿಂದ ರಾಜ್ಯಮಟ್ಟದ ನಮ್ಮ ಹಬ್ಬ

ಮೈಸೂರು, ಮೇ 8– ಮೈಸೂರ್ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಸಂಸ್ಥೆ ದಶಮಾನೋತ್ಸವದ ಪ್ರಯುಕ್ತ ಮೇ 11 ಮತ್ತು 12ರಂದು ಸಂಸ್ಥೆಯ ಸಭಾಂಗಣದಲ್ಲಿ "ರಾಜ್ಯಮಟ್ಟದ ನಮ್ಮ ಹಬ್ಬ" ವೈವಿಧ್ಯಮಯ ಸಾಂಸ್ಕೃತಿಕ ಉತ್ಸವವನ್ನು ಬೆಳಗ್ಗೆ 10.30ರಿಂದ ಸಂಜೆ 8ರವರೆಗೆ ಹಮ್ಮಿಕೊಳ್ಳಲಾಗಿದೆ.



ಉತ್ಸವದ ಉದ್ಘಾಟನಾ ಸಮಾರಂಭವನ್ನು ಹಲವು ಗಣ್ಯರ ಸಮ್ಮುಖದಲ್ಲಿ ಮೇ 11 ರಂದು ಬೆಳಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದ್ದು, ಮೈಸೂರು ವಿಶ್ವವಿದ್ಯಾನಿಲಯದ ಲಲಿತಕಲಾ ಕಾಲೇಜಿನ ನೃತ್ಯ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರೂ ಆಗಿರುವ ಡಾ. ಕೆ ಕುಮಾರ್ ಅವರ ಪುತ್ರಿಯರಾದ ಕಲೆಮನೆ ಸಹೋದರಿಯರಾದ ಕುಮಾರಿ ಲೇಖ ಕೆ.ಎಂ ಮತ್ತು ನಿಧಿ ಕೆ.ಎಂ ಅವರ ನೃತ್ಯ ಕಾರ್ಯಕ್ರಮ ಇರಲಿದೆ.

ಮೇ 12ರಂದು ಎನ್.ಧನಂಜಯ, ಡಾ.ಪೂರ್ಣಿಮಾ ಸೇರಿ 6 ಮಂದಿಗೆ ಡಾ.ರಾಜ್ ಸಾಧನಾ ಪ್ರಶಸ್ತಿ ಪ್ರದಾನ



ಧನಂಜಯ ಡಾ.ಪೂರ್ಣಿಮಾ ರಮೇಶ್ ಕುಮಾರ್ ರಮೇಶ್‌ಕುಮಾರ್ ಭಾಗ್ಯಲಕ್ಷ್ಮಿ

ಮೈಸೂರು, ಮೇ 8 –ಮೈಸೂರಿನ ಇಂಚರ ಸಾಂಸ್ಕೃತಿಕ ಪ್ರತಿಷ್ಠಾನವು ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗದ ಸಹಯೋಗದೊಂದಿಗೆ ವರನಟ ಡಾ.ರಾಜ್ ಕುಮಾರ್ ಅವರ 95ನೇ ಜನ್ಮ ದಿನಾಚರಣೆ ಅಂಗ ವಾಗಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಮೇ 12ರಂದು ಕೃಷ್ಣಮೂರ್ತಿಪುರಂನ ನಮನ ಕಲಾ ಮಂಟಪದಲ್ಲಿ ಡಾ.ರಾಜ್ ಸಾಧನಾ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಲಾಗಿದೆ.

ಎನ್.ಧನಂಜಯ (ಹವ್ಯಾಸಿ ರಂಗಭೂಮಿ), ಡಾ.ಪೂರ್ಣಿಮಾ ಮಧುಸೂದನ್ (ವೈದ್ಯಕೀಯ), ಕೆ.ರಮೇಶ್ (ಸಾಹಿತ್ಯ), ಡಾ.ಆರ್.ಡಿ.ಕುಮಾರ್ (ಕಾನೂನು ಮತ್ತು ಸಂಘಟನೆ), ರಮೇಶ್ ಕುಮಾರ್ (ಜೂ.ರಾಜ್ ಕುಮಾರ್) (ಗಾಯನ) ಮತ್ತು ಕು. ಭಾಗ್ಯಲಕ್ಷ್ಮಿ (ಭರತನಾಟ್ಯ) ಅವರಿಗೆ ಡಾ. ರಾಜ್ ಸಾಧನಾ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಇದೇ ವೇಳೆ 20 ಮಂದಿ ಕವಿಗಳು ಡಾ.ರಾಜ್ ಕಾವ್ಯ ಗೌರವ ಕವಿಗೋಷ್ಠಿಯಲ್ಲಿ ಡಾ.ರಾಜ್ ಕುರಿತಾದ ಕವಿತೆಗಳನ್ನು ವಾಚಿಸಲಿದ್ದಾರೆ. ಹೆಚ್ಚಿನ ವಿವರಗಳಿಗೆ ಮೊ. 9845791252 ಸಂಪರ್ಕಿಸಬಹುದು.

ಮೇ 12ರಿಂದ ಸಂಸ್ಕೃತ ಸಂಭಾಷಣಾ ಶಿಬಿರ

ಮೈಸೂರು, ಮೇ 8 –ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ 5ನೇ ತರಗತಿಯಿಂದ ಮೇಲ್ಪಟ್ಟ ಮಕ್ಕಳು ಹಾಗೂ ಹಿರಿಯರು ಸೇರಿದಂತೆ ಎಲ್ಲರಿಗೂ ಹೊಂದುವಂತೆ ಸಂಸ್ಕೃತ ಸಂಭಾಷಣಾ ಶಿಬಿರವನ್ನು ಮೇ 12ರಿಂದ 21ರವರೆಗೆ ವಾಣಿ ವಿಲಾಸ ರಸ್ತೆಯಲ್ಲಿರುವ ಕೆಎಸ್‌ಎಸ್ ಸಂಸ್ಕೃತ ಪಾಠಶಾಲೆಯಲ್ಲಿ ಸಂಜೆ 4ರಿಂದ 6 ಗಂಟೆಯವರೆಗೆ ಹಮ್ಮಿಕೊಳ್ಳಲಾಗಿದೆ. ಆಸಕ್ತರು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಮೊ. 9449782125, 9739469910, 9844465357 ಸಂಪರ್ಕಿಸಬಹುದು.

ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ: ಪೂರ್ವಭಾವಿ ಸಭೆ



ಮೈಸೂರು, ಮೇ 8–ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ ಸುದರ್ಶನ್ ನೇತೃತ್ವದಲ್ಲಿ ಅವರ ಕಚೇರಿಯಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಸಭೆಯಲ್ಲಿ ಪ್ರೊ ನಂಜರಾಜ ಅರಸ್, ಅರವಿಂದ್ ಶರ್ಮ, ಶ್ರೀಧರ್ ರಾಜೇ ಅರಸ್, ಸಿದ್ದರಾಜು ಸೋಸಲೆ, ಶ್ರೀಮತಿ ಯಮುನಾ, ಮಹದೇವು, ನಂಜುಂಡ ರಾಜ ಅರಸ್, ಶ್ರೀಕಾಂತ ರಾಜೇ ಅರಸ್, ಶರತ್ ಅರಸ್, ಚಂದ್ರಚೂಡ ರಾಜೆ ಅರಸ್ ಇತರರು ಭಾಗವಹಿಸಿದ್ದರು.

ಈ ವೇಳೆ ಮಾತನಾಡಿದ ಡಾ.ಸುದರ್ಶನ್, ಜಿಲ್ಲಾಧಿಕಾರಿಗಳು, ಚುನಾವಣಾಧಿಕಾರಿಗಳಾಗಿರುವ ಕಾರಣ ಅವರ ಉಪಸ್ಥಿತಿಯಲ್ಲಿ ಸಭೆ ಮಾಡಲು ಸಾಧ್ಯವಿಲ್ಲ. ಆದ್ದರಿಂದ ತಮ್ಮ ಸಲಹೆಗಳನ್ನು ಕ್ರೋಢೀಕರಿಸಿ ಅಗತ್ಯ ಕ್ರಮಕ್ಕೆ ಅವರ ಗಮನಕ್ಕೆ ತರುತ್ತೇನೆ ಎಂದರು.

ಈ ವೇಳೆ ಪ್ರೊ ನಂಜರಾಜ ಅರಸ್ ಮಾತನಾಡಿ, ನಾಲ್ವಡಿ ಅವರ ಜಯಂತಿ ಅರ್ಥಪೂರ್ಣವಾಗಿ ಮಾಡಬೇಕು. ನಾಲ್ವಡಿ ಅವರು ಎಲ್ಲಾ ಜನರಿಗೆ ಸೇರಿದವರು. ಮುಂದಿನ ಪೀಳಿಗೆಗೆ ಅವರ ಕೊಡುಗೆ ತಲುಪಬೇಕು. ಅವರ ಕೊಡುಗೆಯ ಕುರಿತು ಕಿರುಹೊತ್ತಿಗೆಯನ್ನು ಹಲವು ವರ್ಷಗಳ ಹಿಂದೆ ಮೈಸೂರು ಮಹಾನಗರ ಪಾಲಿಕೆ ಮುದ್ರಿಸಿ ಹಂಚಿದೆ. ಅದೇ ರೀತಿ ಎರಡು ಅಥವಾ ಮೂರು ಸಾವಿರ ಪ್ರತಿ ಶಾಲಾ ಮಕ್ಕಳಿಗೆ ಹಂಚಬೇಕು. ರಾಜ್ಯ ಮಟ್ಟದ ಕಾರ್ಯಕ್ರಮ ಈ ಭಾರಿ ಮೈಸೂರಲ್ಲೇ ನಡೆದು, ಅದರ ಅನುದಾನ ವಿಭಜಿಸಿ ತಾಲೂಕು ಮಟ್ಟದಲ್ಲಿ ಜಯಂತಿ ಮಾಡಲು ಕ್ರಮ ಕೈಗೊಳ್ಳಬೇಕು. ಸಾಧ್ಯವಾದರೆ ಮುಖ್ಯಮಂತ್ರಿಗಳ ಮೈಸೂರು ಭೇಟಿ ದಿನಾಂಕದಂದೇ ಕಾರ್ಯಕ್ರಮ ಮಾಡಬೇಕು ಎಂದರು.

ಅರವಿಂದ್ ಶರ್ಮ ಮಾತನಾಡಿ, ನಾಲ್ವಡಿ ಜಯಂತಿ ದಿನದಂದು ಅವರ ಕೊಡುಗೆಯ ಕಿರುಪರಿಚಯ ಮಕ್ಕಳಿಗೆ ಪ್ರಾರ್ಥನಾ ಸಮಯದಲ್ಲಿ ತಿಳಿಸಬೇಕು. ನಾಲ್ವಡಿ ಅವರ ಭಾವಚಿತ್ರವನ್ನು ಕಡ್ಡಾಯವಾಗಿ ಜಿಲ್ಲೆಯ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಶಾಲಾ ಕಾಲೇಜಗಳಲ್ಲಿ ಹಾಕಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಡಳಿತಕ್ಕೆ ಒತ್ತಾಯಿಸಿದರು.

ಸಿದ್ದರಾಜು ಸೋಸಲೆ ಮಾತನಾಡಿ, ನಾಲ್ವಡಿ ಅವರ ಕುರಿತು ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಶಾಲೆಯ ಮಕ್ಕಳಿಗೆ ಪ್ರಬಂಧ ಸ್ಪರ್ಧೆ ಏರ್ಪಡಿಸಬೇಕು. ನಂಜರಾಜ ಅರಸ್ ಮಾರ್ಗದರ್ಶನದಲ್ಲಿ ವಾರ್ತಾ ಇಲಾಖೆ 55 ನಿಮಿಷದ ಕಿರುಚಿತ್ರ ಮಾಡಬೇಕು ಎಂಬ ಸಲಹೆ ನೀಡಿದರು. ನಾಲ್ವಡಿ ಜಯಂತಿ ದಿನ ಮತ ಎಣಿಕೆ ಇರುವುದರಿಂದ ಅಂದು ಸಾಂಕೇತಿಕವಾಗಿ ಪುಷ್ಪಾರ್ಚನೆ ಮಾಡಬೇಕು. ನಂತರದ ದಿನದಲ್ಲಿ ಮುಖ್ಯಮಂತ್ರಿಗಳ ಉಪಸ್ಥಿತಿಯಲ್ಲಿ ಅದ್ದೂರಿಯಾಗಿ ಆಚರಿಸಬೇಕೆಂದು ಸಭೆಯಲ್ಲಿ ಎಲ್ಲರೂ ಒಕ್ಕೊರಲಿನಿಂದ ಅಭಿಪ್ರಾಯ ತಿಳಿಸಿದರು.

ನೊಂದವರ ದಾರಿದೀಪವಾಗಿದ್ದ ಶ್ರೀನಿವಾಸ್ ಪ್ರಸಾದ್

ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಪರಿಷತ್ತು ನಿರ್ದೇಶಕ ಪ್ರೊ.ಡಿ.ಆನಂದ್ ಅಭಿಮತ

ಮೈಸೂರು, ಮೇ 8(ಎಂಟಿವೈ)– ನೊಂದವರಿಗೆ ದಾರಿದೀಪದಂತೆ ಇದ್ದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಇದೀಗ ನಮಗೆ ನಂದಾದೀಪವಾಗಿದ್ದಾರೆ ಎಂದು ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಪರಿಷತ್ತು ನಿರ್ದೇಶಕ ಪ್ರೊ.ಡಿ.ಆನಂದ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರದಲ್ಲಿ ಬುಧವಾರ ಆಯೋಜಿಸಿದ್ದ ವಿ.ಶ್ರೀನಿವಾಸಪ್ರಸಾದ್ ಅವರಿಗೆ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶ್ರೀನಿವಾಸ್ ಪ್ರಸಾದ್ ಸಮಾಜಶಾಸ್ತ್ರಜ್ಞ, ರಾಜಕೀಯ ಪ್ರಾಧ್ಯಾಪಕರಂತೆ ಇದ್ದರು. ಸಾಂಸ್ಕೃತಿಕವಾಗಿ ಸಮಾಜಮುಖಿಯಾಗಿ ಅನುಕರಣೆ ಮಾಡಬೇಕಾದರೆ ಅವರ ಹೆಸರು ಕೇಳಿ ಬರುತ್ತಿತ್ತು. ಅವರ ವಿಚಾರ ಸ್ಪಷ್ಟತೆ, ವೈಚಾರಿಕ ನಿಲುವು ಅನುಕರಣೀಯ. ಸಂವಿಧಾನ ಪರಾಮರ್ಶೆ ಹೇಳಿಕೆಗೆ ವಿರೋಧ ವ್ಯಕ್ತವಾದಾಗ, ಪರಾಮರ್ಶೆ ಮಾಡಬೇಕಾಗಿರುವುದಕ್ಕೆ ಕಾರಣ ವಿವರಿಸುತ್ತಿದ್ದರು. ಪರಾಮರ್ಶೆಯಿಂದ ಒಳಿತಾಗುವುದು ಬೇಡವೇ? ಎಂದು ಮರು ಪ್ರಶ್ನಿಸಿದ್ದರು ಎಂದು ತಿಳಿಸಿದರು.



ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರದಲ್ಲಿ ಬುಧವಾರ ಆಯೋಜಿಸಿದ್ದ ವಿ.ಶ್ರೀನಿವಾಸಪ್ರಸಾದ್ ಅವರಿಗೆ ನುಡಿನಮನ ಕಾರ್ಯಕ್ರಮದಲ್ಲಿ ಪ್ರಸಾದ್ ಅವರ ಭಾವಚಿತ್ರಕ್ಕೆ ವಿಶ್ವಮೈತ್ರಿ ಬುದ್ಧ ವಿಹಾರದ ಭಂತೆ ಡಾ.ಕಲ್ಯಾಣಸಿರಿ ಪುಷ್ಪ ನಮನ ಸಲ್ಲಿಸುತ್ತಿರುವುದು


ಈ ಹಿಂದೆ ಬಹುಜನ ಸಮಾಜ ಪಕ್ಷದಿಂದ ವಿದ್ಯಾರ್ಥಿಗಳಲ್ಲಿ ರಾಜಕೀಯ ಸಂಚಲನವುಂಟಾಯಿತು. ಆ ವೇಳೆ ಶ್ರೀನಿವಾಸಪ್ರಸಾದ್ ಅವರು, ಮದ್ದು ಗುಂಡು ಇಲ್ಲದೇ ಯುದ್ಧಕ್ಕೆ ಹೋದರೆ ಸೋಲುತ್ತೇವೆ. ನಮಗೆ ಆಸ್ತಿ ಇಲ್ಲ. ನಮ ಜನ ಜಮೀನ್ದಾರರಲ್ಲ. ರಾಜಕೀಯ ಅಷ್ಟು ಸರಾಗ ಅಲ್ಲ. ಗಟ್ಟಿಯಾಗಿ ತಳವೂರದೇ ರಾಜಕೀಯ ಅಧಿಕಾರ ಪಡೆಯಲು ಸಾಧ್ಯವಿಲ್ಲ ಎಂದು ಮನವರಿಕೆ ಮಾಡಿ ಕೊಟ್ಟಿದ್ದರು. ಆಗ ಅವರ ಮಾತನ್ನು ಕೇಳಿಸಿಕೊಳ್ಳುವ ವ್ಯವಧಾನ ಇರಲಿಲ್ಲ ಎಂದು ವಿಷಾದಿಸಿದರು.

ಮೈಸೂರಿನ ಮಹಾರಾಣಿ ಕಾಲೇಜಿನ ವಿದ್ಯಾರ್ಥಿ ನಿಲಯದಲ್ಲಿ ದಲಿತ ಮತ್ತು ಇತರೆ ಜಾತಿಯ ಹೆಣ್ಣು ಮಕ್ಕಳ ನಡುವೆ ಘರ್ಷಣೆ ಸಂಭವಿಸಿದಾಗ ಅಹಂ ತೋರದೆ ಸಮಸ್ಯೆ ಇತ್ಯರ್ಥ ಮಾಡಿದರು. ಶ್ರೀರಂಗಪಟ್ಟಣ ತಾಲೂಕಿನ ಮಹದೇವಪುರದಲ್ಲಿ ಡಾ.ಅಂಬೇಡ್ಕರ್ ಜಯಂತಿ ವೇಳೆ ನಾಯಕತ್ವ ವಿಚಾರವಾಗಿ ಉಂಟಾದ ವೈಮನಸ್ಸನ್ನು ಪ್ರಸಾದ್ ಅವರು ನಿಭಾಯಿಸಿದ್ದನ್ನು ಮರೆಯಲು ಸಾಧ್ಯವೇ ಇಲ್ಲ ಎಂದರು.

ಕಾರ್ಯಕ್ರಮದಲ್ಲಿ ವಿಶ್ವಮೈತ್ರಿ ಬುದ್ಧ ವಿಹಾರದ ಭಂತೆ ಡಾ.ಕಲ್ಯಾಣಸಿರಿ, ಕೇಂದ್ರದ ನಿರ್ದೇಶಕ ಪ್ರೊ.ಜೆ.ಸೋಮಶೇಖರ್, ಡಾ.ಎಸ್. ನರೇಂದ್ರ ಕುಮಾರ್, ನಿವೃತ್ತ ಪ್ರಾಧ್ಯಾಪಕ ಜಯಶಂಕರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಇಂದು ಕಾಯಕಯೋಗಿ ಬಸವಶ್ರೀ ಪ್ರಶಸ್ತಿ ಪ್ರದಾನ

ಮೈಸೂರು, ಮೇ 8– ಮೈಸೂರಿನ ಜನಸೇವಕ ಯುವ ಬ್ರಿಗೇಡ್ ವತಿಯಿಂದ ಬಸವ ಜಯಂತಿ ಅಂಗವಾಗಿ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣ ನೆನಪಿನಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಕಾಯಕ ಯೋಗಿ ಬಸವಶ್ರೀ ಪ್ರಶಸ್ತಿ ಪ್ರದಾನ ಸಮಾರಂಭವನ್ನು ನಾಳೆ (ಮೇ 9) ಸಂಜೆ 5.30ಕ್ಕೆ ರೂಪನಗರದ ಗಣಪತಿ ದೇವಸ್ಥಾನ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಬಿಜೆಪಿ ಮುಖಂಡರಾದ ಕವೀಶ್‌ಗೌಡ, ಅರುಣ್‌ಗೌಡ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಸುಯೋಗ್ ಆಸ್ಪತ್ರೆಯ ಮುಖ್ಯಸ್ಥ ಡಾ.ಎಸ್.ಪಿ.ಯೋಗಣ್ಣ ಭಾಗವಹಿಸಲಿದ್ದಾರೆ. ಇದೇ ವೇಳೆ ಪ್ರೊ. ಸಾಧನಾ ತಂತ್ರಿ (ಶಿಕ್ಷಣ ಕ್ಷೇತ್ರ), ಮಹೇಶ್‌ಕುಮಾರ್ (ಸಂಘಟನಾ ಕ್ಷೇತ್ರ), ಮಾಯಾ ಶಾನ್‌ಬಾಗ್ (ಸಾಮಾಜಿಕ ಕ್ಷೇತ್ರ), ಎಸ್.ಇ. ಗಿರೀಶ್ (ಆರೋಗ್ಯ ಕ್ಷೇತ್ರ) ಮತ್ತು ಮಹೇಂದ್ರ ಸಿಂಗ್ ಕಾಳಪ್ಪ (ಪರಿಸರ ಕ್ಷೇತ್ರ) ಅವರಿಗೆ ಕಾಯಕಯೋಗಿ ಬಸವಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗುವುದು.



ಮೇ 17ರಂದು ರಾಜ್ಯಾದ್ಯಂತ ದ ಸೂಟ್ ಚಿತ್ರ ಬಿಡುಗಡೆ

ಮೈಸೂರು, ಮೇ 8(ಜಿಎ)– 'ದ ಸೂಟ್' ಚಲನಚಿತ್ರ ಮೇ 17ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ ಎಂದು ನಿರ್ದೇಶಕ ಎಸ್. ಭಗತ್‌ರಾಜ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೂಟ್‌ಗೆ ಕುಟುಂಬಗಳಲ್ಲಿ ಮಹತ್ವವಿದೆ. ಇದೇ ರೀತಿ ಪ್ರತಿಯೊಬ್ಬ ಮನುಷ್ಯನೂ ಸೂಟ್‌ನಂತೆಯೇ ಮುಖವಾಡ ಹಾಕಿಕೊಂಡು ವರ್ತಿಸುತ್ತಾನೆ. ಈ ರೀತಿಯ ವಿಶಿಷ್ಟ ಕಥೆ ಆಧರಿಸಿ ನಿರ್ಮಿಸಿರುವ ಪ್ರಯೋಗಾತ್ಮಕ ಚಲನಚಿತ್ರ ಇದಾಗಿದ್ದು, ರಾಜ್ಯದೆಲ್ಲೆಡೆ ಪ್ರವಾಸ ಕೈಗೊಂಡು ಸೂಟ್ ಕುರಿತಂತೆ ಜನರಿಂದ ಅಭಿಪ್ರಾಯ ಸಂಗ್ರಹಿಸಿ ಈ ಚಿತ್ರ ನಿರ್ಮಿಸಿದ್ದು, ನಾಲ್ಕು ಹಾಡುಗಳಿವೆ. ಮಲ್ಟಿಪ್ಲೆಕ್ಸ್ ಮೊದಲಾದ ಕಡೆಗಳಲ್ಲಿ ಇದು ಪ್ರದರ್ಶಿತಗೊಳ್ಳಲಿದೆ. ಹೀಗಾಗಿ ಚಿತ್ರಪ್ರಿಯರು ವೀಕ್ಷಿಸಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ನಿರ್ಮಾಪಕಿ ಮಾಲತಿಗೌಡ, ಬಿ.ರಾಮಸ್ವಾಮಿ, ಸುರೇಶ್, ಭೀಷ್ಮ ರಾಮಯ್ಯ ಉಪಸ್ಥಿತರಿದ್ದರು.

ಮೈಸೂರಲ್ಲಿ ಜಾವಾ ಯೆಜ್ಡಿ ಮೋಟಾರ್ ಸೈಕಲ್ಸ್ ಮೆಗಾ ಸೇವಾ ಶಿಬಿರ

- ಮೇ 10, 11ಕ್ಕೆ ಎರಡು ದಿನಗಳ ಸೇವಾ ಶಿಬಿರ
- 2019–2020ರ ಜಾವಾ ಗ್ರಾಹಕರಿಗೆ ಸೇವೆ

ಮೈಸೂರು, ಮೇ 8–ಜಾವಾ ಯೆಜ್ಡಿ ಮೋಟಾರ್ಸ್ ವತಿಯಿಂದ ಎರಡು ದಿನಗಳ ಮೆಗಾ ಸೇವಾ ಶಿಬಿರವನ್ನು ಮೇ 10 ಮತ್ತು 11ರಂದು ಸರಸ್ವತಿಪುರಂನಲ್ಲಿರುವ ಜೈನ್ ಮೊಬೈಕ್ಸ್, ಶ್ರೀ ರಾಮ ಕಾಂಪ್ಲೆಕ್ಸ್‌ನಲ್ಲಿ ಹಮ್ಮಿಕೊಳ್ಳಲಾಗಿದೆ. ದೇಶಾದ್ಯಂತ ಹಲವು ರಾಜ್ಯಗಳಲ್ಲಿ 1ನೇ ಹಂತದ ಯಶಸ್ವಿ ಸೇವಾ ಶಿಬಿರಗಳ ನಂತರ, 2ನೇ ಹಂತದ ಸೇವಾ ಶಿಬಿರಗಳನ್ನು ಮತ್ತಷ್ಟು ನಗರಗಳಿಗೆ ವಿಸ್ತರಿಸಲಾಗಿದೆ. ಶಿಬಿರದಲ್ಲಿ 2019 ಮತ್ತು 2020ರ ಮಾಡೆಲ್ ಜಾವಾ ಮೋಟಾರ್ ಸೈಕಲ್ಸ್ ಮಾಲೀಕರಿಗೆ ವಿಶೇಷವಾಗಿ ಸೇವೆ ಒದಗಿಸಲಾಗುತ್ತಿದೆ. ಶಿಬಿರದ ಅಂಗವಾಗಿ 2019–2020ರ ಜಾವಾ ಮೋಟಾರ್ ಸೈಕಲ್ಸ್ ಮಾಲೀಕರು ಸಮಗ್ರ ವಾಹನ ಆರೋಗ್ಯ ತಪಾಸಣೆ ಮತ್ತು ಆಯ್ದ ಭಾಗಗಳ ಉಚಿತ ಬದಲಾವಣೆಗೆ ಅರ್ಹರಾಗಿರುತ್ತಾರೆ. ಈಗಾಗಲೇ 6250 ಜಾವಾ ಮೋಟಾರ್ ಸೈಕಲ್‌ಗಳಿಗೆ ಸೇವೆ ಒದಗಿಸಿರುವ 1ನೇ ಹಂತದ ಸೇವಾ ಶಿಬಿರಗಳ ಯಶಸ್ಸಿನ ಮೇಲೆ ಜೂನ್ ಅಂತ್ಯದ ವೇಳೆಗೆ ಸುಮಾರು 10,000 ಬೈಕ್‌ಗಳಿಗೆ ಸೇವೆ ಸಲ್ಲಿಸುವ ಗುರಿ ಹಾಕಿಕೊಂಡಿದೆ ಎಂದು ಪ್ರಕಟಣೆ ತಿಳಿಸಿದೆ.



'ಬಾಲಂಗೋಚಿ' ಬೇಸಿಗೆ ಶಿಬಿರದಲ್ಲಿ ಮಕ್ಕಳಿಗೆ ಜನಪದ ಜಪ

ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ.ಸತೀಶ್ ಜವರೇಗೌಡ ಕಿವಿಮಾತು

ಮೈಸೂರು, ಮೇ 8–ಜನಪದ ಸಾಹಿತ್ಯದಲ್ಲಿ ಆಡು ನುಡಿಯ ಸೊಗಡಿದೆ. ಗ್ರಾಮೀಣ ಜನಜೀವನದ ಸಂಸ್ಕೃತಿಯಿದೆ. ಈ ಜನಪದ ಸಾಹಿತ್ಯದ ಬಗ್ಗೆ ಮಕ್ಕಳು ಅಭಿರುಚಿ ಬೆಳೆಸಿಕೊಳ್ಳಬೇಕು ಎಂದು ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಹಾಗೂ ಕವಿ ಟಿ.ಸತೀಶ್ ಜವರೇಗೌಡ ಕರೆ ನೀಡಿದರು.

ಅದಮ್ಯ ರಂಗಶಾಲೆ ಹಾಗೂ ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಸಂಯುಕ್ತಾಶ್ರಯದಲ್ಲಿ ನಗರದ ವಿ.ವಿ. ಮೊಹಲ್ಲಾದ ಮಾತೃ ಮಂಡಲಿ ವಿದ್ಯಾಸಂಸ್ಥೆಯಲ್ಲಿ ನಡೆಯುತ್ತಿರುವ 'ಬಾಲಂಗೋಚಿ' ಮಕ್ಕಳ ಬೇಸಿಗೆ ಶಿಬಿರದಲ್ಲಿ ನಡೆದ ಚಿಣ್ಣರಿಗಾಗಿ ಜನಪದ ಸಾಹಿತ್ಯ ಕಮ್ಮಟದಲ್ಲಿ ಅವರು ಮಾತನಾಡಿದರು.

ಜನಪದ ಸಾಹಿತ್ಯದಲ್ಲಿ ಗೀತೆ, ಕತೆ, ಶಿಶುಪ್ರಾಸ, ಗಾದೆ, ಒಗಟು, ಲಾವಣಿಗಳೆಲ್ಲವೂ ಇದ್ದು, ಓದು ಮತ್ತು ಬರಹ ಬಾರದ ಜನರು ಕಟ್ಟಿ ಹಾಡಿದ ಸಾಹಿತ್ಯವಾಗಿದೆ. ಇದು ಬಾಯಿಂದ ಬಾಯಿಗೆ ನಿರಂತರವಾಗಿ ಹರಿದು ಜನಮಾನಸದಲ್ಲಿ ಉಳಿದಿರುವ ಜೀವಂತಿಕೆ ಇರುವ ಸಾಹಿತ್ಯ ಎಂದು ಬಣ್ಣಿಸಿದರು.

ಜನಪದ ಸಾಹಿತ್ಯದಲ್ಲಿ ಮನ ಮುಟ್ಟುವ ಉತ್ತಮ ಭಾವನೆ, ವಿಚಾರ, ಜ್ಞಾನದ ಸೆಲೆಯಿದೆ. ಜಾನಪದ ಕಲೆಗಳೂ ಆಕರ್ಷಕವಾಗಿವೆ. ಪೋಷಕರು ತಮ್ಮ ಮಕ್ಕಳಿಗೆ ಕನ್ನಡ ಜನಪದ ಸಾಹಿತ್ಯವನ್ನು ಪರಿಚಯಿಸಬೇಕು. ಜಾನಪದ ಸಂಸ್ಕೃತಿಯ ಕುರಿತ ಕಿರುಪುಸ್ತಕಗಳ ದೊರಕಿಸಿಕೊಡಬೇಕೆಂದು ಸಲಹೆ ನೀಡಿದರು.



ಕಮ್ಮಟ ಉದ್ಘಾಟಿಸಿದ ಜನಪರ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಎಂ. ಮಹೇಶ್ ಚಿಕ್ಕಲೂರು ಮಾತನಾಡಿ, ಜನಪದ ಮನುಷ್ಯ ಸಂಬಂಧಗಳ ಮಹತ್ವ ತಿಳಿಸುತ್ತದೆ. ಜೊತೆಗೆ ಒಗ್ಗೂಡಿಸುವ ಕೆಲಸ ಮಾಡುತ್ತದೆ. ಆದ್ದರಿಂದ ಮಕ್ಕಳು ಟಿವಿ, ಮೊಬೈಲ್ ಹಾಗೂ ಕೆಟ್ಟ ಅಭಿರುಚಿಯ ಸಿನಿಮಾ ಹಾಡುಗಳಿಂದ ದೂರವಿದ್ದು, ಜಾನಪದದತ್ತ ವಾಲಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಮಾತೃ ಮಂಡಳಿ ವಿದ್ಯಾಸಂಸ್ಥೆಯ ಗೌರವಾಧ್ಯಕ್ಷೆ ಎಂ.ವಿಜಯಲಕ್ಷ್ಮಿ ಅರಸ್ ಮಾತನಾಡಿ, ಮೊಬೈಲ್ ಸ್ಕ್ರೀನಿಗೆ ಅಡಿಕ್ಟ್ ಆಗಿರುವ ನಗರದ ಮಕ್ಕಳಿಗೆ ಹಳ್ಳಿಯ ಜನಪದ ಕಲೆ ಮತ್ತು ಸಾಹಿತ್ಯದ ಪರಿಚಯವಿರುವುದಿಲ್ಲ. ಮಕ್ಕಳು ಇಂತಹ ಕಮ್ಮಟದಲ್ಲಿ ಭಾಗಿಯಾಗುವುದರಿಂದ ನಮ್ಮ ಹಳ್ಳಿಯ ಜನಪದ ಸಂಸ್ಕೃತಿ ತಿಳಿಯುತ್ತದೆ ಎಂದು ಹೇಳಿದರು.

ಕಮ್ಮಟದ ಸಂಪನ್ಮೂಲ ವ್ಯಕ್ತಿಗಳಾದ ಕವಯಿತ್ರಿ ಕೆರೋಡಿ ಎಂ. ಲೋಲಾಕ್ಷಿ 'ಮಕ್ಕಳ ಜನಪದ ಕತೆಗಳು' ಕುರಿತು, ಗಾಯಕ ಪರಮೇಶ್ ಕೆ.ಉತ್ತನಹಳ್ಳಿ 'ಜನಪದ ಗೀತೆಗಳು' ಕುರಿತು, ಕವಿ ಟಿ.ಸತೀಶ್ ಜವರೇಗೌಡ 'ಮಕ್ಕಳ ಜನಪದ ಶಿಶುಪ್ರಾಸ ಗಳ' ಕುರಿತು, ಲೇಖಕಿ ಗೌರಿ ಹೆಚ್.ಗೌಡ 'ಜನಪದ ಗಾದೆಗಳ' ಕುರಿತು ಪರಿಚಯಾತ್ಮಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಅದಮ್ಯ ರಂಗಶಾಲೆಯ ಕಾರ್ಯದರ್ಶಿ ಚಂದ್ರು ಮಂಡ್ಯ, ರಂಗ ಕಲಾವಿದರಾದ ಮನೋಜ್ ಅದಮ್ಯ, ಲೋಕನಾಥ್ ಸೋಗುಂ, ಕವಿಗಳಾದ ಸಿ.ಎಸ್. ರಾಘವೇಂದ್ರ, ಬಿ.ಎಲ್.ಪ್ರಭು ಉಪಸ್ಥಿತರಿದ್ದರು.


ಉಚಿತ ಮೂಳೆ ಸಾಂದ್ರತೆ ತಪಾಸಣಾ ಶಿಬಿರ

ಮೈಸೂರು, ಮೇ 8–ಮೈಸೂರಿನ ಎಸ್.ಎನ್.ಪಂಡಿತ್ ಆಯುರ್ವೇದ ವತಿಯಿಂದ ಮೇ 11ರಂದು ಬೆಳಗ್ಗೆ 10.30ರಿಂದ ಸಂಜೆ 6.30ರವರೆಗೆ ಉಚಿತ ಮೂಳೆ ಸಾಂದ್ರತೆ ತಪಾಸಣಾ ಶಿಬಿರವನ್ನು ಕಾಳಿದಾಸ ರಸ್ತೆಯಲ್ಲಿರುವ ಎಸ್.ಎನ್.ಪಂಡಿತ್ ಹೆಲ್ತ್ ಕೇರ್ ಸರ್ವೀಸಸ್‌ನಲ್ಲಿ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 90363 05966 ಸಂಪರ್ಕಿಸಬಹುದು.

ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಮೇ 8–ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ಸಂಯುಕ್ತಾಶ್ರಯದಲ್ಲಿ ಮೇ 14ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2ರವರೆಗೆ ಮಂಡಿ ಮೊಹಲ್ಲಾದ ಕಬೀರ್ ರಸ್ತೆಯಲ್ಲಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ.ಆರ್.ರಾಮಕೃಷ್ಣ, 7.15 ಭಾವಗೀತೆಗಳು, 10.00 ಶಾಸ್ತ್ರೀಯ ಸಂಗೀತ–ಬಳ್ಳಾರಿ ಸಹೋದರರ ಹಾಡುಗಾರಿಕೆ, 11.00 ಮಿತ್ರ ಮಾಧುರ್ಯ **ಮಧ್ಯಾಹ್ನ:** 12.30 ದೇವರನಾಮ, 1.00 ಚಿತ್ರಗೀತೆಗಳು, 1.20 ಭಾವಗೀತೆ–ಕೆ.ಎಸ್. ಸುರೇಖ, 4.00 ಜನಪದ ಸಂಗೀತ, 4.30 ಸಂಧ್ಯಾರಾಗ, 6.50 ಕಿಸಾನ್ ವಾಣಿ–ಕೋಳಿ ಸಾಕಾಣಿಕೆ ಕುರಿತು ಸಂವಾದ ಭಾಗವಹಿಸುತ್ತಾರೆ ಕೆ.ಆರ್.ನಗರ ತಾಲೂಕು ಬ್ಯಾಡರಹಳ್ಳಿಯ ಕೃಷಿಕ ದಂಪತಿ ಬಿ.ಯೋಗೀಶ್ ಹಾಗೂ ಬಿ.ಎನ್.ಗಾನವಿ, ಪ್ರಸ್ತುತಿ– ಎನ್.ಕೇಶವಮೂರ್ತಿ, 8.00 ಯುವವಾಣಿ –ಮೈಸೂರಿನ ಎಂ.ಎಂ.ಕೆ. ಮತ್ತು ಎಸ್.ಡಿ.ಎಂ. ಮಹಿಳಾ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿಯರಿಂದ ಕಾರ್ಯಕ್ರಮ ವೈವಿಧ್ಯ, 10.00 ನಾಟಕ 'ಹಳ್ಳಿಯಾದರೇನು ಶಿವ', ರಚನೆ–ಎಸ್.ಜಿ.ಶಿವಶಂಕರ್, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 10.30 ಸವಿನೆನಪು

ಇಂದಿನ ಪಂಚಾಂಗ

9.05.2024 ಗುರುವಾರ, ಮಳೆ ನಕ್ಷತ್ರ: ಭರಣಿ 27.04.2024ರಿಂದ 10.05.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ಪಾಡ್ಯ, ನಕ್ಷತ್ರ: ಕೃತ್ತಿಕಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೊಜ್ಜು ನಿವಾರಣಾ ಚಿಕಿತ್ಸಾ ಮತ್ತು ಥೈರಾಯಿಡ್ ಗ್ರಂಥಿ ವ್ಯಾಧಿಗಳ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ದಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ :** 13ನೇ ವಾರ್ಷಿಕ ಕ್ರೀಡಾಕೂಟ, ಉದ್ಘಾಟನೆ : ಇಂಡಿಯನ್ ಸ್ಪೋರ್ಟ್ಸ್ ಅಥಾರಿಟಿ ನಿವೃತ್ತ ಅಥ್ಲೆಟಿಕ್ ಕೋಚ್ ಜಿ.ಆರ್. ಪ್ರಭಾಕರ್, ಅಧ್ಯಕ್ಷತೆ : ಎನ್‌ಐಇ ಪ್ರಿನ್ಸಿಪಾಲ್ ಡಾ. ರೋಹಿಣಿ ನಾಗಪದ್ಮಾ, ಸ್ಥಳ: ಎನ್‌ಐಇ ಆವರಣ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ

■ **ಶೇಷಾದ್ರಿಪುರಂ ಪದವಿ ಕಾಲೇಜು :** ಆಂತರಿಕ ಗುಣಮಟ್ಟದ ಭರವಸೆ ಕೋಶದ ಉಪಕ್ರಮ 'ಕಲಾ ವೈಭವ' 9ನೇ ವರ್ಷದ ಕಾಲೇಜು ವಾರ್ಷಿಕೋತ್ಸವ, ಅಧ್ಯಕ್ಷತೆ: ಸಂಸ್ಥೆ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ.ವೂಡೆ ಪಿ.ಕೃಷ್ಣ, ಮುಖ್ಯ ಅತಿಥಿಗಳು: ಸಿವಿಲ್ ಇಂಜಿನಿಯರ್ ಧರ್ಮೇಂದ್ರ ಕುಮಾರ್, ಕಾಲೇಜು ಪ್ರಾಂಶುಪಾಲರಾದ ಅರ್ಚನಾ ಸ್ವಾಮಿ, ಸ್ಥಳ: ಕುವೆಂಪು ರಂಗಮಂದಿರ, ಕಾಲೇಜು ಆವರಣ, ಬೆಳಗ್ಗೆ 10ಕ್ಕೆ

■ **ಜೆಎಸ್‌ಎಸ್ ಮಹಿಳಾ ಇಂಜಿನಿಯರಿಂಗ್ ಕಾಲೇಜು :** ಗೀತಯಾನ–2024 ಸಮಾರೋಪ ಸಮಾರಂಭ, ಉಪಸ್ಥಿತರು : ಸಂಸ್ಕೃತಿ ಚಿಂತಕರಾದ ವಿದುಷಿ ಡಾ. ಜ್ಯೋತಿಶಂಕರ್, ಜೆಎಸ್‌ಎಸ್‌ಎಸ್ ಕಾರ್ಯದರ್ಶಿ ಶ್ರೀಮತಿ ವನಜಾ ಬಿ.ಪಂಡಿತ್, ಜೆಎಸ್‌ಎಸ್‌ಎಸ್ ಇಂಜಿನಿಯರಿಂಗ್ ಕಾಲೇಜು ಪ್ರಿನ್ಸಿಪಾಲ್ ಡಾ.ಎಂ.ಶಿವಕುಮಾರ್, ಬೋರ್ಡ್ ಸದಸ್ಯರಾದ ಶ್ರೀಮತಿ ಅನುಪಮ ಬಿ. ಪಂಡಿತ್, ಆರ್.ಕೆ. ಭರತ್, ಅಧ್ಯಕ್ಷತೆ : ಜೆಎಸ್‌ಎಸ್‌ಎಸ್ ಅಧ್ಯಕ್ಷ ಡಾ. ಎಂ. ಜಗನ್ನಾಥ್ ಶೆಣೈ, ಸ್ಥಳ: ಎಂ. ಗೋವಿಂದರಾವ್ ಮೆಮೋರಿಯಲ್ ಹಾಲ್, ಜೆಎಸ್‌ಎಸ್‌ಎಸ್ ಇಂಜಿನಿಯರಿಂಗ್ ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಮಹಾರಾಜ ಕಾಲೇಜು, ಪಠ್ಯೇತರ ಚಟುವಟಿಕೆಗಳ ಸಮಿತಿ:** ವಿಶ್ವಜ್ಞಾನಿ ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್‌ರವರ ಜನ್ಮ ದಿನಾಚರಣೆ, ಉದ್ಘಾಟನೆ: ಬುದ್ಧ ವಿಹಾರ ಚೇತವನದ ಪ್ರೊ.ಮನೋರ್ಖಿತ ಬಂತೇಜಿ, ಮುಖ್ಯ ಅತಿಥಿಗಳು: ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ. ನರೇಂದ್ರಕುಮಾರ್, ಅಧ್ಯಕ್ಷತೆ : ಮಹಾರಾಜ ಕಾಲೇಜು ಪ್ರಾಂಶುಪಾಲ ಪ್ರೊ.ಹೆಚ್.ಸೋಮಶೇಖರಪ್ಪ, ಉಪಸ್ಥಿತರು : ಆಡಳಿತಾಧಿಕಾರಿ ಪ್ರೊ. ವಿ.ಷಣ್ಮುಗಂ, ಪಠ್ಯೇತರ ಚಟುವಟಿಕೆಗಳ ಸಮಿತಿ ಸಂಚಾಲಕ ಪ್ರೊ. ಸಿ.ಇ. ಲೋಕೇಶ್, ಸ್ಥಳ: ಶತಮಾನೋತ್ಸವ ಭವನ, ಮಹಾರಾಜ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** 134ನೇ ವರ್ಷದ ಶ್ರೀ ರಾಮೋತ್ಸವ, ಬೆಳಗ್ಗೆ 8ಕ್ಕೆ ಅಭಿಷೇಕ, ಅರ್ಚನೆ, ಮಹಾಮಂಗಳಾರತಿ, ಸ್ಥಳ: ಸಭಾದ ಆವರಣ, ಶ್ರೀರಾಮಪೇಟೆ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್:** ಆರ್ಟಿಸ್ಟ್ರಿ ಚಿನ್ನಾಭರಣ ಪ್ರದರ್ಶನ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋ ರೂಂ, ಬಿ.ಎನ್. ರಸ್ತೆ, ಬೆಳಗ್ಗೆ 10 ರಿಂದ.

■ **ಶ್ರೀ ನಟರಾಜ ಪ್ರತಿಷ್ಠಾನ, ಶ್ರೀ ಹೊಸ ಮಠ :** ವಿದ್ವಾನ್ ಶ್ರೀ ಗುರುಶಾಂತ ಮಹಾಸ್ವಾಮಿಗಳವರ 29ನೇ ಪುಣ್ಯಾರಾಧನೆ, ಷಟ್‌ಸ್ಥಲ ಧ್ವಜಾರೋಹಣ, ಉದ್ಘಾಟನೆ : ಚಾಮರಾಜನಗರ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎಂ.ಆರ್. ಗಂಗಾಧರ್, ಅಧ್ಯಕ್ಷತೆ : ಶಾಸಕ ಟಿ.ಎಸ್. ಶ್ರೀವತ್ಸ, ಸಾಹಿತಿ ಪ್ರೊ. ಶುಭಚಂದ್ರ ಅವರಿಂದ ಬಸವಣ್ಣನವರ ದೃಷ್ಟಿಯಲ್ಲಿ ಪ್ರಜಾಪ್ರಭುತ್ವ ಕುರಿತು ಉಪನ್ಯಾಸ, ಮುಖ್ಯ ಅತಿಥಿಗಳು : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸ್ಥಳ: ಶ್ರೀ ಹೊಸ ಮಠ, ಅಗ್ರಹಾರ, ಬೆಳಗ್ಗೆ 10.30ಕ್ಕೆ

■ **ಶರಣ ಸಾಹಿತ್ಯ ಪರಿಷತ್ತು, ನಗರ ಘಟಕ, ವಿದ್ಯಾವಿಕಾಸ ಶಿಕ್ಷಣ ಮಹಾವಿದ್ಯಾಲಯ:** ಶರಣ ದರ್ಶನ ರಸಪ್ರಶ್ನೆ ಹಾಗೂ ಉಪನ್ಯಾಸ, ಕನ್ನಡ ಅಧ್ಯಯನ ಸಂಸ್ಥೆ ಪ್ರಾಧ್ಯಾಪಕಿ ಡಾ.ಎಸ್.ಡಿ.ಶಶಿಕಲಾ ಅವರಿಂದ ಉದ್ಘಾಟನೆ ಹಾಗೂ ವಚನಕಾರರ ಜ್ಞಾನ ಮತ್ತು ಕ್ರಿಯೆಯ ಪ್ರಸ್ತುತತೆ ಕುರಿತು ಉಪನ್ಯಾಸ, ಬಹುಮಾನ ವಿತರಣೆ: ವಿದ್ಯಾವಿಕಾಸ ಶಿಕ್ಷಣ ಮಹಾವಿದ್ಯಾಲಯ ಪ್ರಾಂಶುಪಾಲ ಡಾ.ರಾಜಗೋಪಾಲ್, ಅಧ್ಯಕ್ಷತೆ: ಶರಣ ಸಾಹಿತ್ಯ ಪರಿಷತ್ತು, ನಗರ ಘಟಕ ಅಧ್ಯಕ್ಷ ಮ.ಗು. ಸದಾನಂದಯ್ಯ, ಉಪಸ್ಥಿತರು: ಡಾ.ಲತಾ ರಾಜಶೇಖರ್, ಡಾ.ಕೆ.ಎನ್.ಮಹೇಶ್, ಸ್ಥಳ: ವಿದ್ಯಾವಿಕಾಸ ಶಿಕ್ಷಣ ಮಹಾವಿದ್ಯಾಲಯ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು:** ಮಾಜಿ ಕೇಂದ್ರ ಸಚಿವ ಹಾಗೂ ಸಂಸದರಾದ ದಿವಂಗತ ವಿ. ಶ್ರೀನಿವಾಸ ಪ್ರಸಾದ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಕಾರ್ಯಕ್ರಮ, ಉಪಸ್ಥಿತರು: ಮಡ್ಡೀಕೆರೆ ಗೋಪಾಲ್, ಪ್ರೊ.ನೀಲಗಿರಿ ತಳವಾರ್, ಡಾ.ಸಿ.ನಾಗಣ್ಣ, ಪ್ರೊ.ಜೆ.ಸೋಮಶೇಖರ್, ಸಿ.ಬಸವೇಗೌಡ, ಡಾ.ವೈ.ಡಿ.ರಾಜಣ್ಣ, ಎಂ.ಚಂದ್ರಶೇಖರ್, ರಾಜಶೇಖರ ಕದಂಬ, ಜಯಪ್ಪ ಹೊನ್ನಾಳಿ, ಶ್ರೀಮತಿ ಮ.ನ. ಲತಾಮೋಹನ್, ಸ್ಥಳ: ಜಿಲ್ಲಾ ಕಸಾಪ ಸಭಾಂಗಣ, ವಿಜಯನಗರ 1ನೇ ಹಂತ, ಸಂಜೆ 4.30ಕ್ಕೆ.

■ **ಜನಸೇವಕ ಯುವ ಬ್ರಿಗೇಡ್ :** ಬಸವ ಜಯಂತಿ ಅಂಗವಾಗಿ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣ ನೆನಪಿನಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಕಾಯಕಯೋಗಿ ಬಸವಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ಬಿಜೆಪಿ ಮುಖಂಡರಾದ ಕವೀಶ್‌ಗೌಡ, ಅರುಣ್‌ಗೌಡ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಯೋಗ ಆಸ್ಪತ್ರೆಯ ಮುಖ್ಯಸ್ಥ ಡಾ. ಎಸ್.ಪಿ. ಯೋಗಣ್ಣ, ಸ್ಥಳ: ಗಣಪತಿ ದೇವಸ್ಥಾನದ ಸಭಾಂಗಣ, ರೂಪಾನಗರ, ಸಂಜೆ 5.30ಕ್ಕೆ.

■ **ವಿಶ್ವಮೈತ್ರಿ ಬುದ್ಧವಿಹಾರ :** ವಿ. ಶ್ರೀನಿವಾಸ ಪ್ರಸಾದ್ ಅವರಿಗೆ ನುಡಿನಮನ, ನುಡಿನಮನ : ನಿವೃತ್ತ ಪ್ರಾಧ್ಯಾಪಕ ಪ್ರೊ. ಸಿ. ನಾಗಣ್ಣ, ಕಾಲೇಜು ಅಭಿವೃದ್ಧಿ ಪರಿಷತ್ ನಿರ್ದೇಶಕ ಪ್ರೊ. ಡಿ. ಆನಂದ್, ಅಧ್ಯಕ್ಷತೆ : ಮಾಜಿ ಮೇಯರ್ ಪುರುಷೋತ್ತಮ್, ಸ್ಥಳ: ವಿಶ್ವಮೈತ್ರಿ ಬುದ್ಧ ವಿಹಾರ, ಸಂಜೆ 6ಕ್ಕೆ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಮೇ 9 ಗುರುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 23 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆ ಅಪಹರಣ ಆರೋಪಿ

ರೇವಣ್ಣ ಜೈಲು ಪಾಲು

●ಏಳು ದಿನ ನ್ಯಾಯಾಂಗ ಬಂಧನ ●ರೇವಣ್ಣಗೆ ಪರಪ್ಪನ ಅಗ್ರಹಾರ ಜೈಲಿನ ವಿಐಪಿ ಸೆಲ್ ●ಜಾಮೀನು ಅರ್ಜಿ ವಿಚಾರಣೆ ಇಂದು



ಬೆಂಗಳೂರು, ಮೇ 8(ಕೆಎಂಶಿ)–ಅಪಹರಣ ಪ್ರಕರಣದಲ್ಲಿ ಬಂಧಿತರಾಗಿರುವ ಮಾಜಿ ಸಚಿವ ಎಚ್.ಡಿ.ರೇವಣ್ಣ ಅವರನ್ನು ಏಳು ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ. ರೇವಣ್ಣ ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆಯನ್ನು ನಾಳೆಗೆ ಮುಂದೂಡಿದ ಹಿನ್ನೆಲೆಯಲ್ಲಿ ಪರಪ್ಪನ ಅಗ್ರಹಾರ ಕಾರಾಗೃಹಕ್ಕೆ ಅವರನ್ನು ಸ್ಥಳಾಂತರಿಸಲಾಗಿದೆ.

ಎಸ್ಐಟಿ ಬಂಧನದ ಅವಧಿ ಇಂದಿಗೆ ಮುಕ್ತಾಯವಾದ ಹಿನ್ನೆಲೆಯಲ್ಲಿ ನಗರದ 17ನೇ ಎಸಿಎಂಎಂ ಕೋರ್ಟ್ ಮುಂದೆ ರೇವಣ್ಣ ಅವರನ್ನು ಹಾಜರುಪಡಿಸಲಾಯಿತು. ಬಂಧನದ ಸಮಯದಲ್ಲಿ ವಿಚಾರಣೆಗೆ ಸೂಕ್ತವಾಗಿ ಸ್ಪಂದಿಸಲಿಲ್ಲ, ಇನ್ನು ನಮಗೆ ಅವರ ಕಸ್ಟಡಿ ಅಗತ್ಯವಿಲ್ಲ ಎಂದು ನ್ಯಾಯಾಲಯಕ್ಕೆ ಎಸ್ಐಟಿ ತಿಳಿಸಿತು. ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶ ರವೀಂದ್ರ ಕಟ್ಟಿಮನಿ ಅವರು, ಜಾಮೀನು ಅರ್ಜಿಯನ್ನು ನಾಳೆಗೆ ಮುಂದೂಡಿ, ರೇವಣ್ಣ ಅವರನ್ನು ಮೇ 14ರವರೆಗೆ ನ್ಯಾಯಾಂಗ ಬಂಧನಕ್ಕೆ ಆದೇಶಿಸಿದರು. ಇದಕ್ಕೂ ಮುನ್ನ ಎಸ್ಐಟಿ ಕಸ್ಟಡಿ ಸಂಬಂಧ ಏನಾದರೂ ನೀವು ನ್ಯಾಯಾಲಯದ ಮುಂದೆ ಹೇಳುವುದಿದೆಯೇ ಎಂದು ನ್ಯಾಯಾಧೀಶರು, ರೇವಣ್ಣ ಅವರನ್ನು ಪ್ರಶ್ನಿಸಿದರು. ಮೂರು ದಿನಗಳಿಂದ ಅಧಿಕಾರಿಗಳು ನನ್ನನ್ನು ವಿಚಾರಣೆಗೆ ಒಳಪಡಿಸಿದ್ದರು, ಅವರ ಆರೋಪಗಳನ್ನು ಒಪ್ಪಿಕೊಳ್ಳಲು ನಾನು ಸಿದ್ಧವಿಲ್ಲ, ನಾನು ಮಾಡದಿದ್ದನ್ನು ಹೇಗೆ ಒಪ್ಪಿಕೊಳ್ಳಲಿ ಎಂದರು. ಈ ಸಂದರ್ಭದಲ್ಲಿ ಮಧ್ಯೆ ಪ್ರವೇಶಿಸಿದ ಸರ್ಕಾರಿ ವಕೀಲರು, ರೇವಣ್ಣ ಅವರು ಪತ್ರಿಕಾಗೋಷ್ಠಿಯನ್ನು ನಡೆಸಿದ್ದಾರೆ ಎಂದು ದೂರಿದಾಗ, ಮಾಧ್ಯಮದವರು ಅವರಾಗಿಯೇ ಕೇಳಿದಾಗ ನಾನು ಏನು ಹೇಳಬೇಕೋ, ಅದನ್ನು ಹೇಳಿದ್ದೇನೆ.

ಪ್ರಕರಣಕ್ಕೂ ನನಗೂ ಸಂಬಂಧ ಇಲ್ಲದಿದ್ದರೂ ರಾಜಕೀಯವಾಗಿ ನನ್ನ ಮೇಲೆ ಸುಳ್ಳು ಆರೋಪ ಹೊರಿಸಿದ್ದಾರೆ, ಇಂತಹ ಸುಳ್ಳುಗಳನ್ನು ನಾನು ಹೇಗೆ ಒಪ್ಪಿಕೊಳ್ಳಲಿ, ಅವರು ಕೇಳಿದ್ದನ್ನೇ ಕೇಳುತ್ತಿದ್ದರು, ನಾನು ಹೇಳಿದ್ದನ್ನೇ ಹೇಳುತ್ತಿದ್ದೆ. ಮೂರು ದಿನದ ಕಸ್ಟಡಿ ಮುಗಿಯಿತು. ನಾಳೆ ನ್ಯಾಯಾಲಯಕ್ಕೆ ನಿಮ್ಮನ್ನು ಹಾಜರುಪಡಿಸುತ್ತೇವೆ ಎಂದ ಅವರು, ಇಂದು ಬೆಳಗ್ಗೆ ನನಗೆ ಆರಾಮ ಇಲ್ಲ ಎಂದರೂ ಮತ್ತೆ ವಿಚಾರಣೆಗೆ ಒಳಪಡಿಸಿ, ●10ನೇ ಪುಟಕ್ಕೆ

ಮತ್ತಿಬ್ಬರು ಹೆಚ್ಚುವರಿ ವಿಶೇಷ ಸರ್ಕಾರಿ ಅಭಿಯೋಜಕರ ನೇಮಕ

ಬೆಂಗಳೂರು: ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣಗಳ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ದಳ (ಎಸ್ಐಟಿ) ದಾಖಲಿಸುವ ಪ್ರಕರಣಗಳ ವಿಚಾರಣೆಗೆ ನ್ಯಾಯಾಲಯದ ಮುಂದೆ ಹಾಜರಾಗಲು ಹಾಗೂ ಪ್ರಕರಣಗಳನ್ನು ನಡೆಸಲು ಇಬ್ಬರು ಹೆಚ್ಚುವರಿ ವಿಶೇಷ ಸರ್ಕಾರಿ ಅಭಿಯೋಜಕರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಸದರಿ ಪ್ರಕರಣಗಳ ವಿಚಾರಣೆಗೆ ಸರ್ಕಾರಿ ಅಭಿಯೋಜಕರ ತಂಡ ಬಲಪಡಿಸುವ ಉದ್ದೇಶದಿಂದ ಹಿರಿಯ ವಕೀಲರುಗಳಾದ ಅಶೋಕ್ ನಾಯಕ್ ಹಾಗೂ ಜಯನಾ ಕೊಠಾರಿ ಅವರನ್ನು ನೇಮಿಸಿ, ಸರ್ಕಾರ ಆದೇಶ ಹೊರಡಿಸಿದೆ.

ಮೈಸೂರು ಮೆಡಿಕಲ್ ಕಾಲೇಜು 'ಶವಾಗಾರ' ಶೋಚನೀಯ

●4 ತಿಂಗಳಿಂದ ಕೆಟ್ಟು ನಿಂತ ಶವಾಗಾರದ ಕೋಲ್ಡ್ ಸ್ಟೋರೇಜ್ ಯಂತ್ರಗಳು ●ಮೃತದೇಹಗಳು ಕೊಳೆತು ದುರ್ವಾಸನೆ; ಸಿಬ್ಬಂದಿಯ ಪರಿಪಾಟಲು ■ಪುಟ–7

ಇಂದು ಎಸ್ಎಸ್ಎಲ್ಸಿ ಫಲಿತಾಂಶ



ವೆಬ್‌ಸೈಟ್:
kseab.karnataka.gov.in ಹಾಗೂ karresults.nic.in

ಬೆಂಗಳೂರು, ಮೇ 8(ಕೆಎಂಶಿ)–ಲಕ್ಷಾಂತರ ವಿದ್ಯಾರ್ಥಿಗಳು ಕಾತರದಿಂದ ಕಾಯುತ್ತಿರುವ 2023–24ನೇ ಸಾಲಿನ ಎಸ್ಎಸ್ಎಲ್ಸಿ ಪರೀಕ್ಷೆ–1ರ ಫಲಿತಾಂಶ ಗುರುವಾರ ಬೆಳಗ್ಗೆ 10–30ಕ್ಕೆ ಪ್ರಕಟವಾಗಲಿದೆ. ಫಲಿತಾಂಶ ಪ್ರಕಟಣೆಗೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ ಸಿದ್ಧತೆ ನಡೆಸಿದೆ. ಮೌಲ್ಯಮಾಪನ ಪೂರ್ಣಗೊಂಡಿದ್ದರೂ, ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಫಲಿತಾಂಶ ಪ್ರಕಟಿಸುವುದು ತಡವಾಗಿತ್ತು. ಈ ವರ್ಷದ ಮಾರ್ಚ್ 25ರಿಂದ ಏಪ್ರಿಲ್ 6ರವರೆಗೆ ರಾಜ್ಯದ 2,570 ಕೇಂದ್ರಗಳಲ್ಲಿ ಎಸ್ಎಸ್ಎಲ್ಸಿ ಪರೀಕ್ಷೆ ನಡೆದಿತ್ತು.

ಫಲಿತಾಂಶವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ವೆಬ್‌ಸೈಟ್‌ನಲ್ಲೂ ನೋಡಬಹುದಾಗಿದೆ. ಪರೀಕ್ಷಾ ಪ್ರವೇಶ ಪತ್ರದಲ್ಲಿ ನೀಡಿರುವ ರಿಜಿಸ್ಟರ್ ನಂಬರ್ (ನೋಂದಣಿ ಸಂಖ್ಯೆ) ಮತ್ತು ಜನ್ಮ ದಿನಾಂಕ ನಮೂದಿಸುವ ಮೂಲಕ ವೆಬ್‌ಸೈಟ್‌ನಲ್ಲೂ ಫಲಿತಾಂಶ ವೀಕ್ಷಿಸಬಹುದು.

ನಕ್ಕರೆ ಅದೇ ಸ್ವರ್ಗ

ಮಗ : "ಡ್ಯಾಡಿ ನೀವು ತುಂಬಾ ಲಕ್ಕಿ"
ತಂದೆ : "ಹೇಗೆ?"
ಮಗ : "ಮತ್ತಿನ್ನೇನು? ಈ ವರ್ಷ ನೀವು ಹೊಸ ಪುಸ್ತಕಗಳನ್ನು ನನಗೆ ಖರೀದಿಸಬೇಕಿಲ್ಲ. ಕಳೆದ ವರ್ಷದ ಪುಸ್ತಕಗಳನ್ನೇ ಈ ವರ್ಷವೂ ಓದಬೇಕು. ಮತ್ತೆ ಅದೇ ಕ್ಲಾಸು"

ಮೈಸೂರು ಮಿತ್ರ

ಗುರುವಾರ, 9 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಜನತೆಗೆ ಯಾವುದು ಗೊತ್ತಿಲ್ಲವೋ ಅದನ್ನು ತಿಳಿಸುವುದು ವಿದ್ಯಾಭ್ಯಾಸದ ಉದ್ದೇಶವಲ್ಲ. ಹೇಗೆ ವರ್ತಿಸಬೇಕೆಂಬುದನ್ನು ತಿಳಿಸುವುದೇ ಅದರ ಗುರಿ. –ಜಾನ್ ರಸ್ಕಿನ್

ವೇದ ಸುಳ್ಳಾದರೂ { ಪ್ರಯಾಸ ಪಡದೆ
ಗಾದೆ ಸುಳ್ಳಾಗದು { ಪ್ರಯಾಗ ಸಿಗದು

ನಿಮ್ಮ ಪತ್ರಗಳು

ರಾಜ್ಯಪಾಲರ ವಿರುದ್ಧ ಪೊಲೀಸರು ತನಿಖೆ ನಡೆಸಬಹುದೇ?

ಮಾನ್ಯರೆ,

ಮಹಿಳಾ ನೌಕರರೊಬ್ಬರು ದಾಖಲಿಸಿರುವ ಲೈಂಗಿಕ ಕಿರುಕುಳದ ದೂರಿಗೆ ಸಂಬಂಧಿಸಿದಂತೆ, ಪಶ್ಚಿಮ ಬಂಗಾಳದ ರಾಜ್ಯಪಾಲರಾದ ಸಿ.ವಿ.ಆನಂದ ಬೋಸ್ ವಿರುದ್ಧ ತನಿಖೆ ನಡೆಸಲು ಪಶ್ಚಿಮ ಬಂಗಾಳದ ಸರ್ಕಾರ ವಿಶೇಷ ತನಿಖಾ ತಂಡವನ್ನು ರಚಿಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ರಾಜ್ಯದ ಸಂವಿಧಾನಿಕ ಮುಖ್ಯಸ್ಥರಾದ ರಾಜ್ಯಪಾಲರ ವಿರುದ್ಧ ಅದೇ ರಾಜ್ಯದ ಪೊಲೀಸರು ತನಿಖೆ ನಡೆಸಬಹುದೇ ಎಂಬುದು ಜಿಜ್ಞಾಸೆಯ ಪ್ರಶ್ನೆ. ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಬೋಸ್, ಈ ನಿಟ್ಟಿನಲ್ಲಿ ಪೊಲೀಸರ ಸಮನ್ಸ್ ಅನ್ನು ನಿರ್ಲಕ್ಷಿಸಬೇಕೆಂದು ರಾಜಭವನದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ ಎಂದು ರಾಜಭವನದ ಮೂಲಗಳು ತಿಳಿಸಿವೆ. ಸಂವಿಧಾನದ 362(2) ಮತ್ತು (3) ವಿಧಿಗಳು ರಾಜ್ಯಪಾಲರ ವಿರುದ್ಧ ಪೊಲೀಸರು ವಿಚಾರಣೆ ಮತ್ತು ತನಿಖಾ ಪ್ರಕ್ರಿಯೆಗಳನ್ನು ನಡೆಸುವಂತಿಲ್ಲ ಎಂಬುದನ್ನು ಉಲ್ಲೇಖಿಸಿರುವ ರಾಜ್ಯಪಾಲರು, ರಾಜ್ಯಪಾಲರು ಅಧಿಕಾರದಲ್ಲಿ ಇರುವಾಗ ಅವರ ವಿರುದ್ಧ ಯಾವುದೇ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತಿಲ್ಲ ಎಂದಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ವಿರುದ್ಧ ಹೊರೆಸಲಾಗಿರುವ ಆರೋಪಗಳನ್ನು ಕುರಿತು ರಚಿಸಲಾಗಿರುವ ವಿಶೇಷ ತನಿಖಾ ತಂಡದ ಸಿಂಧುತ್ವ ಪ್ರಶ್ನಾರ್ಹವಾಗುತ್ತದೆ.

ಇಂತಹುದೇ ಮತ್ತೊಂದು ಪ್ರಕರಣದಲ್ಲಿ ಮೂರು ಬಾರಿ ಉತ್ತರ ಪ್ರದೇಶದ ಮುಖ್ಯಮಂತ್ರಿಗಳಾಗಿದ್ದ ಹಾಗೂ ಆನಂತರದಲ್ಲಿ ಆಂಧ್ರಪ್ರದೇಶದ ರಾಜ್ಯಪಾಲರಾಗಿದ್ದ ಎನ್.ಡಿ.ತಿವಾರಿಯವರ ಹೆಸರು ಕೇಳಿ ಬಂದಾಗ, ಎನ್.ಡಿ. ತಿವಾರಿಯವರು ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಒಟ್ಟಿನಲ್ಲಿ ರಾಜ್ಯಪಾಲರ ಹೆಸರು ಇಂತಹ ಪ್ರಕರಣಗಳಲ್ಲಿ ಕೇಳಿ ಬಂದಾಗ, ಅವರು ಸ್ವಯಂಪ್ರೇರಿತರಾಗಿ ರಾಜೀನಾಮೆ ನೀಡುವುದು ಒಳ್ಳೆಯದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಬೇಲಿಯೇ ಎದ್ದು ಹೊಲ ಮೇಯ್ದಂತೆ

ಮಾನ್ಯರೆ,

ಕಳೆದ ಆರು ತಿಂಗಳ ಹಿಂದೆಯಷ್ಟೇ, ರಾಜ್ಯ ಮತ್ತು ದೇಶವನ್ನೇ ತಲ್ಲಣಗೊಳಿಸಿದ್ದ ಸುದ್ದಿ ಎಂದರೆ, ಮೈಸೂರು ಮತ್ತು ಮಂಡ್ಯದಲ್ಲಿ ನಡೆದಿದೆ ಎನ್ನಲಾದ ಹೆಣ್ಣು ಮಕ್ಕಳ ಭ್ರೂಣ ಹತ್ಯೆ ಪ್ರಕರಣ. ಮಂಡ್ಯ ಜಿಲ್ಲೆಯ ಪಾಂಡವಪುರದ ಡಿಎಚ್‌ಓ ಕಚೇರಿಯ ಹಿಂಭಾಗದ ವಸತಿ ಗೃಹದಲ್ಲೇ ಹೆಣ್ಣು ಮಕ್ಕಳ ಭ್ರೂಣ ಹತ್ಯೆ ನಡೆಯುತ್ತಿದೆ ಎಂದರೆ, "ಬೇಲಿಯೇ ಎದ್ದು ಹೊಲ ಮೇಯ್ದಂತೆ".

ಆತಂಕಪಡುವ ವಿಷಯ ಎಂದರೆ, ರಾಜ್ಯದ ಸುಮಾರು 14 ಜಿಲ್ಲೆಗಳಲ್ಲಿ 6 ವರ್ಷದ ಒಳಗಿನ ಹೆಣ್ಣು ಮಕ್ಕಳ ಸಂಖ್ಯೆಯಲ್ಲಿ, ಗಂಡು ಮಕ್ಕಳ ಸಂಖ್ಯೆಗಿಂತ ತುಂಬಾ ಕಡಿಮೆ ಇರುವುದು. ಬಾಗಲಕೋಟೆ, ಬಿಜಾಪುರ, ವಿಜಯಪುರ, ಮೈಸೂರು ಹಾಗೂ ಮಂಡ್ಯ ಜಿಲ್ಲೆಗಳಲ್ಲಿ 1000 ಗಂಡು ಮಕ್ಕಳಿಗೆ ಕೇವಲ 624 ರಿಂದ 750 ಹೆಣ್ಣು ಮಕ್ಕಳಿರುವುದು. ದೇಶದ ಜನಗಣತಿ 2011ರ ಪ್ರಕಾರ, ಇಡೀ ದೇಶದಲ್ಲಿ 1000 ಗಂಡಸರಿಗೆ 924 ಹೆಂಗಸರ ಸಂಖ್ಯೆ ಇದೆ. ಈಗ ಇದು ಇನ್ನೂ ಕಡಿಮೆ ಇರಬಹುದು. ರಾಜ್ಯದ ಸಚಿವರೊಬ್ಬರು ನಾವು ಎಷ್ಟೇ ಕಠಿಣ ಕ್ರಮ ಕೈಗೊಂಡರೂ ಇಂತಹ ಭ್ರೂಣ ಹತ್ಯೆಗಳು ಮರುಕಳಿಸುತ್ತಿವೆ ಎಂದು ತಮ್ಮ ಬೇಜವಾಬ್ದಾರಿ ಮತ್ತು ತಮ್ಮ ಅಸಹಾಯಕತೆಯ ಹೇಳಿಕೆ ನೀಡಿದ್ದಾರೆ. ಈಗಾಗಲೇ ದಾಖಲಾಗಿರುವ ಇಂತಹ ಪ್ರಕರಣಗಳಲ್ಲಿ ಸರ್ಕಾರ ಯಾವ ಕಾನೂನು ಕ್ರಮ ಕೈಗೊಂಡಿದೆ. ಯಾರಿಗೆ ಕಾನೂನು ಪ್ರಕಾರ ಶಿಕ್ಷೆ ಆಗಿದೆ ಎಂಬುದನ್ನು ಬಹಿರಂಗಪಡಿಸಲಿ. ನನಗೆ ತಿಳಿದಿರುವಂತೆ, ಈ ಪ್ರಕರಣದಲ್ಲಿ ಯಾರಿಗೂ ಶಿಕ್ಷೆಯಾದ ಉದಾಹರಣೆಗಳೇ ಇಲ್ಲ. 1994ರ ಕಾನೂನಿನ ಪ್ರಕಾರ, ಭ್ರೂಣ ಹತ್ಯೆ ಮತ್ತು ಪತ್ತೆ ಮಾಡುವವರಿಗೆ ಮೂರರಿಂದ ಐದು ವರ್ಷಗಳ ಕಾಲ ಜೈಲು ಶಿಕ್ಷೆ, 10 ರಿಂದ 50 ಸಾವಿರದವರೆಗೆ ದಂಡ ಮತ್ತು ಅವರ ವೈದ್ಯಕೀಯ ಪರವಾನಗಿಯನ್ನು ರದ್ದುಪಡಿಸುವುದು, ಅವರನ್ನು ಕಪ್ಪು ಪಟ್ಟಿಗೆ ಸೇರಿಸುವುದು, ಈ ಕಾನೂನು ಜಾರಿಗೆ ಬಂದು 30 ವರ್ಷಗಳಾದರೂ ಇದುವರೆಗೂ ಒಬ್ಬರಿಗೂ ಶಿಕ್ಷೆಯಾಗಿರುವ ಉದಾಹರಣೆಗಳಿಲ್ಲ. ಅಂದರೆ 30 ವರ್ಷಗಳಿಂದಲೂ ಯಾರೂ ಕೂಡ ಸಿಕ್ಕಿಹಾಕಿಕೊಂಡಿಲ್ಲ ಎಂದಾಯಿತು. ಕಠಿಣ ಕಾನೂನುಗಳನ್ನು ಜಾರಿ ಮಾಡದ ಹೊರತು, ಹೆಣ್ಣು ಮಕ್ಕಳ ಭ್ರೂಣ ಹತ್ಯೆಯನ್ನು ತಡೆಯಲು ಸಾಧ್ಯವೇ ಇಲ್ಲ. **–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು**

ಪ್ರಜ್ವಲ್, ರೇವಣ್ಣ ಪ್ರಕರಣವನ್ನು ದಿಕ್ಕು ತಪ್ಪಿಸುತ್ತಿರುವ ಬಿಜೆಪಿ, ಜೆಡಿಎಸ್

ಮಾನ್ಯರೆ,

ಪ್ರಜ್ವಲ್ ಹಾಗೂ ರೇವಣ್ಣ ಪ್ರಕರಣವನ್ನು ಮುಚ್ಚಿ ಹಾಕುವ ದೃಷ್ಟಿಯಿಂದ ಬಿಜೆಪಿ, ಜೆಡಿಎಸ್ ಪಕ್ಷ ಹಾಗೂ ಕುಮಾರಸ್ವಾಮಿ ಇಲ್ಲಸಲ್ಲದ ಹೇಳಿಕೆಗಳನ್ನು ನೀಡಿ ಪ್ರಕರಣವನ್ನು ದಿಕ್ಕು ತಪ್ಪಿಸುವ ಪ್ರಯತ್ನ ಮಾಡುತ್ತಿದಾರೆ. ವಾಸ್ತವವಾಗಿ ಪ್ರಕರಣ ನಡೆದಿದೆಯಾ ಅಥವಾ ಇಲ್ಲವೇ ಎಂಬುದು ಮಾತ್ರ ತನಿಖೆ ಮತ್ತು ಅಗ್ರಹ ಆಗಬೇಕು ಒಂದು ವೇಳೆ ಪ್ರಕರಣ ನಡೆದಿರುವುದು ಸತ್ಯವಾಗಿದ್ದರೆ ಅಂತಹವರಿಗೆ ಶಿಕ್ಷೆ ಆಗಬೇಕು, ಆದರೆ ಮೂಲ ವಿಚಾರವನ್ನೇ ಮರೆಮಾಚುವ ಸಲುವಾಗಿ ಇದರಲ್ಲಿ ರಾಜಕೀಯ ಷಡ್ಯಂತ್ರ ಇದೆ, ಡಿ.ಕೆ. ಶಿವಕುಮಾರ್ ಕೈವಾಡ ಇದೆ, ಅವರ ಕೈವಾಡ ಇದೆ, ಇವರ ಕೈವಾಡ ಇದೆ ಎಂದು ಗೂಬೆ ಕೂರಿಸಿ ಯಾಮಾರಿಸುವ ಅಥವಾ ಬೆದರಿಸುವ ತಂತ್ರ ನಡೆಸುತ್ತಿವೆ. ಪ್ರಕರಣವನ್ನು ಯಾರು ಯಾವ ರೀತಿಯಲ್ಲಾದರೂ ಬಯಲಿಗೆ ಎಳೆದಿದ್ದರೂ, ಬೆಳಕಿಗೆ ತಂದಿದ್ದರೂ ಅದು ಸ್ವಾಗತಾರ್ಹ. ಅದರ ಬಗೆಗಿನ ಚರ್ಚೆ ಅನವಶ್ಯಕ. **–ದೇವಗಳ್ಳಿ ಸೋಮಶೇಖರ್, DSS, ಮೈಸೂರು**

ಅಂಬೇಡ್ಕರ್ ಕಾನೂನಿನ ಮುಂದೆ ಯಾರೂ ದೊಡ್ಡವರಲ್ಲ!

ಮಾನ್ಯರೆ,

ನಮ್ಮ ಭಾರತ ಉತ್ತಮವಾದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದುವುದರ ಜೊತೆಗೆ ಬಲಿಷ್ಠವಾದ ಹಾಗೂ ಎಲ್ಲರೂ ಅಂದರೆ ರಾಷ್ಟ್ರಪತಿಯಾಗಲಿ, ಪ್ರಧಾನ ಮಂತ್ರಿಯಾಗಲಿ, ಮುಖ್ಯಮಂತ್ರಿಯಾಗಲಿ ಹಾಗೂ ದೇಶದ ಸಾಮಾನ್ಯ ನಾಗರಿಕನಾಗಲಿ ಕಾನೂನಿನ ಮುಂದೆ ಒಂದೇ ಎಂಬುದನ್ನು ಪ್ರತಿಪಾದಿಸಿದೆ. ಹೀಗಿರುವಾಗ ಸಾಕಷ್ಟು ಹೆಣ್ಣು ಮಕ್ಕಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಲ್ಲಿ ಪ್ರಮುಖ ಆರೋಪಿಯಾಗಿರುವ ಶಾಸಕ ರೇವಣ್ಣ ಮತ್ತು ಆತನ ಮಗ ಸಂಸದ ಪ್ರಜ್ವಲ್ ರೇವಣ್ಣನನ್ನು ನಮ್ಮ ಅಂಬೇಡ್ಕರ್ ಕಾನೂನು, ಕಾನೂನಿನ ಚೌಕಟ್ಟಿನಲ್ಲಿ ಹೆಡೆಮುರಿ ಕಟ್ಟದೇ ಬಿಡುವುದಿಲ್ಲ. ಎಷ್ಟೇ ಪ್ರಭಾವಿ ವ್ಯಕ್ತಿಗಳಾಗಿದ್ದರೂ ತಪ್ಪು ಮಾಡಿದರೆ ಅಂಬೇಡ್ಕರ್ ಕಾನೂನಿನ ಮುಂದೆ ತಲೆತಗ್ಗಿಸಿ ನಿಲ್ಲಲೇಬೇಕು. ಕಾನೂನನ್ನು ರೂಪಿಸುವ ಜಾಗದಲ್ಲಿ ಕೂತು, ಅಗೌರವಿಸಿರುವ ಇವರಿಗೆ ಅಂಬೇಡ್ಕರ್‌ರವರ ಕಾನೂನಿನ ಕೋಳವನ್ನು ಬೇಗ ತೊಡಿಸಿ ನಮ್ಮ ಸಂವಿಧಾನದ ಕಾನೂನುಗಳ ಮುಂದೆ ಯಾರೂ ದೊಡ್ಡವರಿಲ್ಲ ಎಂಬುದನ್ನು ತೋರಿಸಬೇಕಾಗಿದೆ.

–ಪವನ್ ಜಯರಾಂ, ಸಿದ್ದಯ್ಯನಪುರ. ಚಾಮರಾಜನಗರ.



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ಮಂಥನ

ಷೇಕ್ಸ್‌ಪಿಯರ್ ಎಂಬ ವಿಸ್ಮಯ!

ನಾವೆಲ್ಲಾ ದಿನವೂ ಒಂದಲ್ಲಾ ಒಂದು ಪಾತ್ರವನ್ನು ನಿರ್ವಹಿಸುತ್ತಲೇ ಇರುತ್ತೇವೆ. ಈಗ ನೀವು ಓದುಗರ ಪಾತ್ರಧಾರಿಯಾಗಿದ್ದರೆ ನಾನು ಲೇಖಕಿಯ ಪಾತ್ರಧಾರಿಯಾಗಿದ್ದೇನೆ. ಜಗದೀಶನಾಡುವ ಜಗವೇ ನಾಟಕ ರಂಗ ಎಂಬ ಸಾಲು ನೆನಪಾಯಿತೇ? ಹೌದು ಗೀತಪ್ರಿಯ ಅವರ ಈ ಸಾಲುಗಳು ಜನಪ್ರಿಯ.

ಆದರೆ 1599ರಲ್ಲಿಯೇ ಷೇಕ್ಸ್‌ಪಿಯರ್ ತನ್ನ As You Like It ನಾಟಕದಲ್ಲಿ, ತನ್ನ ಪಾತ್ರಧಾರಿ ಜ಼ಾಕ್ಸ್‌ನ ಬಾಯಲ್ಲಿ

All the world's a stage
And all men and women
Merely players?

ಎಂದು ಹೇಳಿಸಿದ್ದಾನೆ.

ಷೇಕ್ಸ್‌ಪಿಯರನ ಹೆಸರನ್ನು ಕೇಳದವರು ಇಲ್ಲವೇ ಇಲ್ಲ. ಅವನ ಬಗ್ಗೆ ಹೆಚ್ಚೇನು ತಿಳಿಯದಿದ್ದರೂ ಅವನ್ಯಾರೋ ಅಸಾಮಾನ್ಯ ಎಂದಂತೂ ತಿಳಿದೇ ಇರುತ್ತದೆ. ಪ್ರತೀ ರಂಗಕರ್ಮಿಗೂ ಷೇಕ್ಸ್‌ಪಿಯರ್ ಅನ್ನು ರಂಗದ ಮೇಲೆ ತರುವ ಹಂಬಲ ಇದ್ದೇ ಇರುತ್ತದೆ.

ಏಪ್ರಿಲ್ 23 ಇಂಗ್ಲಿಷ್ ನಾಟಕಕಾರ ವಿಲಿಯಮ್ ಷೇಕ್ಸ್‌ಪಿಯರ್ ಹುಟ್ಟಿದ ದಿನ. 1564ರಲ್ಲಿ ಇಂಗ್ಲೆಂಡ್‌ನ ಸ್ಟ್ರಾಟ್ ಫರ್ಡ್ ಅಪಾನ್ ಎವೊನ್‌ನಲ್ಲಿ ಜಾನ್ ಷೇಕ್ಸ್‌ಪಿಯರ್ ಮತ್ತು ಮೇರಿ ಆರ್ಡೆನ್ ದಂಪತಿಗೆ ಜನಿಸಿದ. ಅಲ್ಲಿಯೇ ಪ್ರಾಥಮಿಕ ಶಿಕ್ಷಣ ಪಡೆದ ಷೇಕ್ಸ್‌ಪಿಯರ್ ತನ್ನ 18ನೆಯ ವಯಸ್ಸಿನಲ್ಲಿ ತನಗಿಂತ 8 ವರ್ಷ ದೊಡ್ಡವಳಾದ ಅನ್ನಾ ಹ್ಯಾತ್ವೇ ಎಂಬಾಕೆಯನ್ನು ವರಿಸುತ್ತಾನೆ. ಸುಷಾನ್ನ ಎಂಬ ಪುತ್ರಿ, ಹ್ಯಾಮ್ನೆಟ್ ಮತ್ತು ಜುಡಿತ್ ಎಂಬ ಅವಳಿಗಳು ಷೇಕ್ಸ್‌ಪಿಯರ್ ದಂಪತಿಗೆ ಜನಿಸುತ್ತಾರೆ. ನಂತರ ಸ್ವಲ್ಪ ಕಾಲ ಸ್ಟ್ರಾಟ್ ಫರ್ಡ್‌ನಲ್ಲಿಯೇ ಇದ್ದ ಷೇಕ್ಸ್‌ಪಿಯರ್ ನಂತರ ತನ್ನ ಭವಿಷ್ಯವನ್ನು ಹುಡುಕಿಕೊಂಡು ಲಂಡನ್‌ಗೆ ಬರುತ್ತಾನೆ. ಅವನು ಯಾವಾಗ ಲಂಡನ್‌ಗೆ ಹೋದ, ಹೇಗೆ ಅವನಲ್ಲಿ ಬರವಣಿಗೆಯ ಹವ್ಯಾಸ ಬೆಳೆಯಿತು ಎನ್ನುವ ಬಗ್ಗೆ ಯಾವುದೇ ಸ್ಪಷ್ಟ ಮಾಹಿತಿ ಲಭ್ಯವಿಲ್ಲ. ಆದರೆ 1592ರ ಹೊತ್ತಿಗೆ ಅವನ ನಾಟಕಗಳು ಅದಾಗಲೇ ರಂಗದ ಮೇಲಿದ್ದವು.

ಲಂಡನ್ ತಲುಪಿದ ಷೇಕ್ಸ್‌ಪಿಯರ್ ತನ್ನ ಸಮಕಾಲೀನರಾದ ರಾಬರ್ಟ್ ಗ್ರೀನ್, ಥಾಮಸ್ ಮಿಡ್ಲ್ ಟನ್ ಬೆನ್ ಜಾನ್ಸನ್‌ರಿಗಿಂತ ಹೆಚ್ಚಿನ ಗೌರವವನ್ನು ಸಂಪಾದಿಸಿದ. ಆ ದಿನಗಳಲ್ಲಿ ಷೇಕ್ಸ್‌ಪಿಯರ್ ಮುಟ್ಟಿದ್ದೆಲ್ಲಾ ಚಿನ್ನವಾಗುತ್ತಿತ್ತು. ಅವನ ನಾಟಕಗಳು ತುಂಬಿದ ಗೃಹಗಳಲ್ಲಿ ಪ್ರದರ್ಶನವಾಗುತ್ತಿದ್ದವು. ಅವನ ಖ್ಯಾತಿ ಉತ್ತುಂಗದಲ್ಲಿತ್ತು. ಷೇಕ್ಸ್‌ಪಿಯರ್, 37 ನಾಟಕಗಳಲ್ಲದೆ, 154 ಸಾನೆಟ್ಟುಗಳು ಮತ್ತು ನೀಳ್ಗವಿತೆಗಳನ್ನು ಬರೆದಿದ್ದಾನೆ. ಇಂಗ್ಲಿಷ್ ಭಾಷೆಗೆ ಷೇಕ್ಸ್‌ಪಿಯರ್‌ನ ಕೊಡುಗೆ ಮಹತ್ತರವಾದುದು. 1700ಕ್ಕೂ ಹೆಚ್ಚು ಪದಗಳನ್ನು ಷೇಕ್ಸ್‌ಪಿಯರ್ ಟಂಕಿಸಿದ್ದಾನೆ. ಅವರು ಬರೆದಿರುವ ಎನ್ನಲಾದ 5 ನಾಟಕಗಳು ಇದುವರೆಗೂ ದೊರೆತಿಲ್ಲ.

ಇಷ್ಟೆಲ್ಲವನ್ನೂ ಸಾಧಿಸಿದ ಷೇಕ್ಸ್‌ಪಿಯರ್ ತನ್ನ 52ನೆಯ ವಯಸ್ಸಿನಲ್ಲಿ ಇಹಲೋಕ ತೊರೆದ. ಸ್ವಾರಸ್ಯವೆಂದರೆ, ಷೇಕ್ಸ್‌ಪಿಯರ್ ಹುಟ್ಟಿದ ಮತ್ತು ಇಹಲೋಕ ತೊರೆದ ದಿನ ಒಂದೇ! ಅದು ಏಪ್ರಿಲ್ 23!!

400 ವರ್ಷಗಳ ನಂತರವೂ ಷೇಕ್ಸ್‌ಪಿಯರ್ ಯಾಕಿಷ್ಟು ಕಾಡುತ್ತಾನೆ ಎಂಬುದಕ್ಕೆ ಹಲವು ಉತ್ತರಗಳನ್ನು ಈಗಾಗಲೇ ವಿಮರ್ಶಕರು ಕಂಡುಹಿಡಿದಿದ್ದಾರಾದರೂ, ಇಂದಿಗೂ ಅವನ ಕೃತಿಗಳನ್ನು ಮತ್ತೆ ಮತ್ತೆ ಓದಿ ಅವುಗಳಲ್ಲಿ ಅಡಗಿರುವ ಹೊಸ ಹೊಸ ವಿಚಾರಗಳನ್ನು ಅನಾವರಣ ಮಾಡುತ್ತಲೇ ಇದ್ದಾರೆ. ಷೇಕ್ಸ್‌ಪಿಯರ್‌ನ 37 ನಾಟಕಗಳನ್ನು ನಾವು, ಐತಿಹಾಸಿಕ, ಹಾಸ್ಯ ಮತ್ತು ದುರಂತ ನಾಟಕಗಳೆಂದು ವಿಂಗಡಿಸಬಹುದು. ಐತಿಹಾಸಿಕ ನಾಟಕಗಳಿಂದ ನಾಟಕಕಾರನ ಜೀವನವನ್ನು ಪ್ರಾರಂಭಿಸಿದ ಷೇಕ್ಸ್‌ಪಿಯರ್ 10 ಐತಿಹಾಸಿಕ ನಾಟಕಗಳನ್ನು ರಚಿಸಿದ್ದಾನೆ. 17 ಹಾಸ್ಯ ನಾಟಕಗಳಾದರೆ 10 ದುರಂತ ನಾಟಕಗಳನ್ನು ರಚಿಸಿದ್ದಾನೆ. ದುರಂತ ನಾಟಕಗಳಲ್ಲಿಯೂ 4 ಮುಖ್ಯ ನಾಟಕಗಳನ್ನು ಉತ್ಕೃಷ್ಟ ಕೃತಿಗಳೆಂದು ಗುರುತಿಸಲಾಗಿದೆ. ಮ್ಯಾಕ್‌ಬೆತ್, ಹ್ಯಾಮ್ಲೆಟ್, ಕಿಂಗ್ ಲಿಯರ್ ಮತ್ತು ಒಥೆಲೋ ಸರ್ವಶ್ರೇಷ್ಠ ನಾಟಕಗಳೆಂದು ನಿರ್ವಿವಾದವಾಗಿ ಅಂಗೀಕರಿಸಲ್ಪಟ್ಟಿವೆ.

ಅರಿಸ್ಟಾಟಲ್ ತನ್ನ ಪೊಯೆಟಿಕ್ಸ್‌ನಲ್ಲಿ ನಾಟಕ ರಚನೆಗೆ ಕೆಲವು ನಿಯಮಗಳನ್ನು ವಿವರಿಸಿದ್ದಾನೆ. ಅವನ ಪ್ರಕಾರ 5 ಅಂಕಗಳುಳ್ಳ ನಾಟಕದಲ್ಲಿ, ಕಥಾವಸ್ತು (Plot), ಪಾತ್ರ (Character), ವಿಚಾರ (Thought), ಪದಪುಂಜ (Diction), ದೃಶ್ಯ (Spectacle), ಮತ್ತು ಸಂಗೀತ (Melody) ನಾಟಕಗಳಲ್ಲಿ ಇರಬೇಕಿತ್ತು. ಗ್ರೀಕ್ ನಾಟಕಗಳ ರಚನೆ ಬಹುತೇಕ ಅಂತೆಯೇ ಇರುತ್ತಿದ್ದವು. ನಂತರ ಯೂರೋಪಿನ ಸಾಹಿತಿಗಳು ನಾಟಕ ರಚನೆ ಪ್ರಾರಂಭಿಸಿದಾಗ ಅವರೂ ಅದಕ್ಕೆ ಹೊರತಾಗಲಿಲ್ಲ. ಅರಿಸ್ಟಾಟಲ್ ಹೇಳಿದ ನಿಯಮಗಳಿಗೇ ನಿಷ್ಠರಾಗಿ ನಾಟಕ ರಚನೆ ಮಾಡುತ್ತಿದ್ದರು. ಷೇಕ್ಸ್‌ಪಿಯರ್ ಕೂಡ ಅದೇ ಹಾದಿ ತುಳಿದ. ಅವನ ನಾಟಕಗಳಲ್ಲಿಯೂ ಅರಿಸ್ಟಾಟಲ್ ಹೇಳಿದ ಅಂಶಗಳನ್ನು ಅಳವಡಿಸಿಕೊಂಡ.

ತನ್ನ ಐತಿಹಾಸಿಕ ನಾಟಕಗಳಿಗೆ ಸ್ಕಾಟ್ಲೆಂಡ್ ಮತ್ತು ಇಂಗ್ಲೆಂಡಿನ ಇತಿಹಾಸಗಳನ್ನು ತೆಗೆದುಕೊಂಡ ಷೇಕ್ಸ್‌ಪಿಯರ್ ಇಂಗ್ಲೆಂಡಿನ ದೊರೆಗಳಾದ, ಹೆನ್ರಿ, ರಿಚರ್ಡ್, ಎಡ್ವರ್ಡ್ ಜಾನ್‌ರ ಜೀವನಗಾಥೆಗಳನ್ನು ಬಳಸಿಕೊಂಡ. ಇವು ಶುದ್ಧ ಚಾರಿತ್ರಿಕ ನಾಟಕಗಳಾದರೆ, ಸ್ಕಾಟ್ಲ್ಯಾಂಡಿನ ಮ್ಯಾಕ್‌ಬೆತ್ ಮತ್ತು ಲಿಯರ್, ರೋಮ್‌ನ ಕ್ಯಾರಿಒಲ್ಯಾನಸ್, ಜ್ಯೂಲಿಯಸ್ ಸೀಸರ್, ಆಂಟನಿ, ಡೆನ್ಮಾರ್ಕ್‌ನ ಹ್ಯಾಮ್ಲೆಟ್ ಮತ್ತು ಈಜಿಪ್ಟಿನ ಕ್ಲಿಯೋಪಾತ್ರ ಕೂಡ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಇವನ ನಾಟಕದ ಪಾತ್ರಗಳಾಗಿ ಭವ್ಯವಾಗಿ ರಂಗದ ಮೇಲೆ ಬಂದರು.



> ಷೇಕ್ಸ್‌ಪಿಯರ್‌ನನ್ನು ಓದದೆ ಓದು ಪೂರ್ಣಗೊಳ್ಳುವುದೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಅವನ ಕೃತಿಗಳನ್ನು ಪ್ರಪಂಚದ ಎಲ್ಲ ದೇಶಗಳಲ್ಲೂ ಓದುತ್ತಾರೆ. ನಮ್ಮ ಮಾತೃಭಾಷೆ ನಮಗೆಷ್ಟೇ ಪ್ರಿಯವಾಗಿದ್ದರೂ ಇಂಗ್ಲಿಷ್ ಇಂದು ಅನ್ನದ ಭಾಷೆಯಾಗಿ ಮನ್ನಣೆ ಪಡೆದಿರುವಾಗ ಅದರ ಕಲಿಕೆ ಅನಿವಾರ್ಯವಾಗಿಬಿಟ್ಟಿದೆ. ಇಂಗ್ಲಿಷ್ ಮಾತನಾಡುವವರಿಗೇ ಷೇಕ್ಸ್‌ಪಿಯರ್ ಕಬ್ಬಿಣದ ಕಡಲೆ ಎನಿಸುವಾಗ ನಮ್ಮ ಪಾಡೇನು? ಹಾಗಾಗಿಯೇ ಒಮ್ಮೆ ಇಂಗ್ಲೆಂಡಿನಲ್ಲೂ ಷೇಕ್ಸ್‌ಪಿಯರ್‌ನನ್ನು ಪಠ್ಯದಿಂದ ತೆಗೆದು ಹಾಕಲಾಗಿತ್ತಂತೆ! ಆದರೆ ನಂತರದ ವರ್ಷಗಳಲ್ಲಿ ಇಂಗ್ಲೀಷಿನವರೇ ಇಂಗ್ಲೀಷ್ ಸರಿಯಾಗಿ ಬಳಸಲು ಒದ್ದಾಡಿದಾಗ ಮತ್ತೆ ಷೇಕ್ಸ್‌ಪಿಯರ್‌ನನ್ನು ತರಲಾಯಿತಂತೆ!

ಷೇಕ್ಸ್‌ಪಿಯರ್‌ನ ನಾಟಕಗಳು ಆಪ್ತವೆನಿಸುವುದಕ್ಕೆ ಕಾರಣ ಅವನು ಆರಿಸಿಕೊಳ್ಳುವ ಕತೆಗಳಲ್ಲ. ಎಲ್ಲರಿಗೂ ತಿಳಿದಿರುವ ಕತೆಗಳು ಮತ್ತು ಪಾತ್ರಗಳನ್ನು ಅವನು ಪೋಷಿಸುವ ರೀತಿ ಅವನನ್ನು ಅಮರನನ್ನಾಗಿಸಿದೆ. ಉದಾಹರಣೆಗೆ, ಮ್ಯಾಕ್‌ಬೆತ್ ನಾಟಕದಲ್ಲಿ, ಅಮಾಯಕ ದೊರೆ, ಅತಿಥಿ ಡಂಕನ್‌ನ ಘೋರ ಹತ್ಯೆ ಮಾಡಿದ ಲೇಡಿ ಮ್ಯಾಕ್‌ಬೆತ್ ಸಹಿಸಲಸಾಧ್ಯವಾದ ಪಾಪಪ್ರಜ್ಞೆಯಿಂದ ಮಾನಸಿಕ ಅಸ್ವಸ್ಥಳಾಗಿ ನಿದ್ರೆಯಲ್ಲಿ ತನ್ನ ಪಾಪದ ಭೀಕರತೆಯನ್ನು ಅರುಹುತ್ತಾ ನಡೆದಾಡುತ್ತಾಳೆ. 16ನೆಯ ಶತಮಾನದಲ್ಲಿ ಮನೋರೋಗವನ್ನು ಯಾರೂ ಊಹಿಸಿಕೊಳ್ಳದಿದ್ದ ಕಾಲದಲ್ಲಿ ಷೇಕ್ಸ್‌ಪಿಯರ್ ಅವಳ ಅಂತರಂಗವನ್ನು ಬಗೆದು ನಮ್ಮ ಮುಂದಿಡುತ್ತಾನೆ. ಹ್ಯಾಮ್ಲೆಟ್, ಕಿಂಗ್ ಲಿಯರ್ ಮತ್ತು ಒಥೆಲೋ ಕೂಡಾ ಇಂತಹುದೇ ತಳಮಳವನ್ನು ಅನುಭವಿಸುವಂತೆ ಮಾಡಿ ನಮ್ಮನ್ನು ಅವರಲ್ಲಿ ಕಾಣುವಂತೆ ಮಾಡುತ್ತಾನೆ. ಮಾನವನ ಮನಸ್ಸಿನ ದುರ್ಬಲ ನಾಡಿಯನ್ನು ಹಿಡಿಯುವ ಮನಃಶಾಸ್ತ್ರಜ್ಞ ಷೇಕ್ಸ್‌ಪಿಯರ್!

ರೋಮಿಯೋ ಜ್ಯೂಲಿಯೆಟ್‌ನ ಪರಿಚಯವಿರದ ಪ್ರೇಮಿಗಳೇ ಈ ಲೋಕದಲ್ಲಿ ಇಲ್ಲ ಎಂದು ಖಚಿತವಾಗಿ ಹೇಳಬಹುದು. ಅವರಿಬ್ಬರ ಮುಗ್ಧ ಉತ್ಕಟ ಪ್ರೇಮದ ಪರಾಕಾಷ್ಠೆಯನ್ನು ಅನುಭವಿಸಿ ಅನುಕಂಪಿಸದವರೂ ಇಲ್ಲವೇ ಇಲ್ಲ. ಜೊತೆಗೆ ಆ ಕಾಲಘಟ್ಟದ ವರ್ಗ ಸಂಘರ್ಷವನ್ನು ಷೇಕ್ಸ್‌ಪಿಯರ್ ನಮಗೆ ಆ ನಾಟಕದಲ್ಲಿ ಕಟ್ಟಿಕೊಡುತ್ತಾನೆ ಹೌದಾದರೂ, ಇಂದಿಗೂ ಅದು ನಮ್ಮ ಸಮಾಜದಲ್ಲಿ, ಪ್ರಪಂಚದಾದ್ಯಂತ ಪ್ರಚಲಿತವಿರುವುದು ಅವನನ್ನು ಇನ್ನಷ್ಟು ಆಪ್ತನನ್ನಾಗಿಸುತ್ತದೆ.

ಗಂಭೀರ ವಿಷಯಗಳಲ್ಲದೆ, Taming the Shrew, The Comedy of Errors, As You Like It, Twelfth Night, The Merry Wives Of Windsor ನಂತಹ ಶುದ್ಧ ಹಾಸ್ಯ ಪ್ರಧಾನ ನಾಟಕಗಳನ್ನೂ ನೀಡಿದ್ದಾನೆ. The Tempest ಮತ್ತು Midsummer's Night Dream ನಂತಹ ನಾಟಕಗಳಲ್ಲಿ ನಿರ್ಮಲ ಪ್ರೀತಿ ಮತ್ತು ಅತಿಮಾನುಷ ಶಕ್ತಿಗಳು ಉಂಟು ಮಾಡುವ ವಿನೋದಾವಳಿಗಳು ಮತ್ತು ಪರದಾಟಗಳನ್ನು ಚಿತ್ರಿಸಿದ್ದನಾದರೂ, Tempest ನಲ್ಲಿ ಸೂಕ್ಷ್ಮವಾಗಿ ಕ್ಯಾಲಿಬನ್‌ನ ಪಾತ್ರದ ಮೂಲಕ ಗುಲಾಮಗಿರಿಯಂತಹ ಅಮಾನುಷ ಪದ್ಧತಿಯನ್ನು ಖಂಡಿಸಿದ್ದಾನೆ. Merchant Of Venice ನಾಟಕದಲ್ಲಿಯೂ ಅತ್ಯಂತ ನವಿರಾಗಿ ಶೈಲಾಕ್‌ನ ಬಾಯಲ್ಲಿ "Hath not a Jew eyes?" ಎಂದು ಹೇಳಿಸಿ, ಯಹೂದಿಗಳನ್ನು ಕೀಳಾಗಿ ಕಾಣುವ ಪಾಶ್ಚಿಮಾತ್ಯರ ಸಂಸ್ಕೃತಿಯನ್ನು ಹೀಗಳೆಯುತ್ತಾನೆ. ರಾಣಿ ಎಲಿಜಬೆತ್‌ನ ಕಾಲದಲ್ಲಿ ಇವೆಲ್ಲಾ ಸಾಮಾನ್ಯವೆಂಬಂತೆ ಇದ್ದಾಗ, ಖಂಡಿಸಿ ಮಾತನಾಡುವುದು ಅಷ್ಟು ಸುಲಭವಾಗಿರಲಿಲ್ಲ ಎಂಬುದನ್ನು ಗಮನಿಸಬೇಕು. ಆಗಿನ ಕಾಲಘಟ್ಟದಲ್ಲಿ ಪ್ರಚಲಿತವಿದ್ದ ರಾಜಕೀಯ ಸಂದರ್ಭವನ್ನು ಅಲ್ಲಲ್ಲಿ ಆಗಾಗ್ಗೆ ಹೇಳುತ್ತಿದ್ದ ಷೇಕ್ಸ್‌ಪಿಯರ್ ಒಬ್ಬ ಉತ್ತಮ ವಿಮರ್ಶಕನೆನಿಸುತ್ತಾನೆ.

ನಾಟಕಗಳ ಹೊರತಾಗಿ, Venus and Adonis, The Rape of Lucrece ಮತ್ತು A Lover Complaint ಪದ್ಯಗಳನ್ನು ರಚಿಸಿದ್ದಾನೆ. ಇಟಲಿಯ ಪೆಟ್ರಾರ್ಕ್ ಕಂಡುಹಿಡಿದ 14 ಸಾಲಿನ ಸಾನೆಟ್‌ಗಳನ್ನು ಸ್ವಲ್ಪ ಮಾರ್ಪಡಿಸಿ ತಾನೂ 154 ಸಾನೆಟ್‌ಗಳನ್ನು ರಚಿಸಿದ್ದಾನೆ.

ನಾಟಕಗಳನ್ನು ರಚಿಸುತ್ತಿದ್ದ ಷೇಕ್ಸ್‌ಪಿಯರ್ ತಾನು ಒಬ್ಬ ನಟನಾಗಿ ಕೂಡ ದುಡಿದಿದ್ದ. 1578–82 ಮತ್ತು 1585–92, ಈ ಎರಡು ಕಾಲಘಟ್ಟವನ್ನು ಷೇಕ್ಸ್‌ಪಿಯರ್‌ನ ಬದುಕಿನ ಕಳೆದು ಹೋದ ದಿನಗಳು ಎನ್ನುತ್ತಾರೆ. ಆ ಸಮಯದಲ್ಲಿ ಆತ ಒಬ್ಬ ನಟನಾಗಿದ್ದ ಎನ್ನುವುದು ಸಂಶೋಧಕರ ಅಂಬೋಣ. ನಟನಾಗಿಯೂ ರಂಗದ ಮತ್ತು ಪ್ರೇಕ್ಷಕರ ನಾಡಿಮಿಡಿತಗಳನ್ನು ಅರಿತಿದ್ದಿದ್ದರಿಂದಲೇ ಬಹುಶಃ ಅವನ ನಾಟಕಗಳು ಇಂದಿಗೂ ಜೀವಂತವಾಗಿವೆ!

ಇಂದಿಗೂ ಲಂಡನ್‌ನ ಗ್ಲೋಬ್ ಥಿಯೇಟರಿನಲ್ಲಿ ಷೇಕ್ಸ್‌ಪಿಯರ್‌ನ ನಾಟಕಗಳು 365 ದಿನಗಳೂ ಪ್ರದರ್ಶಿಸಲ್ಪಡುತ್ತವೆ. ತಿಂಗಳುಗಳಿಗೆ ಮುಂಚೆ ಟಿಕೆಟ್ ಕಾದಿರಿಸುವಷ್ಟು ಜನಸಂದಣಿ ಇಂದಿಗೂ ಇದೆ.

ಭಾಷೆ ಬೆಳೆಯುವುದು ಮತ್ತು ಉಳಿಯುವುದು ಅದಕ್ಕೆ ಹೊಸ ಹೊಸ ಪದಗಳ ಸೇರ್ಪಡೆಯಾದಾಗ. ಷೇಕ್ಸ್‌ಪಿಯರ್ ಇಂಗ್ಲಿಷ್ ಭಾಷೆಗೆ 1700ಕ್ಕೂ ಹೆಚ್ಚು ಪದಗಳನ್ನು ನೀಡಿದ್ದಾನೆ. ಉದಾಹರಣೆಗೆ, Arch Villain, Amazement, Droplet, Farmhouse, Eyesore, Cold Blooded, Cold Hearted, Bump, Buzz? ಇತ್ಯಾದಿ!

ಷೇಕ್ಸ್‌ಪಿಯರ್‌ನನ್ನು ಓದದೆ ಓದು ಪೂರ್ಣಗೊಳ್ಳುವುದೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಅವನ ಕೃತಿಗಳನ್ನು ಪ್ರಪಂಚದ ಎಲ್ಲ ದೇಶಗಳಲ್ಲೂ ಓದುತ್ತಾರೆ. ನಮ್ಮ ಮಾತೃಭಾಷೆ ನಮಗೆಷ್ಟೇ ಪ್ರಿಯವಾಗಿದ್ದರೂ ಇಂಗ್ಲಿಷ್ ಇಂದು ಅನ್ನದ ಭಾಷೆಯಾಗಿ ಮನ್ನಣೆ ಪಡೆದಿರುವಾಗ ಅದರ ಕಲಿಕೆ ಅನಿವಾರ್ಯವಾಗಿಬಿಟ್ಟಿದೆ. ಇಂಗ್ಲಿಷ್ ಮಾತನಾಡುವವರಿಗೇ ಷೇಕ್ಸ್‌ಪಿಯರ್ ಕಬ್ಬಿಣದ ಕಡಲೆ ಎನಿಸುವಾಗ ನಮ್ಮ ಪಾಡೇನು? ಹಾಗಾಗಿಯೇ ಒಮ್ಮೆ ಇಂಗ್ಲೆಂಡಿನಲ್ಲೂ ಷೇಕ್ಸ್‌ಪಿಯರ್‌ನನ್ನು ಪಠ್ಯದಿಂದ ತೆಗೆದು ಹಾಕಲಾಗಿತ್ತಂತೆ! ಆದರೆ ನಂತರದ ವರ್ಷಗಳಲ್ಲಿ ಇಂಗ್ಲೀಷಿನವರೇ ಇಂಗ್ಲೀಷ್ ಸರಿಯಾಗಿ ಬಳಸಲು ಒದ್ದಾಡಿದಾಗ ಮತ್ತೆ ಷೇಕ್ಸ್‌ಪಿಯರ್‌ನನ್ನು ತರಲಾಯಿತಂತೆ!

ಷೇಕ್ಸ್‌ಪಿಯರ್‌ನ ನಾಟಕಗಳು ಪ್ರಪಂಚದ ಸಾಕಷ್ಟು ಭಾಷೆಗಳಿಗೆ ಅನುವಾದವಾಗಿವೆ. ಕನ್ನಡದಲ್ಲಿ ಹೆಚ್ಚು ಕಡಿಮೆ ಒಂದೇ ಕಾಲಘಟ್ಟದಲ್ಲಿ ಬಸವಪ್ಪಶಾಸ್ತ್ರಿಗಳು 'ಒಥೆಲೊ' ಅನ್ನು 'ಶೂರಸೇನ ಚರಿತ್ರೆ' ಎಂದು ಅನುವಾದಿಸಿದರೆ ಬಿ.ವೆಂಕಟಾಚಾರ್ಯರು 'Comedy of Errors' ಅನ್ನು 'ಭ್ರಾಂತಿ ವಿಲಾಸ' ಎಂದು ಕನ್ನಡಕ್ಕೆ ತಂದಿದ್ದರು. ನಂತರದ ದಿನಗಳಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕುವೆಂಪು, ಗುಂಡೂ ಕೃಷ್ಣ ಚುರಮುರಿ, ಡಿವಿಜಿ, ಎಂ.ಎಲ್.ಶ್ರೀಕಂಠೇಗೌಡರು, ರಾಮಚಂದ್ರ ದೇವ, ಭಗವಾನ್, ಎಚ್.ಎಸ್. ಶಿವಪ್ರಕಾಶ್, ನಿಸಾರ್ ಅಹಮದ್ ಮತ್ತು ಕೆ.ವಿ.ವಾಸುದೇವನ್ ಆ ನಿಟ್ಟಿನಲ್ಲಿ ಕೆಲಸ ಮಾಡಿದ್ದಾರೆ. ಅವನ ಕಾವ್ಯಗಳನ್ನು ಬಿಎಂಶ್ರೀ, ಕೆ.ಎಸ್. ನರಸಿಂಹಸ್ವಾಮಿ, ಚನ್ನವೀರ ಕಣವಿ, ಪುತಿನ, ಗೋಕಾಕ್, ಜಿ.ಎಸ್.ಎಸ್, ತೀನಂಶ್ರೀ, ಬಿಎ ಸನದಿ ಮತ್ತು ಇನ್ನೂ ಮುಂತಾದವರು ಅನುವಾದಿಸಿದ್ದಾರೆ. ಹಲವು ಸಾನೆಟ್ಟುಗಳನ್ನು ಎನ್.ಎಸ್. ಲಕ್ಷ್ಮೀನಾರಾಯಣಭಟ್ಟರು ಕನ್ನಡಕ್ಕೆ ತಂದು ಸುನೀತಗಳೆಂದು ಕರೆದಿದ್ದಾರೆ.

ಷೇಕ್ಸ್‌ಪಿಯರ್‌ನ ಒಂದೆರಡು ನಾಟಕಗಳನ್ನು ಬಿಟ್ಟರೆ, ಬಹುತೇಕ ಎಲ್ಲ ನಾಟಕಗಳು ತೆರೆಯ ಮೇಲೂ ಬಂದಿವೆ. ಪ್ರಪಂಚದ ಬಹುತೇಕ ಎಲ್ಲ ಭಾಷೆಗಳಲ್ಲಿ! ಹೊಸ ಹೊಸ ನಿರ್ದೇಶಕರು ಹೊಸ ಭಾಷ್ಯವನ್ನೇ ಬರೆಯುತ್ತಿದ್ದಾರೆ. ನಮ್ಮ ಕನ್ನಡದಲ್ಲಿ ಷೇಕ್ಸ್‌ಪಿಯರ್‌ನ Taming The Shrew 60ರ ದಶಕದಲ್ಲಿಯೇ ಅಬ್ಬಬ್ಬಾ! ಎಂತಹ ಹುಡುಗಿ ಚಿತ್ರವಾಗಿತ್ತು. ಮಾಲಾಶ್ರೀ ನಟನೆಯ 'ನಂಜುಂಡಿ ಕಲ್ಯಾಣ' ಕೂಡಾ ಇದೇ ನಾಟಕವನ್ನು ಆಧರಿಸಿದ್ದು. ರಮೇಶ್ ನಟಿಸಿದ ಉಲ್ಟಾಪಲ್ಟಾ Comedy Of Errorನ ಚಲನಚಿತ್ರ ರೂಪ.

ಇನ್ನು ರಂಗದ ಮೇಲಂತೂ ಮತ್ತೆ ಮತ್ತೆ ಷೇಕ್ಸ್‌ಪಿಯರ್ ಬರುತ್ತಲೇ ಇರುತ್ತಾನೆ. ನಾವು ಕಣ್ತುಂಬಿಕೊಳ್ಳುತ್ತಲೇ ಇರುತ್ತೇವೆ. ಇತ್ತೀಚೆಗೆ ಲಕ್ಷ್ಮಿ ಚಂದ್ರಶೇಖರ್, ಷೇಕ್ಸ್‌ಪಿಯರನ ಪತ್ನಿ ಎಂಬ ವಿನೂತನವಾದ ಏಕವ್ಯಕ್ತಿ ನಾಟಕ ಪ್ರದರ್ಶಿಸಿ, ನಾಟಕಕಾರ ಷೇಕ್ಸ್‌ಪಿಯರ್‌ನನ್ನು ಪತಿಯಾಗಿ ಕಾಣಿಸುವ ಯತ್ನ ಮಾಡಿದ್ದರು.

ಇಂಗ್ಲಿಷ್ ಭಾಷೆಗೆ ಇವನು ನೀಡಿದ ಅಗಾಧ ಕೊಡುಗೆಯನ್ನು ಸ್ಮರಿಸಲೆಂದೇ, ಇವನ ಹುಟ್ಟಿದ ದಿನ ಏಪ್ರಿಲ್ 23 ಅನ್ನು ವಿಶ್ವಸಂಸ್ಥೆ ವಿಶ್ವ ಇಂಗ್ಲಿಷ್ ದಿನವೆಂದು 2010ರಲ್ಲಿ ಘೋಷಿಸಿದೆ. ಜೊತೆಗೆ ಅಂದೇ ವಿಶ್ವ ಪುಸ್ತಕ ದಿನವನ್ನೂ ಆಚರಿಸಲಾಗುತ್ತದೆ.

ವಿಶ್ವ ಮಾನ್ಯ ನಾಟಕಕಾರನಾದ ಷೇಕ್ಸ್‌ಪಿಯರ್‌ನ ನಾಟಕಗಳು ಇಂದಿಗೂ ಪ್ರಸ್ತುತ. ಅವನ ನಾಟಕಗಳು ರಂಜನೆಯ ಜೊತೆಗೆ ನಮಗೆ ಭಾಷೆಯನ್ನೂ ಕಲಿಸಿಕೊಡಬಲ್ಲವು, ಮನುಷ್ಯ ಸ್ವಭಾವಗಳಿಗೆ, ಅವನ ಹಲವು ಮುಖಗಳಿಗೆ ಒಂದು ಬೆಳಕಿನ ಕಿಂಡಿಯನ್ನು ಒದಗಿಸಿಕೊಡಬಲ್ಲವು. ಈ ಸಂದರ್ಭದಲ್ಲಿ ಅವನನ್ನು ಓದುವ ಯತ್ನ ಮಾಡೋಣ.

ಸ್ತ್ರೀ ಸಮಾನತೆ ಕುರಿತು ಅಕ್ಕ 12ನೇ ಶತಮಾನದಲ್ಲೇ ಚರ್ಚಿಸಿದ್ದರು

ರಾಜ್ಯ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ ವಿವರಣೆ

ಮೈಸೂರು, ಮೇ 8(ಎಸ್‌ಪಿಎನ್)– ಸ್ತ್ರೀ ಸಮಾನತೆ ಕುರಿತು 21ನೇ ಶತಮಾನದಲ್ಲಿ ಚರ್ಚೆ ಮಾಡುತ್ತಿದ್ದೇವೆ. ಆದರೆ, ವಚನಗಾರ್ತಿ ಅಕ್ಕ ಮಹಾದೇವಿ ತನ್ನ ವಚನಗಳ ಮೂಲಕ 12ನೇ ಶತಮಾನದಲ್ಲೇ ಚರ್ಚಿಸಿದ್ದಾರೆ ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ, ಹಿರಿಯ ವಕೀಲೆ ಮಂಜುಳಾ ಮಾನಸ ಅಭಿಪ್ರಾಯಪಟ್ಟರು.

ಮೈಸೂರು ಅಗ್ರಹಾರದ ನಟರಾಜ ಕಲ್ಯಾಣ ಮಂಟಪದಲ್ಲಿ ಶ್ರೀ ನಟರಾಜ ವಿದ್ಯಾಸಂಸ್ಥೆ ವತಿಯಿಂದ ಆಯೋಜಿಸಿದ್ದ ಶ್ರೀ ಗುರುಶಾಂತ ಸ್ವಾಮೀಜಿ ಅವರ 29ನೇ ಪುಣ್ಯಸ್ಮರಣೆ, ಅಕ್ಕ ಮಹಾದೇವಿ ಹಾಗೂ ಬಸವ ಜಯಂತಿ ಆಚರಣೆಯಲ್ಲಿ ಭಾಗವಹಿಸಿ ಮಾತನಾಡಿದರು.

ಪ್ರಸ್ತುತ ಬಸವಣ್ಣ ಹಾಗೂ ಅಕ್ಕ ಮಹಾದೇವಿ ಕುರಿತು ಮಾತನಾಡಲು ತಾಕತ್ತು ಬೇಕು. ಅವರ ಸಾಹಿತ್ಯ ಚೆನ್ನಾಗಿ ಅಧ್ಯಯನ ಮಾಡಿರಬೇಕು. ನಾಲ್ಕು ಗೋಡೆಗಳ ಮಧ್ಯೆ ಬದುಕು ಕಟ್ಟಿಕೊಳ್ಳಬೇಕಾದ ಕಾಲಘಟ್ಟದಲ್ಲಿ ಅಕ್ಕ ಮಹಾದೇವಿ, ತ್ಯಾಗಿಯಾಗಿ ಸ್ತ್ರೀ ಸಮಾನತೆ ಕುರಿತು ಆಧ್ಯಾತ್ಮದ ಮೂಲಕ ಸಮಾಜದ ಅಂಕು–ಡೊಂಕುಗಳನ್ನು ತೋರಿಸಿಕೊಟ್ಟರು.



ಅಕ್ಕ ಮಹಾದೇವಿ ಜಯಂತಿ ಅಂಗವಾಗಿ ಅವರ ಭಾವಚಿತ್ರಕ್ಕೆ ರಾಜ್ಯ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ನಿವೃತ್ತ ಪ್ರಾಧ್ಯಾಪಕ ಡಾ.ಎಸ್.ಶಿವರಾಜಪ್ಪ ಉಪಸ್ಥಿತರಿದ್ದರು.

ಪ್ರಸ್ತುತ ಹೆಣ್ಣು ಮಕ್ಕಳ ಸುರಕ್ಷತಾ ದೃಷ್ಟಿಯಿಂದ ಹೊರಗಡೆ ಕಳುಹಿಸುವುದೇ ಕಷ್ಟಕರವಾದ ವಾತಾವರಣವಿದೆ. ನಾವು ಆಧುನಿಕತೆ, ಸಮಾನತೆ ಎಂಬೆಲ್ಲಾ ಅಂಶಗಳ ಬಗ್ಗೆ ಮಾತನಾಡಬಹುದು. ಹೆಣ್ಣು ಮಕ್ಕಳ ಭದ್ರತಾ ವಿಚಾರ ಬಂದಾಗ ಇವೆಲ್ಲವೂ ನೇಪಥ್ಯಕ್ಕೆ ಸರಿಯುತ್ತವೆ. ಈ ಸನ್ನಿವೇಶವನ್ನು 12ನೇ ಶತಮಾನಕ್ಕೆ ಹೋಲಿಸಿದಾಗ ಅಕ್ಕನ ತರಹ ಸಾಮಾಜಿಕ ಬದುಕು ಕಟ್ಟಿಕೊಳ್ಳುವುದು ಎಷ್ಟು ಕಷ್ಟದ ಸನ್ನಿವೇಶ ಇತ್ತು ಎನ್ನುವುದನ್ನು ಇಂದಿನ ಯುವಕ–ಯುವತಿಯರು ಅರ್ಥಮಾಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಜೆಎಸ್‌ಎಸ್ ಮಹಿಳಾ ಕಾಲೇಜು ಕನ್ನಡ ವಿಭಾಗದ ಪ್ರಾಧ್ಯಾಪಕಿ ಜೆ.ಪುಷ್ಪಲತಾ ಮಾತನಾಡಿ, ಹೆಣ್ಣಿನ ಮನಸ್ಸಿನ ಆಲೋಚನೆಗಳನ್ನು ಅಕ್ಕ ಮಹಾದೇವಿ ವಚನಗಳಲ್ಲಿ ಕಾಣಬಹುದು. ಅಕ್ಕನ ಜೀವನ ಚರಿತ್ರೆ ಇಡೀ ಮಹಿಳಾ ವರ್ಗಕ್ಕೆ ಮಾದರಿಯಾದುದು ಎಂದರು.

ಅಕ್ಕ ಮಹಾದೇವಿಯ ತತ್ವಗಳು ಆಧ್ಯಾತ್ಮಿಕ ಚಿಂತನೆಯೂ ಹೌದು. ರಾಜತ್ವ ಮತ್ತು ಪ್ರಭುತ್ವಗಳ ಸಂಘರ್ಷವೂ ಹೌದು ಎಂದು ಕೆಲ ಘಟನೆಗಳ ಮೂಲಕ ವಿವರಿಸಿದರು.

ಹೆಣ್ತನ ಎಂಬುದು ಬರೀ ದೇಹಕ್ಕೆ ಸಂಬಂಧಿಸಿದ್ದಲ್ಲ, ಅದು ಮನಸ್ಸಿಗೂ ಸಂಬಂಧಿಸಿದ್ದು. ಮಹಿಳೆಯ ವ್ಯಕ್ತಿತ್ವ ಎಂಬುದು ಆಕೆಯ ತಲೆ ಕೂದಲಷ್ಟೇ ಬೃಹತ್ತಾದುದು. ಅಕ್ಕ ಮಹಾದೇವಿ ಕೇವಲ ದೇಹಕ್ಕೆ ಮಾತ್ರ ಆದ್ಯತೆ ಕೊಡುವ ಪುರುಷ ವರ್ಗವನ್ನು ಧಿಕ್ಕರಿಸಿ, ಬಾಹ್ಯಲೋಕದಾಚೆಗೂ ವ್ಯಕ್ತಿತ್ವವಿದೆ ಎಂಬುದನ್ನು 12ನೇ ಶತಮಾನದಲ್ಲೇ ತೋರಿಸಿಕೊಟ್ಟಿದ್ದಾರೆ ಎಂದರು. ಈ ವೇಳೆ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ, ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಶ್ರೀ ನಟರಾಜ ಪಬ್ಲಿಕ್ ಸ್ಕೂಲ್ ಪ್ರಾಂಶುಪಾಲೆ ಸೌಮ್ಯ ಬಿ.ನಾಯಕ್ ಸ್ವಾಗತಿಸಿದರೆ, ಚೂಡಾಮಣಿ ಪ್ರಾರ್ಥಿಸಿದರು. ಸಹಾಯಕ ಪ್ರಾಧ್ಯಾಪಕಿ ಎನ್.ಆರ್.ಸಿಂಧೂ, ಉಪ ಪ್ರಾಂಶುಪಾಲೆ ಗೌರಮ್ಮಣ್ಣಿ ಉಪಸ್ಥಿತರಿದ್ದರು. ತದನಂತರ ಶ್ರೀ ವಾತ್ಸಲ್ಯ ಬಿಇಡಿ ಕಾಲೇಜಿನ ಪ್ರಶಿಕ್ಷಣಾರ್ಥಿಗಳು ಡಾ.ಗಿರೀಶ್ ಕಾರ್ನಾಡ್ ವಿರಚಿತ 'ತಲೆದಂಡ' ನಾಟಕವನ್ನು ಅರ್ಥಪೂರ್ಣವಾಗಿ ಅಭಿನಯಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಹಸಿರು ನಮ್ಮ ಉಸಿರು

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ

ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣ ಸಿಬಿಐಗೆ ವಹಿಸಲ್ಲ

●ಗೃಹ ಸಚಿವ ಡಾ.ಪರಮೇಶ್ವರ್ ಸ್ಪಷ್ಟನೆ ●ಸಿಬಿಐಗೆ ವಹಿಸಿದ್ದ ಪ್ರಕರಣಗಳ ಸ್ಥಿತಿ ಏನಾಯ್ತು ಎಂಬುದು ಗೊತ್ತಿದೆ ●ನಮ್ಮ ಪೊಲೀಸರೇ ಸಮರ್ಥರಿದ್ದಾರೆ

ಬೆಂಗಳೂರು, ಮೇ 8(ಕೆಎಂಶಿ)– ಹಾಸನ ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣವನ್ನು ಸಿಬಿಐಗೆ ವಹಿಸುವುದಿಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಐಟಿ ಸಮರ್ಥವಾಗಿದೆ, ಪ್ರಕರಣದ ಬಗ್ಗೆ ಈಗಾಗಲೇ ತನಿಖೆ ಆರಂಭಿಸಿ ಮಾಹಿತಿ ಸಂಗ್ರಹ ಮಾಡಿದೆ. ಜೊತೆಗೆ ಕೆಲವರನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆಗೆ ಒಳಪಡಿಸಿದೆ. ನಮ್ಮ ಪೊಲೀಸರೇ ಸಮರ್ಥರಿರುವಾಗ ಸಿಬಿಐಗೆ ಏತಕ್ಕೆ ವಹಿಸಿಕೊಡಬೇಕು, ಹಿಂದಿನ ಡಿ.ಕೆ.ರವಿ, ಕೆ.ಜೆ.ಜಾರ್ಜ್ ಪ್ರಕರಣಗಳ ಬಗ್ಗೆ ತನಿಖೆ ನಡೆಸಿದ ಸಿಬಿಐ ಏನು ಮಾಡಿತು? ಎಂದು ಪರಮೇಶ್ವರ್ ಪ್ರಶ್ನಿಸಿದರು.

ಪ್ರಜ್ವಲ್ ಹಗರಣದಲ್ಲಿ ಯಾರನ್ನೂ ರಕ್ಷಿಸುವ ಅಥವಾ ಕೈಬಿಡುವ ಪ್ರಶ್ನೆಯೇ ಇಲ್ಲ. ಅವರ ವಿರುದ್ಧದ ಲೈಂಗಿಕ ದೌರ್ಜನ್ಯದ ಜೊತೆಗೆ ಪೆನ್‌ಡ್ರೈವ್ ಹಂಚಿಕೆ ಬಗ್ಗೆಯೂ ತನಿಖೆ ನಡೆಸಲಿದೆ. ದೌರ್ಜನ್ಯಕ್ಕೆ ಒಳಗಾದ ಐದು ಮಂದಿ ಈಗಾಗಲೇ ತಮ್ಮ ಹೇಳಿಕೆಗಳನ್ನು ಎಸ್‌ಐಟಿ ಮುಂದೆ ನೀಡಿದ್ದಾರೆ. ಮಹಿಳೆಯ ಅಪಹರಣಕ್ಕೆ ಸಂಬಂಧಿಸಿದಂತೆ ರೇವಣ್ಣ ಅವರನ್ನು ಬಂಧಿಸಲಾಗಿದೆಯೇ ಹೊರತು, ಪ್ರಜ್ವಲ್ ಸಿಡಿಗೂ, ಇದಕ್ಕೂ ಸಂಬಂಧವಿಲ್ಲ. ಮಹಿಳೆ ಅವರ ಪುತ್ರ ನೀಡಿದ ದೂರಿನ ಮೇಲೆ ರೇವಣ್ಣ ಅವರನ್ನು ಬಂಧಿಸಲಾಗಿದೆ. ಅಧಿಕಾರಿಗಳು ಇನ್ನೂ ಹಲವು ಹಂತದ ತನಿಖೆಗಳನ್ನು ನಡೆಸಿದ್ದು ಎಲ್ಲವನ್ನೂ ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದರು.

ಪ್ರಭಾವಿಗಳಿಂದ ದೌರ್ಜನ್ಯಕ್ಕೊಳಗಾದವರಿಗೆ ನ್ಯಾಯ ಒದಗಿಸುವಲ್ಲಿಯೂ ಅಸಮಾನತೆ

ಕಾಂಗ್ರೆಸ್ ಮುಖಂಡ ವರುಣ ಮಹೇಶ್ ವಿಷಾದ

ಮೈಸೂರು, ಮೇ 8–ಶ್ರೀಮಂತರು ಹಾಗೂ ಪ್ರಭಾವಿಗಳಿಂದ ದೌರ್ಜನ್ಯಕ್ಕೊಳಗಾಗುವವರಿಗೆ ನ್ಯಾಯ ಒದಗಿಸುವ ವಿಚಾರದಲ್ಲಿ ಅಸಮಾನತೆ ಎದ್ದು ಕಾಣುತ್ತಿದೆ ಎಂದು ಕಾಂಗ್ರೆಸ್ ಮುಖಂಡ ವರುಣ ಮಹೇಶ್ ವಿಷಾದಿಸಿದ್ದಾರೆ.



ವರುಣ ಮಹೇಶ್

ಸಂಸದ ಪ್ರಜ್ವಲ್ ರೇವಣ್ಣ ಎಸಗಿದಂತಹ ಕೃತ್ಯವನ್ನು ಸಾಮಾನ್ಯ ವ್ಯಕ್ತಿ ಎಸಗಿದ್ದರೆ, ಇಡೀ ಸಮಾಜವೇ ಆತ ಮತ್ತು ಕುಟುಂಬದ ವಿರುದ್ಧ ತಿರುಗಿ ಬೀಳುತ್ತಿತ್ತು. ಪೊಲೀಸರು ಒಂದು ಕ್ಷಣವೂ ತಡ ಮಾಡದೇ ಆತನನ್ನು ಬಂಧಿಸಿ ಬೀದಿಯಲ್ಲಿ ಎಳೆದೊಯ್ಯುತ್ತಿದ್ದರು ಎಂದು ಹೇಳಿದ್ದಾರೆ.

ಅದೇ ಕೃತ್ಯ ಶ್ರೀಮಂತ ಎಸಗಿದರೆ ಆತನಿಗೆ ವಿದೇಶಕ್ಕೆ ತಪ್ಪಿಸಿಕೊಂಡು ಹೋಗುವ ಸಾಧ್ಯತೆ ಇರುತ್ತದೆ. ಒಳ್ಳೆಯ ವಕೀಲರನ್ನು ನೇಮಕ ಮಾಡಿಕೊಳ್ಳುವ ಸಾಮರ್ಥ್ಯವೂ ಇರುತ್ತದೆ. ಆತನ ಪರವಾಗಿ ಮಾತನಾಡುವ ಹಾಗೂ ದೌರ್ಜನ್ಯಕ್ಕೊಳಗಾದ ಮಹಿಳೆಯರನ್ನೇ ಆರೋಪಿಗಳನ್ನಾಗಿ ನೋಡುವ ವರ್ಗವೂ ಇರುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಟ್ಟಾರೆ, ಶ್ರೀಮಂತರಿಂದ ದೌರ್ಜನ್ಯಕ್ಕೆ ಒಳಗಾದವರಿಗೆ ನ್ಯಾಯ ನೀಡುವ ನಿಟ್ಟಿನಲ್ಲಿ ಎಲ್ಲಾ ಹಂತದಲ್ಲೂ ಅಸಮಾನತೆ ಕಾಡುತ್ತಿದ್ದು, ಇಂತಹ ಪರಿಸ್ಥಿತಿ ಬದಲಾಗಬೇಕು. ಸ್ವಾತಂತ್ರ್ಯ ಬಂದು ಪ್ರಜಾಪ್ರಭುತ್ವ ಜಾರಿಯಾಗಿ 75 ವರ್ಷದ ನಂತರವೂ ಬಹುತೇಕ ಮಹಿಳೆಯರಿಗೆ ಇಂತಹ ಹಿಂಸೆಯಾಗುತ್ತಿದೆ. ಬಯಲಿಗೆ ಬಂದದ್ದು ಒಂದು ಘಟನೆಯಾದರೆ, ಬಯಲಾಗದಿದ್ದದ್ದು ಅನೇಕ ಘಟನೆಗಳಿರಬಹುದು ಎಂದಿರುವ ಅವರು, ಇಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಎಲ್ಲರೂ ಕಾರ್ಯೋನ್ಮುಖರಾಗೋಣ ಎಂದು ಕರೆ ನೀಡಿದ್ದಾರೆ.



ಹುಟ್ಟುಹಬ್ಬ ಆಚರಿಸಿಕೊಂಡ ಮಾಜಿ ಕಾರ್ಪೊರೇಟರ್ ಭಾಗ್ಯ ಮಾದೇಶ್ ಅವರ ಪುತ್ರ ನಂದನ್ ಮಾದೇಶ್ ಅವರನ್ನು ಪಡುವಾರಹಳ್ಳಿ ಪಾಪಣ್ಣ, ಕೃಷ್ಣ, ಪ್ರದೀಪ್, ಕೃಷ್ಣೇಗೌಡ, ರಾಜು, ವೆಂಕಟೇಶ್ ಅಭಿನಂದಿಸಿದರು.

ಮೇ 11ಕ್ಕೆ ದಿ ಹಿಂದೂ ಎಜುಕೇಶನ್ ಪ್ಲಸ್ ಕೆರಿಯರ್ ಕೌನ್ಸಿಲಿಂಗ್

ಮೈಸೂರು, ಮೇ 8– ವಿದ್ಯಾರ್ಥಿಗಳ ಭವಿಷ್ಯದ ಹಾದಿಗೆ ಮಾರ್ಗದರ್ಶಿಯಾದ 'ದಿ ಹಿಂದೂ ಎಜುಕೇಶನ್ ಪ್ಲಸ್ ಕೆರಿಯರ್ ಕೌನ್ಸಿಲಿಂಗ್' 21ನೇ ಆವೃತ್ತಿಯು ರಾಜ್ಯಾದ್ಯಂತ ವಿವಿಧೆಡೆ ಆರಂಭಗೊಂಡಿದೆ. ಮೈಸೂರಿನಲ್ಲಿ ಮೇ 11ರ ಶನಿವಾರ ಬೆಳಗ್ಗೆ 9ರಿಂದ ವಿದ್ಯಾರ್ಥಿಗಳ ನೋಂದಣಿ ಆರಂಭವಾಗುವುದು. 9.30ಕ್ಕೆ ಕಾರ್ಯಕ್ರಮವು ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್‌ನ ಸಾಹುಕಾರ್ ಚನ್ನಯ್ಯ ಸಭಾಂಗಣದಲ್ಲಿ ನಡೆಯಲಿದೆ.

ವೈದ್ಯಕೀಯ, ಎಂಜಿನಿಯರಿಂಗ್ ಸಹಿತ ವೃತ್ತಿಪರ ಕೋರ್ಸ್‌ಗಳು, ಸಿಇಟಿ, ನೀಟ್ ನಂತಹ ಪ್ರವೇಶ ಪರೀಕ್ಷೆಗಳು, ಕಾನೂನು ಹೀಗೆ ವಿವಿಧ ಪದವಿ ಮತ್ತಿತರ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅಗತ್ಯ ಮಾರ್ಗದರ್ಶನ ನೀಡಲಾಗುವುದು. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಭಾಗವಹಿಸಲಿದ್ದು, ಇಂಜಿನಿಯರಿಂಗ್ ಶಿಕ್ಷಣ ಕುರಿತು ಮಾತನಾಡಲು ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಸದಾಶಿವೇಗೌಡ, ವೈದ್ಯಕೀಯ ಶಿಕ್ಷಣ ಕುರಿತು ಮಾತನಾಡಲು ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ಕಮ್ಯುನಿಟಿ ಮೆಡಿಕಲ್ ವಿಭಾಗದ ಮುಖ್ಯಸ್ಥ ಡಾ.ಎಸ್.ಎನ್.ಮಂಜುನಾಥ್, ಸಿ.ಇ.ಟಿ ಕೌನ್ಸಿಲಿಂಗ್ ಕುರಿತು ಮಾಹಿತಿ ನೀಡಲು ಉದಯ್ ಶಂಕರ್ ನೋಡಲ್ ಆಫೀಸರ್, ಕೆ.ಇ.ಎ ಹೆಲ್ಪ್‌ಲೈನ್ ವಿಭಾಗ ಹಾಗೂ ಇನ್ನಿತರ ಶಿಕ್ಷಣ ಅವಕಾಶಗಳ ಕುರಿತು ಸಿಗ್ಮಾ ಸಂಸ್ಥೆಯ ಅಸ್ಗರ್ ಪಾಷಾ ಮಾರ್ಗದರ್ಶನ ನೀಡಲಿದ್ದಾರೆ. ಹೆಚ್ಚಿನ ಮಾಹಿತಿಗೆ ಬಿ.ರಾಜೇಶ್ ಮೊ.ನಂ. 9448871815 ಅನ್ನು ಸಂಪರ್ಕಿಸಿ.

ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ಮೇ 20 ಕೊನೆ ದಿನ

ಮೈಸೂರು, ಮೇ 8– 2023–24ನೇ ಸಾಲಿಗೆ ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ಮೈಸೂರು ತಾಲೂಕಿನ ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ www.ssp.post matric. karnataka. gov.in ನಲ್ಲಿ ಅರ್ಜಿ ಸಲ್ಲಿಸಲು ಮೇ 20 ಅಂತಿಮ ದಿನಾಂಕವಾಗಿದ್ದು, ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ನಿಗದಿತ ಸಮಯದೊಳಗೆ ಅರ್ಜಿ ಸಲ್ಲಿಸಬಹುದು. ವಿದ್ಯಾರ್ಥಿಗಳು ಬ್ಯಾಂಕಿಗೆ ಭೇಟಿ ನೀಡಿ, ಅವರ ಆಧಾರ್ ಸಂಖ್ಯೆಯನ್ನು NPCI (ನ್ಯಾಷನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ)ನಲ್ಲಿ ಕಡ್ಡಾಯವಾಗಿ ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಮಾಡಿಸಬೇಕು. ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆ ದೂ.ಸಂ: 0821–2520910 ಸಂಪರ್ಕಿಸಿ.

ಪ್ರಾಚೀನ ಕಾಲದ ತಾಮ್ರದ ನಾಣ್ಯಗಳ ಹಸ್ತಾಂತರ

ಮೈಸೂರು, ಮೇ 8– ಕುಕನೂರು ಗ್ರಾಮದ ಕಿಲ್ಲೇದ ಓಣಿಯ ಬುನಾದಿಯಲ್ಲಿ ವಶಪಡಿಸಿಕೊಂಡಿದ್ದಂತಹ 46 ಕೆ.ಜಿ. 180 ಗ್ರಾಂ. ತೂಕದ ಪ್ರಾಚೀನ ಕಾಲದ ತಾಮ್ರದ ನಾಣ್ಯಗಳು ಕೊಪ್ಪಳ ಜಿಲ್ಲೆ ಯಲಬುರ್ಗಾ ವ್ಯಾಪ್ತಿಗೆ ಸೇರಿದ್ದವಾಗಿದ್ದು, ಇದನ್ನು ಕೊಪ್ಪಳ ಜಿಲ್ಲೆ ಯಲಬುರ್ಗಾ ನ್ಯಾಯಾಲಯದಿಂದ 25.03.2024 ರಂದು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಕಚೇರಿಗೆ ಹಸ್ತಾಂತರಿಸಲಾಗಿದೆ ಎಂದು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣ ಸಿಬಿಐ ತನಿಖೆಗೆ ಒಪ್ಪಿಸುವಂತೆ ಆಗ್ರಹಿಸಿ ಮೈಸೂರಲ್ಲಿ ಜೆಡಿಎಸ್ ಪ್ರತಿಭಟನೆ



ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಮೈಸೂರಿನ ನೂತನ ಜಿಲ್ಲಾಧಿಕಾರಿ ಕಚೇರಿ ಬಳಿ ಶಾಸಕ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಜೆಡಿಎಸ್ ಕಾರ್ಯಕರ್ತರು ಭಾರಿ ಪ್ರತಿಭಟನೆ ನಡೆಸಿದರು.

ಪಕ್ಷದ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ; ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಕೆ

ಮೈಸೂರು, ಮೇ 8(ಎಂಟಿವೈ)– ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಪೆನ್‌ಡ್ರೈವ್ ಬಿಡುಗಡೆ ಹಾಗೂ ಹಂಚಿಕೆಯನ್ನು ಸಿಬಿಐಗೆ ವಹಿಸುವಂತೆ ಆಗ್ರಹಿಸಿ ಮೈಸೂರಲ್ಲಿ ಜೆಡಿಎಸ್ ಕಾರ್ಯಕರ್ತರು ಕಪ್ಪುಪಟ್ಟಿ ಧರಿಸಿ ಭಾರಿ ಪ್ರತಿಭಟನೆ ನಡೆಸಿದರು.

ಮೈಸೂರಿನ ಸಿದ್ಧಾರ್ಥನಗರದ ಹಳೇ ಡೈರಿ ಸಮೀಪದಿಂದ ಶಾಸಕ ಜಿ.ಟಿ.ದೇವೇಗೌಡ, ಮಾಜಿ ಸಚಿವ ಸಾ.ರಾ.ಮಹೇಶ್ ನೇತೃತ್ವದಲ್ಲಿ ಕಪ್ಪುಪಟ್ಟಿ ಕಟ್ಟಿಕೊಂಡು ಪ್ರತಿಭಟನಾ ಮೆರವಣಿಗೆ ನಡೆಸಿದ ಜೆಡಿಎಸ್ ಕಾರ್ಯಕರ್ತರು, ಹೊಸ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಧರಣಿ ನಡೆಸಿದರು.

ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ಪ್ರಕರಣದ ದೃಶ್ಯವುಳ್ಳ ಪೆನ್‌ಡ್ರೈವ್ ಬಿಡುಗಡೆ ಹಾಗೂ ಹಂಚಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಪ್ರಕರಣದ ತನಿಖೆಗಾಗಿ ರಚಿಸಿರುವ ಎಸ್‌ಐಟಿ ಸರ್ಕಾರದ ಕೈಗೊಂಬೆಯಾಗಿದೆ. ಈ ಹಿನ್ನೆಲೆಯಲ್ಲಿ ಪೆನ್‌ಡ್ರೈವ್ ಪ್ರಕರಣವನ್ನು ಸಿಬಿಐ ಅಥವಾ ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕು. ಪೆನ್‌ಡ್ರೈವ್ ಹಂಚಿರುವವರ ವಿರುದ್ಧವೂ ಕಠಿಣ ಕ್ರಮ ಕೈಗೊಳ್ಳಬೇಕು. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬದ ವಿರುದ್ಧ ದುರುದ್ದೇಶದಿಂದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂಚು ನಡೆಸುತ್ತಿದ್ದಾರೆ. ಪೆನ್‌ಡ್ರೈವ್ ಹಂಚಿಕೆ ಹಿಂದೆ ಇರುವ ಡಿ.ಕೆ.ಶಿವಕುಮಾರ್ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿದರು.

ಸಿಬಿಐ ತನಿಖೆಯಿಂದ ಮಾತ್ರ ನ್ಯಾಯ: ಇದೇ ವೇಳೆ ಶಾಸಕ ಜಿ.ಟಿ.ದೇವೇಗೌಡರು ಮಾತನಾಡಿ, ಪ್ರಜ್ವಲ್ ರೇವಣ್ಣ ಲೈಂಗಿಕ ಪ್ರಕರಣದ ತನಿಖೆಗಾಗಿ ರಾಜ್ಯ ಸರ್ಕಾರ ಎಸ್‌ಐಟಿ ರಚಿಸಿರುವುದನ್ನು ಈ ಹಿಂದೆಯೇ ಸ್ವಾಗತಿಸಿದ್ದೇವೆ. ತಪ್ಪಿತಸ್ಥರಾದವರಿಗೆ ಶಿಕ್ಷೆ ಆಗಬೇಕು ಎಂದು ಒತ್ತಾಯಿಸಿದ್ದೇವೆ. ಚೆನ್ನೈ ಕಂಪನಿಯೊಂದರಲ್ಲಿ 3 ಕೋಟಿ ರೂ. ನೀಡಿ ಪೆನ್‌ಡ್ರೈವ್ ಖರೀದಿಸಿದ್ದಾರೆ. ಮಲೇಷಿಯಾಕ್ಕೆ ಹೋಗಿ, ಅಲ್ಲಿ ಪ್ರಯೋಗಾಲಯದಲ್ಲಿ ವಿಡಿಯೋ ತುಣುಕನ್ನು ಕಾಪಿ ಮಾಡಿ ಪೆನ್‌ಡ್ರೈವ್‌ಗೆ ಮತ್ತಷ್ಟು ವಿಡಿಯೋಗಳನ್ನು ಸೇರಿಸಿ ತಂದು ಬಿಡುಗಡೆ ಮಾಡಿದ್ದಾರೆ. ದೇವರಾಜೇಗೌಡ ನೀಡಿದ ಹೇಳಿಕೆ ನಂತರ ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್‌ಗೌಡರೊಂದಿಗೆ ಕಾರು ಚಾಲಕ ಕಾರ್ತಿಕ ಊಟ ಮಾಡಿರುವ, ಚುನಾವಣಾ ಪ್ರಚಾರ ಮಾಡಿರುವ ಚಿತ್ರಗಳು ಹರಿದಾಡುತ್ತಿವೆ. ಆದರೂ ಶ್ರೇಯಸ್‌ಗೌಡ, ಕಾರ್ತಿಕ್ ನನಗೆ ಗೊತ್ತೇ ಇಲ್ಲ ಎಂದು ಹೇಳಿಕೆ ನೀಡಿದ್ದಾರೆ. ಇದರಿಂದ ಕರ್ನಾಟಕದ ಪೊಲೀಸರಿಂದ ತನಿಖೆ ಪಾರದರ್ಶಕವಾಗಿ ಆಗಲ್ಲ. ಚೆನ್ನೈ ಹಾಗೂ ಮಲೇಷಿಯಾದ ಪ್ರಯೋಗಾಲಯದಲ್ಲಿ ತನಿಖೆ ಮಾಡಲು ಸಾಧ್ಯವಿಲ್ಲ. ಈ ಕಾರಣದಿಂದ ಈ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸಿದರು.

ರಾಜ್ಯ ಸರ್ಕಾರ ಈ ಪ್ರಕರಣವನ್ನು ಸಿಬಿಐಗೆ ವಹಿಸದಿದ್ದರೆ, ಸಂತ್ರಸ್ತೆಯರ ರಕ್ಷಣೆಗಾಗಿ ಸುಪ್ರಿಂ ಕೋರ್ಟ್‌ಗೆ ನಾವೇ ಅರ್ಜಿ ಸಲ್ಲಿಸಿ, ಸಿಬಿಐ ತನಿಖೆಗೆ ಸೂಚನೆ ನೀಡುವಂತೆ ಮನವಿ ಮಾಡುತ್ತೇವೆ. ಈ ಹೋರಾಟದಿಂದ ನಾವು ಹಿಂದೆ ಸರಿಯುವುದಿಲ್ಲ. ಪ್ರಕರಣದ ರೂವಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ತಪ್ಪು ಮಾಡಿದ್ದಾನೆ ಎನ್ನುವವರು ಎಷ್ಟು ಅಪರಾಧಿಯೋ, ಪೆನ್‌ಡ್ರೈವ್ ಹಂಚಿದವರೂ ಅಷ್ಟೇ ಅಪರಾಧಿಗಳಾಗಿದ್ದಾರೆ ಎಂದು ಕಿಡಿಕಾರಿದರು.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಪ್ರತಿದಿನ ಎಸ್‌ಐಟಿ ಅಧಿಕಾರಿಗಳ ಸಭೆ ನಡೆಸಿ, ಯಾರ ಮೇಲೆ ಕೇಸ್ ಹಾಕಬೇಕು. ಯಾರನ್ನು ಪ್ರಕರಣದಲ್ಲಿ ಸಿಲುಕಿಸಬೇಕು ಎಂದು ಸಲಹೆ ನೀಡುತ್ತಿದ್ದಾರೆ. ಈ ಸಂಚಿನಲ್ಲಿ ಇಡೀ ಸರ್ಕಾರವೇ ಭಾಗಿಯಾಗಿರುವಂತೆ ಕಂಡು ಬಂದಿದೆ. ಪೆನ್‌ಡ್ರೈವ್‌ನಲ್ಲಿ ಮಹಿಳೆಯರ ಅಶ್ಲೀಲ ಚಿತ್ರಗಳನ್ನು ಬಿತ್ತರಿಸುವ ಮೂಲಕ ಮಹಿಳೆಯ ಮಾನ ಹರಾಜು ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಾದೇಶಿಕ ಪಕ್ಷ ಹತ್ತಿಕ್ಕುವ ಹುನ್ನಾರ: ಮಾಜಿ ಸಚಿವ ಸಾ.ರಾ.ಮಹೇಶ ಮಾತನಾಡಿ, ಲೈಂಗಿಕ ದೌರ್ಜನ್ಯ ಪ್ರಕರಣವನ್ನು ರಾಜಕಾರಣಕ್ಕಾಗಿ ಬಳಸಿಕೊಳ್ಳುತ್ತಿರುವುದು ಖಂಡನೀಯ. ಸರ್ಕಾರ ತನಿಖೆಗಾಗಿ ರಚಿಸಿರುವ ಎಸ್‌ಐಟಿ ಕಾನೂನುಬದ್ಧವಾಗಿ ಕಾರ್ಯಾಚರಿಸುತ್ತಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಕೈಗೊಂಬೆಯಾಗಿ ವರ್ತಿಸುತ್ತಿದೆ. ಸಂತ್ರಸ್ತೆ ಎಂದು ಕರೆದುಕೊಂಡು ಹೋಗಿರುವ ಮಹಿಳೆಯನ್ನು ಇದುವರೆಗೂ ನ್ಯಾಯಾಧೀಶರ ಮುಂದೆ ಹಾಜರುಪಡಿಸಿಲ್ಲ. ಹೇಳಿಕೆಯನ್ನೂ ದಾಖಲಿಸಿಲ್ಲ. ಈ ಎಲ್ಲಾ ಬೆಳವಣಿಗೆಯನ್ನು ಗಮನಿಸಿದರೆ, ಎಸ್‌ಐಟಿಯಿಂದ ನಿಷ್ಪಕ್ಷಪಾತ ತನಿಖೆ ಅನುಮಾನ. ಈ ಹಿನ್ನೆಲೆಯಲ್ಲಿ ಸಿಬಿಐ ತನಿಖೆ ನಡೆಸುವಂತೆ ಒತ್ತಾಯಿಸಲಾಗುತ್ತಿದೆ ಎಂದರು.

ಪೆನ್‌ಡ್ರೈವ್ ಪ್ರಕರಣ ಹಾಗೂ ಪ್ರಾದೇಶಿಕ ಪಕ್ಷವನ್ನು ಮುಗಿಸುವ ಹುನ್ನಾರ ನಡೆಸಲಾಗುತ್ತಿದೆ. ಚುನಾವಣಾ ಲಾಭಕ್ಕಾಗಿ ಮತದಾನದ ಎರಡು ದಿನಗಳ ಮುನ್ನ ಪೆನ್‌ಡ್ರೈವ್ ಹಂಚಿಕೆ ಮಾಡಲಾಗಿದೆ. ಇದುವರೆಗೂ ಪೆನ್‌ಡ್ರೈವ್ ಹಂಚಿಕೆ ಪಿತಾಮಹರನ್ನು ಪತ್ತೆ ಮಾಡಿಲ್ಲ. ಯಾರನ್ನು ಬಂಧಿಸಿಲ್ಲ ಎಂದು ಕಿಡಿಕಾರಿದರು.

ಬಳಿಕ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಶಾಸಕರಾದ ಕೆ.ಮಹದೇವು, ಅಶ್ವಿನ್‌ಕುಮಾರ್, ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಮಾಜಿ ಮೇಯರ್‌ಗಳಾದ ಆರ್.ಲಿಂಗಪ್ಪ, ಎಂ.ಜೆ.ರವಿಕುಮಾರ್, ಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್, ಪ್ರಧಾನ ಕಾರ್ಯದರ್ಶಿಗಳಾದ ಒಂಟಿಕೊಪ್ಪಲ್ ಸತೀಶ್, ಗಂಗಾಧರಗೌಡ, ಪ್ರಶಾಂತ್, ರಾಮು, ಮುದ್ದುರಾಜ್, ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಎಂ.ಹೇಮಾವತಿ ಇನ್ನಿತರರು ಉಪಸ್ಥಿತರಿದ್ದರು.

ಕೆಂಪಯ್ಯರ ಮೂಲಕ ನನ್ನ ಬಂಧಿಸಲು ಸಿಎಂ ಹಠ ತೊಟ್ಟಿದ್ದರು!

●ಮಾಜಿ ಸಿಎಂ ಕುಮಾರಸ್ವಾಮಿ ಸ್ಫೋಟಕ ಮಾಹಿತಿ ●ವಕೀಲರ ಸಲಹೆಯಂತೆ ನಾನು ಕೋರ್ಟ್‌ಗೆ ಹೋಗಲಿಲ್ಲ; ಹೋಗಿದ್ದರೆ ಬಂಧಿಸುತ್ತಿದ್ದರು ●ನಾನು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕನಾಗಿ ರೇವಣ್ಣ ಪರ ನಿಂತಿದ್ದೇನೆ; ಪ್ರಜ್ವಲ್ ಪರ ಅಲ್ಲ

ಬೆಂಗಳೂರು, ಮೇ 8(ಕೆಎಂಶಿ)– ನಿವೃತ್ತ ಪೊಲೀಸ್ ಅಧಿಕಾರಿ ಕೆಂಪಯ್ಯ ಅವರನ್ನು ಇಟ್ಟುಕೊಂಡು ನನ್ನನ್ನು ಒಂದು ದಿನವಾದರೂ ಬಂಧಿಸಲೇಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಠ ತೊಟ್ಟಿದ್ದರು ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸದ ಪ್ರಜ್ವಲ್ ರೇವಣ್ಣ ಅವರ ಸಿಡಿಗಳನ್ನು ಬಹಿರಂಗಪಡಿಸಿದವರನ್ನು ಬಂಧಿಸಿ ಎಂದರೆ, ಯಾವ್ಯಾವುದೋ ವಿಷಯವನ್ನು ಕೆದಕುತ್ತಿದ್ದಾರೆ ಎಂದರು.

ಈ ಹಿಂದೆ, ಒಂದು ಪ್ರಕರಣಕ್ಕೆ ಸಂಬಂಧಿಸಿದಂತೆ ವಕೀಲರು ಸಲಹೆ ನೀಡಿದರು. ಅವರ ಸಲಹೆಯಂತೆ ನಾನು ನ್ಯಾಯಾಲಯಕ್ಕೆ ತೆರಳಲಿಲ್ಲ, ತೆರಳಿದ್ದರೆ ಅಂದೇ ನನ್ನನ್ನು ಬಂಧಿಸಿರುತ್ತಿದ್ದರು. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕನಾಗಿ ಎಚ್.ಡಿ.ರೇವಣ್ಣ ಪರ ಹೋರಾಟ ಮಾಡುತ್ತಿದ್ದೇನೆಯೇ ಹೊರತು ಪ್ರಜ್ವಲ್ ರೇವಣ್ಣ ಪರ ಅಲ್ಲ. ಸಂಸದ ಪ್ರಜ್ವಲ್ ರೇವಣ್ಣ ಅವರ ಪೆನ್‌ಡ್ರೈವ್ ಬಿಡುಗಡೆ ಮಾಡಿದವರನ್ನು ಬಂಧಿಸುತ್ತಿಲ್ಲ ಏಕೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರನ್ನು ಪ್ರಶ್ನಿಸಿದ್ದಾರೆ.

> ಡಿ.ಕೆ. ಸಂಸ್ಕೃತಿ ಎಲ್ಲರಿಗೂ ತಿಳಿದಿದೆ. ಅವರು ಸಾಚಾ ಆಗಿದ್ದರೆ, ವಕೀಲ ದೇವರಾಜೇಗೌಡ ಅವರೊಡನೆ ಏಕೆ ಮಾತನಾಡಿದರು. ಅಷ್ಟೇ ಅಲ್ಲ ಐದು ಜನರನ್ನು ಇಟ್ಟುಕೊಂಡಿದ್ದೇನೆ ಎಂದಿದ್ದಾರೆ. ಮುಖ್ಯಮಂತ್ರಿಗೆ ಮಾನ–ಮರ್ಯಾದೆ ಇದೆಯಾ, ಪರಮೇಶ್ವರ್ ನಿಮಗೆ ಬೆನ್ನು ಮೂಳೆ ಇದೆಯಾ, ನನ್ನನ್ನು ಹಿಟ್ ಅಂಡ್ ರನ್ ಅಂತೀರಿ. ಎಸ್‌ಐಟಿ ಅಧಿಕಾರಿಗಳಿಗೆ ಕ್ರೆಡಿಬಿಲಿಟಿ ಇದೆಯಾ? –ಕುಮಾರಸ್ವಾಮಿ

ವಿಡಿಯೋ ಲೀಕ್ ಮಾಡಿದವರ ವಿರುದ್ಧ ಮೊದಲು ಕ್ರಮ ಕೈಗೊಳ್ಳಲಿ. ಆದರೆ ಇದುವರೆಗೂ ಏನೂ ಮಾಡಿಲ್ಲ. ಪ್ರಮುಖ ಆರೋಪಿ ಕಾರ್ತಿಕ್‌ಗೆ ಗಿರಿನಗರದಲ್ಲಿರುವ ಖಾಸಗಿ ಚಾನೆಲ್ ಒಂದರಲ್ಲಿ ತರಬೇತಿ ಕಾರ್ಯ ನಡೆದಿದೆ.



ನಾನು ಒಂದು ಕರೆ ಕೊಟ್ಟರೆ ಅವನನ್ನು ಹಿಡಿದು ತರಬಹುದು. ಆದರೆ ನಾನು ಗಲಭೆ ಮತ್ತು ಪ್ರಚೋದನೆಗೆ ಅವಕಾಶ ನೀಡುವುದಿಲ್ಲ. ಬಂಡೆ, ಆತನನ್ನು ಹೇಗೆ ರಕ್ಷಣೆ ಮಾಡುತ್ತೆ ಎಂದು ಕಾಯುತ್ತಿದ್ದೇನೆ. ಬಂಡೆ, ಸದಾ ರಕ್ಷಣೆ ಕೊಡುತ್ತೆ ಎಂದು ಕಾರ್ತಿಕ್ ಅಂದುಕೊಂಡಿದ್ದಾನೆ. ನವೀನ್, ಕಾರ್ತಿಕ್, ಶ್ರೇಯಸ್‌ಗೆ ನೋಟಿಸ್ ಕೊಟ್ಟಿಲ್ಲ. ರೇವಣ್ಣಗೆ ಮಾತ್ರ ನೋಟಿಸ್ ಕೊಟ್ಟಿದ್ದೀರಿ. ಯಾವ ಪ್ರಕರಣವನ್ನೂ ತಾರ್ಕಿಕವಾಗಿ ಅಂತ್ಯ ಮಾಡಿಲ್ಲ. ಪ್ರಜ್ವಲ್ ವಿರುದ್ಧ 2,900 ಪ್ರಕರಣ ಇವೆ ಎಂದಿದ್ದಾರೆ. ಆದರೆ ಇದುವರೆಗೂ ಒಂದೂ ಕೇಸ್ ಆಗಿಲ್ಲ. ಸಂತ್ರಸ್ತೆಯನ್ನು ಇನ್ನೂ ಹಾಜರು ಮಾಡಿಲ್ಲ. ಅವರನ್ನು ತೋಟದ ಮನೆಯಲ್ಲಿ ಹಿಡಿದಿರಾ, ಸಂತ್ರಸ್ತೆ ಸಿಕ್ಕಿದ್ದು ಸಂಬಂಧಿಕರ ಮನೆಯಲ್ಲಿ ಎಂದರು.

ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ನಿಂದ ಅಕ್ಷಯ ತೃತೀಯ ನಿಧಿಯ ಹುಡುಕಾಟ

ಮೈಸೂರು, ಮೇ 8– ಅಮ್ಯೂಸ್‌ಮೆಂಟ್ ಪಾರ್ಕ್‌ಗಳ ಇತಿಹಾಸದಲ್ಲೇ ಪ್ರಪ್ರಥಮ ಬಾರಿಗೆ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಗೋಲ್ಡ್ ಟ್ರೆಷರ್ ಹಂಟ್ ಆಯೋಜಿಸುವ ಮೂಲಕ ದಾಖಲೆ ಬರೆಯಲು ಮುಂದಾಗಿದೆ. ಈ ರೋಮಾಂಚಕಾರಿ ಕಾರ್ಯಕ್ರಮ ಸಂತೋಷ ಪ್ರಿಯರ ಉತ್ಸಾಹವನ್ನು ದ್ವಿಗುಣಗೊಳಿಸುವುದಲ್ಲದೆ, ವಿಶೇಷ ಅನುಭವವನ್ನು ನೀಡಲಿದೆ. ಈ ಶುಭ ದಿನದಂದು ಅತಿಥಿಗಳು ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ನಲ್ಲಿ ಎಲ್ಲಾ ರೋಮಾಂಚನಕಾರಿ ರೈಡ್‌ಗಳ ಆಕರ್ಷಣೆಯೊಂದಿಗೆ ಚಿನ್ನದ ನಾಣ್ಯ ಗೆಲ್ಲುವ ಅವಕಾಶವೂ ಇದೆ.



ಅಕ್ಷಯ ತೃತೀಯ ಸಮೃದ್ಧಿ ಮತ್ತು ಅದೃಷ್ಟ ತರುವ ದಿನವಾಗಿರುವುದರಿಂದ ಮೇ 10 (ಶುಕ್ರವಾರ) ರಂದು ಪಾರ್ಕ್‌ಗೆ ಭೇಟಿ ನೀಡಿ ಸಂತೋಷ, ಸಾಹಸ, ಸಂಭ್ರಮದ ಜೊತೆಗೆ ಈ ನಿಧಿ ಹುಡುಕಾಟದಲ್ಲಿ ಭಾಗವಹಿಸಬಹುದು. ಚಿನ್ನದ ನಾಣ್ಯ ಹುಡುಕಾಟದ ಅವಕಾಶದೊಂದಿಗೆ ಆನಂದದಿಂದ ಆ ದಿನವನ್ನು ಕಳೆಯುವ ಸದವಕಾಶವಿದೆ. ಜಿಆರ್‌ಎಸ್ ಬೇಸಿಗೆ ಹಬ್ಬ (ಸಮ್ಮರ್ ಫೆಸ್ಟಿವಲ್) 2024 ಅತಿಥಿಗಳು ಪಾರ್ಕ್‌ನ ಹೊಸ 3 ಆಕರ್ಷಕ ರೈಡ್‌ಗಳಾದ ಕ್ರೇಜಿ ಸ್ಪಿನ್, ಡಬ್ಬಲ್ ಸೈಕಲ್ ಮತ್ತು ಹ್ಯೂಮನ್ ಗೈರೋ ಥ್ರಿಲ್ಲಿಂಗ್ ರೈಡ್‌ಗಳ ಅನುಭವ ಪಡೆಯುವುದರ ಜೊತೆಗೆ ವಿವಿಧ ರೀತಿಯ ರುಚಿಕರವಾದ ಆಹಾರಗಳ ಆಯ್ಕೆಗಳು ಮತ್ತು ಲೈವ್ ಮನರಂಜನೆ ಸೇರಿದಂತೆ ಪಾರ್ಕ್‌ನ ವಿವಿಧ (ನೇರ) ಕಾರ್ಯಕ್ರಮಗಳನ್ನು ಆನಂದಿಸಬಹುದು. ಈ ಕಾರ್ಯಕ್ರಮ ದಿನಪೂರ್ತಿ ಉತ್ಸಾಹ ಮತ್ತು ಸಂತೋಷ ತುಂಬಲಿದೆ. ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ನಲ್ಲಿ ಗೋಲ್ಡ್ ಟ್ರೆಷರ್ ಹಂಟ್ (ಚಿನ್ನದ ನಿಧಿಯ ಹುಡುಕಾಟ) ಮತ್ತು ಇತರೆ ಕಾರ್ಯಕ್ರಮಗಳ ಕುರಿತು ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 9590080808.

ಪೂರ್ಣಯ್ಯ ನಾಲೆ ಒತ್ತುವರಿ ತ್ವರಿತವಾಗಿ ತೆರವುಗೊಳಿಸಿ; ಕುಕ್ಕರಹಳ್ಳಿ ಕೆರೆ ಸಂರಕ್ಷಿಸಿ

ಜಿಲ್ಲಾಡಳಿತಕ್ಕೆ ಮೈಸೂರು ಗ್ರಾಹಕರ ಪರಿಷತ್ ಒತ್ತಾಯ

ಮೈಸೂರು, ಮೇ 8 (ಆರ್‌ಕೆ)– ಮೈಸೂರಿನ ಮಹತ್ವದ ಪೂರ್ಣಯ್ಯ ನಾಲೆ ಒತ್ತುವರಿ ತೆರವುಗೊಳಿಸಿ ಕುಕ್ಕರಹಳ್ಳಿ ಕೆರೆ ಸಂರಕ್ಷಿಸುವಂತೆ ಮೈಸೂರು ಗ್ರಾಹಕರ ಪರಿಷತ್ (ಎಂಜಿಪಿ) ಪದಾಧಿಕಾರಿಗಳು ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ.



ಮೈಸೂರಿನ ಯಾದವಗಿರಿಯಲ್ಲಿರುವ ಎಂಜಿಪಿ ಕಚೇರಿಯಲ್ಲಿ ಪದಾಧಿಕಾರಿಗಳು ಬುಧವಾರ ಸಭೆ ನಡೆಸಿದರು.

ಮೇ 20ರಂದು ಜಿಲ್ಲಾಧಿಕಾರಿಗಳು ಕುಕ್ಕರಹಳ್ಳಿ ಕೆರೆ ಸಂರಕ್ಷಣೆ ಕುರಿತಂತೆ ಸಾರ್ವಜನಿಕರು, ಸಂಘ ಸಂಸ್ಥೆಗಳ ಮುಖಂಡರ ಸಭೆ ಆಯೋಜಿಸಿರುವ ಹಿನ್ನೆಲೆಯಲ್ಲಿ ಇಂದು ಮೈಸೂರಿನ ಯಾದವಗಿರಿಯಲ್ಲಿರುವ ಎಂಜಿಪಿ ಕಚೇರಿಯಲ್ಲಿ ಸಭೆ ನಡೆಸಿ ಚರ್ಚಿಸಿದ ಪದಾಧಿಕಾರಿಗಳು, ನೈಸರ್ಗಿಕ ತಾಣವಾಗಿರುವ ಕುಕ್ಕರಹಳ್ಳಿ ಕೆರೆಯು ಎಕಾಲಜಿಕಲ್ ಬ್ಯಾಲೆನ್ಸ್ ಮಾಡುವುದಲ್ಲದೆ, ಲಕ್ಷಾಂತರ ಜಲಚರಗಳಿಗೆ ಆಶ್ರಯವಾಗಿರುವುದರಿಂದ ಕೆರೆಗೆ ಮಳೆ ನೀರು ಹರಿದು ಬರುವ ರಾಜಕಾಲುವೆ ಒತ್ತುವರಿ ತೆರವುಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ.

ಕುಕ್ಕರಹಳ್ಳಿ ಕೆರೆಗೆ ಹರಿದು ಬರುತ್ತಿರುವ ಮಲೀನ ನೀರು, ತ್ಯಾಜ್ಯವನ್ನು ತಡೆಗಟ್ಟಬೇಕು. ಈಗಾಗಲೇ ಸಂರಕ್ಷಣೆಗಾಗಿ ರೂಪಿಸಿರುವ ಯೋಜನೆಗೆ ಡಿಪಿಆರ್ ತಯಾರಿಸಲು ಜವಾಬ್ದಾರಿ ಹೊತ್ತಿರುವ ದೆಹಲಿ ಮೂಲದ ಇಂಡಿಯನ್ ನ್ಯಾಷನಲ್ ಹೆರಿಟೇಜ್ (ಇಂಟ್ಯಾಕ್) ಸಂಸ್ಥೆಯು ವಸ್ತುಸ್ಥಿತಿ ಆಧಾರದಲ್ಲಿ ಸಮೀಕ್ಷೆ ನಡೆಸಿ ಸಮಗ್ರ ವರದಿ ನೀಡಬೇಕೆಂದು ಎಂಜಿಪಿ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.

ಡ್ರೋಣ್ ಕ್ಯಾಮೆರಾ ಮೂಲಕ ರಾಜಕಾಲುವೆ ಮಾರ್ಗವನ್ನು ಸರ್ವೆ ಮಾಡಿಸಿ ಒತ್ತುವರಿ ಮಾಡಿ ನಿವೇಶನ ಮತ್ತು ವಾಣಿಜ್ಯ ಕಟ್ಟಡ ನಿರ್ಮಿಸಲು ಅನುಮತಿ ನೀಡಿದ ಪ್ರಾಧಿಕಾರಗಳ ವಿರುದ್ಧ ಕಾನೂನು ಕ್ರಮ ಕೈಗೊಂಡು, ಕೂಡಲೇ ಒತ್ತುವರಿ ತೆರವುಗೊಳಿಸಿ ಮಳೆ ನೀರು ಕುಕ್ಕರಹಳ್ಳಿ ಕೆರೆಗೆ ಹರಿದು ಬರುವಂತೆ ಎಂಜಿಪಿಯ ಡಾ. ಭಾಮಿ ವಿ. ಶೆಣೈ ಅವರು ಜಿಲ್ಲಾಡಳಿತಕ್ಕೆ ಒತ್ತಾಯ ಮಾಡಿದರಲ್ಲದೆ, ಮೇ 20ರಂದು ನಡೆಯುವ ಸಭೆಯಲ್ಲಿ ಈ ಕುರಿತು ಚರ್ಚಿಸಲಾಗುವುದು ಎಂದರು.

ಈ ಹಿಂದೆ ಜಿಲ್ಲಾಧಿಕಾರಿಗಳಾಗಿದ್ದ ಹರ್ಷವರ್ಧನ್ ಅವರು ಮೂಲ ನಕ್ಷೆಯನ್ವಯ ಸರ್ವೆ ಮಾಡಿಸಿ ಸಂಪೂರ್ಣ ವರದಿ ತರಿಸಿಕೊಂಡು ನೈಜ ದಾಖಲೆಗಳೊಂದಿಗೆ ಪೂರ್ಣಯ್ಯ ನಾಲೆ ಒತ್ತುವರಿ ತೆರವುಗೊಳಿಸಲು ಪ್ರಯತ್ನಿಸಿದ್ದರಾದರೂ ಪ್ರಭಾವಿ ರಾಜಕೀಯ ವ್ಯಕ್ತಿಗಳು ಕಾರ್ಯಾಚರಣೆ ಮಾಡಲು ಬಿಟ್ಟಿರಲಿಲ್ಲ. ಆದರೆ ಈಗ ಉಚ್ಚ ನ್ಯಾಯಾಲಯವೇ ತೆರವುಗೊಳಿಸುವಂತೆ ಆದೇಶ ನೀಡಿರುವುದರಿಂದ ಜನಪ್ರತಿನಿಧಿಗಳನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಒತ್ತುವರಿ ತೆರವುಗೊಳಿಸಲು ಮುಂದಾಗುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲೂ ಸಭೆಯಲ್ಲಿ ನಿರ್ಧರಿಸಲಾಯಿತು ಎಂದರು.

ಈ ಸಂಬಂಧ ಮಾತನಾಡಿದ ಮುಡಾ ನಗರ ಯೋಜನಾ ಶಾಖೆ ನಿವೃತ್ತ ನಿರ್ದೇಶಕ ಪಿ.ಎಸ್.ನಟರಾಜ್, ಯಾವುದೇ ಟೆಂಡರ್ ಕರೆಯದೇ ಕುಕ್ಕರಹಳ್ಳಿ ಕೆರೆ ಸಂರಕ್ಷಣಾ ಯೋಜನೆಗೆ ಡಿಪಿಆರ್ ತಯಾರಿಸಲು ವರ್ಕ್ ಆರ್ಡರ್ ನೀಡಿರುವುದು ಹಾಗೂ 63,80,000 ರೂ.ಗಳಿಗೆ ಕಾರ್ಯಾದೇಶ ನೀಡಿರುವುದು ಕಾನೂನುಬಾಹಿರ ಎಂದು ಆರೋಪಿಸಿದರು. ಪರಿಸರ ಪ್ರೇಮಿಗಳು, ತಜ್ಞರು, ಜನ ಪ್ರತಿನಿಧಿಗಳು, ಸಂಘ ಸಂಸ್ಥೆ ಪ್ರಮುಖರು ಹಾಗೂ ಸಾರ್ವಜನಿಕರ ಅಭಿಪ್ರಾಯ, ಸಲಹೆಗಳನ್ನು ಪಡೆಯದೇ ದೆಹಲಿ ಮೂಲದ ಸಂಸ್ಥೆಗೆ ಕುಕ್ಕರಹಳ್ಳಿ ಕೆರೆ ಅಭಿವೃದ್ಧಿ ಮತ್ತು ಸಂರಕ್ಷಣೆಗೆ ಡಿಪಿಆರ್ ತಯಾರಿಸಲು ಕಾರ್ಯಾದೇಶ ಕೊಡಿಸಿ ಮುಡಾದಿಂದ ಹಣ ಕೊಡಿಸುತ್ತಿರುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು.

ಎಂಜಿಪಿ ಅಧ್ಯಕ್ಷೆ ಶೋಭನಾ ಶಾಂಬಶಿವಂ, ಸದಸ್ಯರಾದ ಅಶ್ವತ್ಥನಾರಾಯಣ, ಕಿರಣ್‌ಕುಮಾರ್ ಚರ್ಚೆಯಲ್ಲಿ ಉಪಸ್ಥಿತರಿದ್ದು ಸಲಹೆ, ಅಭಿಪ್ರಾಯ ನೀಡಿದರು.

ಅಕ್ಷಯ ತೃತೀಯ ಸುಸಂದರ್ಭದಲ್ಲಿ ಮೈಸೂರಿನ ಪ್ರಸಿದ್ಧ ಚಿನ್ನಾಭರಣ ಮಳಿಗೆಗಳಲ್ಲಿ ಬಂಪರ್ ಆಫರ್

ಮೈಸೂರು, ಮೇ 8(ಎಂಕೆ)–ಅಕ್ಷಯ ತೃತೀಯ ಶುಭ ಸಂದರ್ಭದಲ್ಲಿ ಸಾಂಸ್ಕೃತಿಕ ನಗರಿಯ ಸುಪ್ರಸಿದ್ಧ ಚಿನ್ನಾಭರಣ ವ್ಯಾಪಾರ ಮಳಿಗೆಗಳಲ್ಲಿ ಭರ್ಜರಿ ರಿಯಾಯಿತಿ ಹಾಗೂ ಆಕರ್ಷಕ ಉಡುಗೊರೆ ಘೋಷಣೆ ಮಾಡಲಾಗಿದೆ.



ಕಲ್ಯಾಣ್ ಜುವೆಲರ್ಸ್

ಮೇ 9 ಮತ್ತು 10 ರಂದು ವಿಶೇಷ ರಿಯಾಯಿತಿಗಳನ್ನು ಘೋಷಣೆ ಮಾಡಿದ್ದು, ಕಲ್ಯಾಣ್ ಜುವೆಲರ್ಸ್‌ನಲ್ಲಿ ಎಲ್ಲಾ ಬಗೆಯ ಚಿನ್ನಾಭರಣಗಳ ಮೇಕಿಂಗ್ ಚಾರ್ಜಸ್ ಮೇಲೆ ಶೇ.25ರಷ್ಟು ಭರ್ಜರಿ ರಿಯಾಯಿತಿ ನೀಡಲಾಗಿದೆ. ಪ್ರತಿದಿನ ಬೆಳಗ್ಗೆ 8 ಗಂಟೆಯಿಂದ ಶೋ ರೂಂ ತೆರೆದಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಟೋಲ್ ಫ್ರೀ ನಂಬರ್ 18004257333 ಸಂಪರ್ಕಿಸಬಹುದು.

ಕಾರ್ಟಲೇನ್

ಕಾರ್ಟಲೇನ್(ಎ ತನಿಷ್ಕ್ ಪಾರ್ಟನರ್‌ಶಿಪ್) ಜುವೆಲರ್ಸ್‌ನಲ್ಲಿ ಅಕ್ಷಯ ತೃತೀಯ ಅಂಗವಾಗಿ ವಜ್ರಾಭರಣಗಳ 4500ಕ್ಕೂ ಅಧಿಕ ಡಿಸೈನ್‌ಗಳ ಬೆಲೆಗಳಲ್ಲಿ ಶೇ.20ರಷ್ಟು ಆಕರ್ಷಕ ರಿಯಾಯಿತಿ ಲಭ್ಯವಿದೆ. ಜೊತೆಗೆ ಎಸ್‌ಬಿಐ ಕಾರ್ಡ್‌ಗೆ ಶೇ.5ರಷ್ಟು ಇನ್‌ಸ್ಟಂಟ್ ರಿಯಾಯ್ತಿ ಲಭ್ಯವಿದೆ. ಕನಿಷ್ಠ 25 ಸಾವಿರ ರೂ.ವರೆಗಿನ ವಹಿವಾಟಿಗೆ ಪ್ರತಿಕಾರ್ಡ್‌ಗೆ ಗರಿಷ್ಠ 2 ಸಾವಿರ ರಿಯಾಯ್ತಿ ಇದೆ. ಈ ಸದವಕಾಶ ಮೇ.10ರವರೆಗೆ ಲಭ್ಯವಿದೆ. ಮೊದಲ ಖರೀದಿಗೆ 500 ರೂ. ರಿಯಾಯ್ತಿ, 50 ಸಾವಿರ ರೂ.ವರೆಗಿನ ಖರೀದಿಗೆ ಶೇ.3(ಗರಿಷ್ಠ 3000), 80 ಸಾವಿರ ರೂ.ಖರೀದಿಗೆ ಶೇ.5 ರಷ್ಟು, 1.25 ಲಕ್ಷ ರೂ.ಖರೀದಿಗೆ ಶೇ.7 ರಷ್ಟು ರಿಯಾಯ್ತಿ ನೀಡಲಾಗುವುದು.

ತೊಳಸಿ ಜ್ಯೂಯಲ್ಸ್

ಅಶೋಕ ರಸ್ತೆ, ವಿವಿ ಮೊಹಲ್ಲಾ ಟೆಂಪಲ್ ರೋಡ್ ಹಾಗೂ ನಂಜನಗೂಡು ಎಂಜಿಎಸ್ ರಸ್ತೆಯಲ್ಲಿರುವ ತೊಳಸಿ ಜ್ಯೂಯಲ್ಸ್‌ನಲ್ಲಿ ಪ್ರತಿ 4 ಗ್ರಾಂ ಚಿನ್ನದ ಮೇಲೆ 750 ರೂ. ರಿಯಾಯಿತಿ, ಬೆಳ್ಳಿಯ ಮೇಲೆ ಶೇ.4ರಷ್ಟು ಹಾಗೂ ಪ್ರತಿ ಕ್ಯಾರೆಟ್ ವಜ್ರಗಳ ಮೇಲೆ 5000 ರೂ. ರಿಯಾಯಿತಿ ಘೋಷಣೆ ಮಾಡಲಾಗಿದೆ.

ಭೀಮಾ ಅಂಡ್ ಬ್ರದರ್ಸ್

ಮೈಸೂರಿನ ಡಿ.ದೇವರಾಜ ಅರಸು ರಸ್ತೆ, ಮಂಡ್ಯ ಮಹಾವೀರ್ ವೃತ್ತದಲ್ಲಿನ ಭೀಮಾ ಅಂಡ್ ಬ್ರದರ್ಸ್ ಜುವೆಲರ್ಸ್‌ನಲ್ಲಿ 22 ಕ್ಯಾರೆಟ್ ಚಿನ್ನದ ಆಭರಣಗಳ ಮೇಲೆ ಪ್ರತಿ ಗ್ರಾಂಗೆ 400 ರೂ. ರಿಯಾಯಿತಿ, 25 ಗ್ರಾಂವರೆಗೆ 250 ರೂ., 25–75 ಗ್ರಾಂವರೆಗೆ 300 ರೂ. ಹಾಗೂ 75 ಗ್ರಾಂಗಿಂತ ಅಧಿಕ ಖರೀದಿಗೆ 400 ರೂ. ವರೆಗೆ ರಿಯಾಯಿತಿ ನೀಡಲಾಗುತ್ತಿದ್ದು, ಮೇ 10ರವರೆಗೆ ಈ ಕೊಡುಗೆ ಲಭ್ಯವಿದೆ.

ಶ್ರೀ ಕುಮರನ್ ಜ್ಯುವೆಲರ್ಸ್

ಮೈಸೂರಿನಲ್ಲಿ ನೂತನವಾಗಿ ಆರಂಭಗೊಂಡಿರುವ ಶ್ರೀ ಕುಮರನ್ ಜ್ಯುವೆಲರ್ಸ್‌ನಲ್ಲಿ ಭರ್ಜರಿ ಆಫರ್‌ಗಳನ್ನು ನೀಡಲಾಗಿದೆ. ಒಂದು ಸಾವರಿನ್ ಚಿನ್ನಾಭರಣ ಖರೀದಿಗೆ 1000 ರೂ. ರಿಯಾಯಿತಿ, ಡೈಮಂಡ್ ಸ್ಟೋನ್ ಮೇಲೆ ಶೇ.25 ರಷ್ಟು, ಬೆಳ್ಳಿ ಪದಾರ್ಥಗಳ ವಿಎ ಮೇಲೆ ಶೇ.50 ರಷ್ಟು, ಅರೋರಾ ಬೆಳ್ಳಿ ಪಾತ್ರೆಗಳ ವಿಎ ಮೇಲೆ ಶೇ.10ರಷ್ಟು ರಿಯಾಯ್ತಿ ಅಲ್ಲದೆ ಆಕರ್ಷಕ ಉಡುಗೊರೆಗಳು ದೊರೆಯಲಿವೆ.

ತನಿಷ್ಕ್ ಮಿಯಾ

ತನಿಷ್ಕ್‌ನ ಮಿಯಾ ಜುವೆಲರ್ಸ್‌ನಲ್ಲಿ ಹೆಚ್ಚು ಖರೀದಿಸಿ ಅಧಿಕ ಉಳಿಸಿ ಎಂಬಂತೆ ಅಕ್ಷಯ ತೃತೀಯ ಅಂಗವಾಗಿ 75 ಸಾವಿರಕ್ಕೂ ಹೆಚ್ಚಿನ ವಜ್ರಾಭರಣ ಖರೀದಿ ಮಾಡುವ ಮೂಲಕ ಶೇ.15 ರಷ್ಟು ರಿಯಾಯಿತಿ ಪಡೆಯಬಹುದಾಗಿದೆ. ಸರಳ ಚಿನ್ನಾಭರಣಗಳ ಮೇಕಿಂಗ್ ಚಾರ್ಜಸ್ ಮೇಲೆ ಶೇ.10 ರಷ್ಟು ರಿಯಾಯಿತಿ ನೀಡಿದ್ದು, ಒಂದು ವಜ್ರದ ಆಭರಣ ಖರೀದಿಸಿದರೆ ಶೇ.3 ರಷ್ಟು, 2 ಆಭರಣ ಖರೀದಿಗೆ ಶೇ.10 ಹಾಗೂ 3 ವಜ್ರಾಭರಣ ಖರೀದಿಸಿದರೆ ಶೇ.15 ರಷ್ಟು ರಿಯಾಯಿತಿ ಘೋಷಣೆ ಮಾಡಲಾಗಿದೆ.

ಜೋಯಾಲುಕ್ಕಾಸ್

ಜೋಯಾಲುಕ್ಕಾಸ್ ಜುವೆಲ್ಲರಿಯಲ್ಲಿ 10 ಸಾವಿರ ರೂ. ಮತ್ತು ಅಧಿಕ ಮೊತ್ತದ ಬೆಳ್ಳಿ ಆಭರಣ ಖರೀದಿ ಮೇಲೆ 500 ರೂ.ಗಳ ಗಿಫ್ಟ್ ವೋಚರ್, 50 ಸಾವಿರ ರೂ. ಮತ್ತು ಅಧಿಕ ಮೊತ್ತದ ಚಿನ್ನಾಭರಣ ಖರೀದಿ ಮೇಲೆ 1000 ರೂ. ಗಿಫ್ಟ್ ವೋಚರ್ ಹಾಗೂ 50 ಸಾವಿರ ರೂ. ಮತ್ತು ಅಧಿಕ ಮೊತ್ತ ವಜ್ರ, ಅನ್ಕಟ್ ವಜ್ರ ಮತ್ತು ಅನರ್ಘ್ಯ ರತ್ನಾಭರಣಗಳ ಖರೀದಿ ಮೇಲೆ 2000 ರೂ.ಗಳ ಗಿಫ್ಟ್ ವೋಚರ್ ನೀಡಲಾಗುವುದು.

ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್

ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನಲ್ಲಿ ಅಕ್ಷಯ ತೃತೀಯ ಅಂಗವಾಗಿ ಚಿನ್ನಾಭರಣಗಳ ಮೇಕಿಂಗ್ ಚಾರ್ಜ್ ಮೇಲೆ ಶೇ.25 ರಷ್ಟು, ಪ್ರಿಶಿಯಾ, ಎರಾ ಮತ್ತು ಸ್ಟಡ್ಡ್ ಆಭರಣಗಳ ಮೇಕಿಂಗ್ ಚಾರ್ಜ್ ಮೇಲೆ ಹಾಗೂ ವಜ್ರದ ಮೌಲ್ಯದ ಮೇಲೆ ಶೇ.25ರಷ್ಟು ರಿಯಾಯ್ತಿ ನೀಡಲಾಗುತ್ತಿದೆ.

ಮೈಸೂರು ಮೆಡಿಕಲ್ ಕಾಲೇಜು 'ಶವಾಗಾರ' ಶೋಚನೀಯ

●4 ತಿಂಗಳಿಂದ ಕೆಟ್ಟು ನಿಂತ ಶವಾಗಾರದ ಕೋಲ್ಡ್ ಸ್ಟೋರೇಜ್ ಯಂತ್ರಗಳು ●ಮೃತದೇಹಗಳು ಕೊಳೆತು ದುರ್ವಾಸನೆ; ಸಿಬ್ಬಂದಿಯ ಪರಿಪಾಟಲು

ಮೈಸೂರು, ಮೇ 8(ಆರ್‌ಕೆ)–ಶತಮಾನೋತ್ಸವ ಸಂಭ್ರಮಕ್ಕೆ ದಿನಗಣನೆ ಆರಂಭವಾಗಿರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಂಎಂಸಿಅಂಡ್ ಆರ್‌ಐ) ತನ್ನ ಆಡಳಿತ ವೈಫಲ್ಯ, ಅವ್ಯವಸ್ಥೆಯಿಂದ ಮತ್ತೆ ಸುದ್ದಿಯಾಗಿದೆ. ಕಾಲೇಜು ಆವರಣದಲ್ಲಿರುವ ಶವಾಗಾರದ ಕೋಲ್ಡ್ ಸ್ಟೋರೇಜ್ ಯಂತ್ರಗಳು ಕಳೆದ 4 ತಿಂಗಳಿಂದ ಕೆಟ್ಟು ನಿಂತಿವೆ.

ಮರಣೋತ್ತರ ಪರೀಕ್ಷೆಗೆಂದು ಬರುವ ಮೃತ ದೇಹಗಳ ಸಂರಕ್ಷಿಸಲೆಂದು ಮೂರು ಶೀತಲ ಯಂತ್ರಗಳನ್ನು ಒದಗಿಸಲಾಗಿದೆ. ಒಂದೊಂದರಲ್ಲಿ 6ರಂತೆ ಏಕಕಾಲದಲ್ಲಿ 18 ಮೃತದೇಹಗಳನ್ನು ಸಂರಕ್ಷಿಸಬಹುದಾಗಿದೆ.



ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಆವರಣದಲ್ಲಿರುವ ಶವಾಗಾರ.

ಇದೀಗ ಕಳೆದ ಜನವರಿ ತಿಂಗಳಿಂದ ಈ ಶೀತಲ ಯಂತ್ರಗಳು ಕಾರ್ಯನಿರ್ವಹಿಸದ ಕಾರಣ ಮೃತದೇಹಗಳು ಕೊಳೆತು, ಗಬ್ಬೆದ್ದು ನಾರುವಂತಾಗಿದೆ. ಇದರ ಪರಿಣಾಮ ಶವಾಗಾರದಲ್ಲಿ ಕೆಲಸ ಮಾಡುವ ಸಿಬ್ಬಂದಿ, ಮರಣೋತ್ತರ ಪರೀಕ್ಷೆ ನಡೆಸುವ ಪ್ರಾಧ್ಯಾಪಕರು ಹಾಗೂ ಶವಗಳ ಸಂಬಂಧಿಕರು ದುರ್ವಾಸನೆಯಿಂದ ತೀವ್ರವಾಗಿ ಪರಿತಪಿಸುವಂತಾಗಿದೆ.

ಯಂತ್ರಗಳ ಕಂಪ್ರೆಸರ್ ಸ್ಟಾರ್ಟಿಂಗ್ ಕಿಟ್, ವಾಕ್ಯು ಮೈಸಿಂಗ್, ಲೀಕೇಜ್ ಚೆಕ್ಕಿಂಗ್ ಅಂಡ್ ಗ್ಯಾಸ್ ಚಾರ್ಜಿಂಗ್ ಉಪಕರಣಗಳು ಕಾರ್ಯನಿರ್ವಹಿಸುತ್ತಿಲ್ಲ. ಶೀಘ್ರ ದುರಸ್ತಿಯಾಗಬೇಕೆಂದು ಮೆಡಿಕಲ್ ಇಂಜಿನಿಯರ್ ಸಂಸ್ಥೆಯ ಡೀನ್ ಅಂಡ್ ಡೈರೆಕ್ಟರ್‌ಗೆ ಪತ್ರ ಬರೆದಿದ್ದಾರೆ. ಅಲ್ಲದೇ ಶವಾಗಾರದ ಮೇಲ್ವಿಚಾರಕರೂ ಸಹ ಜನವರಿ ತಿಂಗಳಲ್ಲೇ ಶೀತಲ ಯಂತ್ರಗಳು ಕೆಟ್ಟು ಹೋಗಿದ್ದು, ಮೃತದೇಹಗಳು ಡೀಕಂ ಪೋಸ್ ಆಗುತ್ತಿವೆ. ಸಿಬ್ಬಂದಿ ದುರ್ವಾಸನೆ ತಡೆಯಲಾರದೇ ನಿತ್ಯ ಬೆಳಗ್ಗೆಯಿಂದ ಸಂಜೆವರೆಗೂ ಮದ್ಯಪಾನ ಮಾಡಿ ಜಾಂಡೀಸ್ ಖಾಯಿಲೆಗೆ ತುತ್ತಾಗುತ್ತಿದ್ದಾರೆ. ಅವುಗಳನ್ನು ದುರಸ್ತಿ ಮಾಡಿಸಿಕೊಡುವಂತೆ ಹೇಳುತ್ತಾ ಇದ್ದರೂ, ಯಾರೂ ಇತ್ತ ಗಮನಹರಿಸುತ್ತಿಲ್ಲ. ಮೈಸೂರು ನಗರ ಹಾಗೂ ಜಿಲ್ಲೆಯಾದ್ಯಂತ ಸಂಭವಿಸುವ ಅಪಘಾತ, ವಿಷ ಸೇವನೆ, ಬೆಂಕಿ ಅವಘಡ, ಆತ್ಮಹತ್ಯೆಯಂತಹ ಪ್ರಕರಣಗಳಲ್ಲಿ ಗಾಯಗೊಂಡು ಅಥವಾ ಅಸ್ವಸ್ಥರಾಗಿ ಚಿಕಿತ್ಸೆಗೆಂದು ಮೈಸೂರು ಆಸ್ಪತ್ರೆಗಳಲ್ಲಿ ದಾಖಲಾಗಿ ಸಾವನ್ನಪ್ಪಿದ ವ್ಯಕ್ತಿಗಳ ಮೃತದೇಹಗಳನ್ನು ಈ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಲಾಗುತ್ತದೆ. ಪಾರ್ಥಿವ ಶರೀರಗಳನ್ನು ಪೂಜಿಸಿ, ಗೌರವಿಸಲಾಗುತ್ತದೆ. ಆದರೆ ನಮ್ಮ ಸರ್ಕಾರಿ ಆಸ್ಪತ್ರೆ ಶವಾಗಾರದಲ್ಲಿ ಬೇಕಾಬಿಟ್ಟಿಯಾಗಿರಿಸಿ ಅಗೌರವ ತೋರಿಸುತ್ತಿರುವುದು ವಿಪರ್ಯಾಸವೇ ಸರಿ.

ಕೋಟ್ಯಾಂತರ ರೂ. ಖರ್ಚು ಮಾಡಿ ಮೆಡಿಕಲ್ ಕಾಲೇಜು, ಅಧೀನದ ಆಸ್ಪತ್ರೆಗಳ ಪಾರಂಪರಿಕ ಕಟ್ಟಡಗಳನ್ನು ದುರಸ್ತಿ ಮಾಡಿ ಸುಣ್ಣ ಬಣ್ಣ ಬಳಿದು ಶತಮಾನೋತ್ಸವಕ್ಕೆ ಸಜ್ಜುಗೊಳಿಸುತ್ತಿದ್ದಾಗ್ಯೂ ಅದೇ ಕಾಲೇಜಿನ ಶವಾಗಾರವನ್ನು ಶೋಚನೀಯ ಸ್ಥಿತಿಯಲ್ಲಿರಿಸಿರುವುದು ಅಧಿಕಾರಿಗಳ ಕಾರ್ಯವೈಫಲ್ಯವನ್ನು ತೋರಿಸುತ್ತದೆ.

> ಅನಾಥ ಹಾಗೂ ಅಪರಿಚಿತ ಮೃತದೇಹಗಳನ್ನು ವಾರಸುದಾರರು ಪತ್ತೆಯಾಗುವವರೆಗೆ ಕನಿಷ್ಠ 4 ದಿನಗಳ ಕಾಲ ಶವಾಗಾರದಲ್ಲಿ ಇರಿಸಬೇಕಾಗುತ್ತದೆ. ನೀರಿಗೆ ಬಿದ್ದು ಸತ್ತಂತವರು, 2 ಅಥವಾ 3 ದಿನಗಳ ಬಳಿಕ ಪತ್ತೆಯಾದ ಶವಗಳು, ಸುಟ್ಟ ಗಾಯಗಳಿಂದ ಸಾವನ್ನಪ್ಪಿದವರು ಹಾಗೂ ಸಂಪೂರ್ಣವಾಗಿ ಡೀಕಂಪೋಸ್ ಆಗಿರುವ ಮೃತದೇಹಗಳು ಬಂದರಂತೂ, ಶವಾಗಾರದ ಒಳಗಷ್ಟೇ ಅಲ್ಲದೇ ಹೊರಭಾಗದಲ್ಲೂ ನಿಲ್ಲಲಾಗದಷ್ಟು ದುರ್ವಾಸನೆ ಬೀರುತ್ತದೆ ಎಂದು ಅಲ್ಲಿನ ಸಿಬ್ಬಂದಿ ಅಳಲು ತೋಡಿಕೊಂಡಿದ್ದಾರೆ.



ಹಂಚ್ಯಾ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರೂ ಆದ ಜೆಡಿಎಸ್ ಮುಖಂಡ ಜಿ.ಟಿ.ಆರ್. ಮಂಜು ಅವರ 40ನೇ ವರ್ಷದ ಹುಟ್ಟುಹಬ್ಬವನ್ನು ಹಂಚ್ಯಾ ಗ್ರಾಮದಲ್ಲಿ ಮಾಜಿ ಸಚಿವರು, ಶಾಸಕರಾದ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ನಂದೀಶ ಹಂಚೆ, ಗ್ರಾಮದ ಮುಖಂಡರಾದ ಮಂಜು, ತಮ್ಮಣ್ಣ, ಬೋರೇಗೌಡ, ನಂದೀಶ್, ನಾಡನಹಳ್ಳಿ ಮಧುಸೂದನ್, ಕುಪ್ಪೇಗಾಲ ಬಾಬು ಇತರರು ಉಪಸ್ಥಿತರಿದ್ದರು.

ಸಿಎಂ, ಡಿಸಿಎಂ ವಿರುದ್ಧ ದೇವರಾಜೇಗೌಡರ ಆರೋಪ ಸತ್ಯಕ್ಕೆ ದೂರ

ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು



ಮೈಸೂರು, ಮೇ 8–ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯದ ಪೆನ್‌ಡ್ರೈವ್ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಬಿಜೆಪಿ ಮುಖಂಡ ದೇವರಾಜೇಗೌಡ ಮಾಡುತ್ತಿರುವ ಆರೋಪ ಸತ್ಯಕ್ಕೆ ದೂರ ಎಂದು ಚಾಮರಾಜ ಕ್ಷೇತ್ರದ ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲು ಹೇಳಿದ್ದಾರೆ. ಪೆನ್‌ಡ್ರೈವ್‌ನ ಕಿಂಗ್‌ಪಿನ್ ದೇವರಾಜಗೌಡರೇ ಎಂದು ಜಗಜ್ಜಾಹೀರಾತಾಗಿದೆ. ವರ್ಷದ ಹಿಂದೆ ಇವರು ಹೆಚ್.ಡಿ.ರೇವಣ್ಣ ಬಗ್ಗೆ ಸಾಮಾಜಿಕ ಜಾಲ ತಾಣ ಮತ್ತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವುದು ಎಲ್ಲರಿಗೂ ತಿಳಿದ ವಿಷಯ. ಈಗ ತನ್ನ ತಪ್ಪನ್ನು ಮುಚ್ಚಿಕೊಳ್ಳಲು ಹಾಗೂ ಬಿಜೆಪಿ ಮುಖಂಡರ ಮೆಚ್ಚುಗೆ ಪಡೆಯುವ ಸಲುವಾಗಿ ಸಿಎಂ ಮತ್ತು ಡಿಸಿಎಂ ವಿರುದ್ಧ ಆರೋಪ ಮಾಡುತ್ತಿರುವುದು ಸರಿಯಲ್ಲ. ದೇವರಾಜೇಗೌಡರ ಆರೋಪದ ಬಗ್ಗೆ ಹೆಚ್.ಡಿ.ಕುಮಾರಸ್ವಾಮಿ ಅವರು ಡಿ.ಕೆ.ಶಿವಕುಮಾರ್ ವಿರುದ್ಧ ಆರೋಪ ಮಾಡುವ ಬದಲು ಬಂದಿರುವ ಕಷ್ಟಗಳನ್ನು ನಿವಾರಿಸಿಕೊಳ್ಳುವ ಬಗ್ಗೆ ಯೋಚಿಸಬೇಕಾಗಿದೆ ಎಂದು ಅವರು ಹೇಳಿದ್ದಾರೆ.

ಮೈಸೂರಿನ ಮಿರ್ಜಾ ರಸ್ತೆಯಲ್ಲಿ ಒಣ, ಮುರಿದ ರೆಂಬೆಗಳ ತೆರವು



ಮೈಸೂರು,ಮೇ 8(ಪಿಎಂ)–ಮೈಸೂರಿನ ನಜರ್‌ಬಾದಿನ ಮಿರ್ಜಾ ರಸ್ತೆ ಬದಿಯ ಮರಗಳಲ್ಲಿ ಒಣಗಿದ್ದ ಹಾಗೂ ಮಳೆ–ಗಾಳಿ ಹಿನ್ನೆಲೆಯಲ್ಲಿ ಮುರಿದು ನೇತಾಡುತ್ತಿದ್ದ ರೆಂಬೆಗಳನ್ನು ಬುಧವಾರ ಕಾರ್ಯಾಚರಣೆ ನಡೆಸಿ ತೆರವುಗೊಳಿಸಲಾಯಿತು.

ಕಳೆದ ಶುಕ್ರವಾರ ಸಂಜೆ ಸುರಿದ ಭಾರೀ ಮಳೆ–ಗಾಳಿ ಹಿನ್ನೆಲೆಯಲ್ಲಿ ನಗರದಾದ್ಯಂತ ಹೆಚ್ಚಿನ ಪ್ರಮಾಣದಲ್ಲಿ ಮರಗಳ ರೆಂಬೆಗಳು ಮುರಿದು ಬಿದ್ದಿದ್ದವು. ಅಂದಿನಿಂದ ಮೈಸೂರು ಮಹಾನಗರ ಪಾಲಿಕೆ ಅವುಗಳ ತೆರವು ಕಾರ್ಯಾಚರಣೆಯಲ್ಲಿ ತೊಡಗಿದೆ. ಅಂತೆಯೇ ಇಂದು ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿ ಇರುವ ಮಿರ್ಜಾ ರಸ್ತೆಯಲ್ಲಿ ಒಣಗಿ ಮುರಿದು ಬೀಳುವ ಹಂತದಲ್ಲಿರುವ ಹಾಗೂ ಮೊನ್ನೆ ಮಳೆ–ಗಾಳಿಯಿಂದ ಮುರಿದು ಮರದಲ್ಲೇ ನೇತಾಡುತ್ತಿದ್ದ ರೆಂಬೆಗಳನ್ನು ತೆರವು ಮಾಡಲಾಯಿತು. ಪಾಲಿಕೆಯ ವಲಯ ಕಚೇರಿ 1ರ ನೇತೃತ್ವದಲ್ಲಿ ಈ ರಸ್ತೆ ಬದಿಯಲ್ಲಿನ ಮರಗಳನ್ನು ಪರಿಶೀಲಿಸಿ ಒಣ ಹಾಗೂ ಮುರಿದಿದ್ದ ರೆಂಬೆಗಳನ್ನು ತೆರವು ಮಾಡಲಾಯಿತು. ಲ್ಯಾಡರ್ ವಾಹನ ಹಾಗೂ ಕ್ರೇನ್‌ಗಳ ಸಹಾಯದಿಂದ ಅಭಯ ತಂಡ ಸೇರಿದಂತೆ ಇನ್ನಿತರ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು.

ಮೈಸೂರಲ್ಲಿ ಬುಧವಾರ ರಾತ್ರಿ ಧಾರಾಕಾರ ಮಳೆ

ಚಲಿಸುತ್ತಿದ್ದ ಆಟೋ ಮೇಲೆಯೇ ಉರುಳಿ ಬಿದ್ದ ಭಾರೀ ಗಾತ್ರದ ಕೊಂಬೆ

ಮೈಸೂರು,ಮೇ 8(ಪಿಎಂ)–ಮೈಸೂರು ನಗರವೂ ಸೇರಿದಂತೆ ಜಿಲ್ಲೆಯ ಹಲವೆಡೆ ಬುಧವಾರ ರಾತ್ರಿ ಗಾಳಿ ಸಹಿತ ಧಾರಾಕಾರ ಮಳೆ ಸುರಿಯಿತು. ಮಳೆಗೂ ಮುನ್ನ ಭಾರೀ ಗಾಳಿ ಬೀಸಿದ ಹಿನ್ನೆಲೆಯಲ್ಲಿ ಮೈಸೂರು ನಗರದ ಹಲವೆಡೆ ಮರಗಳ ಕೊಂಬೆಗಳು ಮುರಿದು ಬಿದ್ದವು.

ಮೈಸೂರು ನಗರದಲ್ಲಿ ಇಂದು ರಾತ್ರಿ ಸುಮಾರು 8.10ರ ವೇಳೆಗೆ ಆರಂಭಗೊಂಡ ಮಳೆಯು ಸುಮಾರು ಒಂದೂವರೆ ಗಂಟೆ ಅಬ್ಬರಿಸಿತು. ಗುಡುಗು ಸಿಡಿಲಿನೊಂದಿಗೆ ಆರಂಭವಾದ ಮಳೆಗೆ ಮುನ್ನ ಭಾರೀ ಗಾಳಿಯ ರಭಸಕ್ಕೆ ಇಂದು ಸಹ ಅನೇಕ ಕಡೆ ಮರಗಳ ಕೊಂಬೆಗಳು ಮುರಿದು ಬಿದ್ದಿವೆ. ಅಗ್ರಹಾರ ವೃತ್ತದ ಸಮೀಪ ವಾಣಿವಿಲಾಸ ರಸ್ತೆಯಲ್ಲಿ ಕೆಆರ್ ಪೊಲೀಸ್ ಠಾಣೆ ಎದುರು ಭಾರೀ ಗಾತ್ರದ ಮರವೊಂದು ಬುಡಸಹಿತ ಬಿದ್ದ ಪರಿಣಾಮ ವಾಹನ ಸಂಚಾರಕ್ಕೂ ತೊಡಕುಂಟಾಯಿತು. ಅಲ್ಲದೆ, ಈ ಮರದ ಕೆಳಗೆ ಆಟೋ ಹಾಗೂ ಬೈಕ್ ಸಿಲುಕಿದ್ದವು. ಆಟೋ (ಕೆಎ–55, 8986) ಚಲಿಸುವಾಗಲೇ ಈ ಬಾರೀ ಗಾತ್ರದ ಮರ ಮುರಿದು ಬಿದ್ದಿದ್ದು, ಅದೃಷ್ಟವಶಾತ್ ಚಾಲಕ ಅನಿಲ್ ಅಪಾಯವಿಲ್ಲದೆ ಪಾರಾಗಿದ್ದಾನೆ. ಆಟೋವಿನ ಹಿಂಬದಿ ಬಹುತೇಕ ಜಖಂಗೊಂಡಿದ್ದು, ಪ್ರಯಾಣಿಕರು ಯಾರೂ ಇಲ್ಲದ ಹಿನ್ನೆಲೆಯಲ್ಲಿ ಅನಾಹುತ ತಪ್ಪಿದಂತಾಗಿದೆ.

ಅಲ್ಲದೆ, ಎಂಜಿ ರಸ್ತೆಯ ಮೇಲ್ಸೇತುವೆ ಬಳಿ ತೆಂಗಿನ ಮರವೊಂದು ಬುಡಸಹಿತ ಉರುಳಿ ಬಿದ್ದ ಪರಿಣಾಮ ವಾಹನ ಸಂಚಾರ ಸ್ಥಗಿತಗೊಂಡಿತ್ತು. ವಿದ್ಯುತ್ ಸಂಪರ್ಕ ಸಹ ಕಡಿತಗೊಂಡು ಕತ್ತಲು ಆವರಿಸಿತ್ತು. ಪಾಲಿಕೆಯ ಅಭಯ ತಂಡ ತೆರವು ಕಾರ್ಯಾಚರಣೆ ಆರಂಭಿಸಿತ್ತು. ಚಾಮುಂಡಿಪುರಂ ಮತ್ತು ಲಕ್ಷ್ಮೀಪುರಂನಲ್ಲೂ ಭಾರೀ ಗಾತ್ರದ ಕೊಂಬೆಗಳು ಬಿದ್ದು ಸಂಚಾರ ಸ್ಥಗಿತವಾಗಿತ್ತು. ಜೊತೆಗೆ ಕುವೆಂಪುನಗರದ ಬಹುತೇಕ ರಸ್ತೆಗಳಲ್ಲಿ ಮರಗಳ ಕೊಂಬೆಗಳು ಮುರಿದು ಬಿದ್ದಿದ್ದವು. ಬುಧವಾರ ಮುಂಜಾನೆಯೂ ಧಾರಾಕಾರ ಮಳೆ ಮೈಸೂರು ನಗರದಾದ್ಯಂತ ಸುರಿದಿದೆ. ಗುಡುಗು ಸಿಡಿಲು ಗಾಳಿಯ ಆರ್ಭಟ ಇಲ್ಲದ ಹಿನ್ನೆಲೆಯಲ್ಲಿ ಈ ಮಳೆಗೆ ಯಾವುದೇ ಹಾನಿ ಉಂಟಾಗಿಲ್ಲ. ಆದರೆ ಬುಧವಾರ ರಾತ್ರಿ ಸುರಿದ ಮಳೆಯು ಒಂದಿಷ್ಟು ಅವಾಂತರ ಸೃಷ್ಟಿ ಮಾಡಿದೆಯಾದರೂ ಕಳೆದ ಶುಕ್ರವಾರಕ್ಕೆ ಹೋಲಿಸಿದರೆ ಇದು ಕಡಿಮೆ ಎಂದೇ ಹೇಳಬಹುದು. ಒಟ್ಟಾರೆ ಬಿಸಿಲಿನ ತಾಪಕ್ಕೆ ಕಂಗಾಲಾಗಿದ್ದ ನಗರದ ಜನಕ್ಕೆ ಮಳೆರಾಯ ಆಗಾಗ್ಗೆ ಬರುವ ಮೂಲಕ ಒಂದಿಷ್ಟು ತಂಪಿನ ವಾತಾವರಣ ಕಲ್ಪಿಸುತ್ತಿದ್ದಾನೆ.



ಮೈಸೂರಿನ ವಾಣಿವಿಲಾಸ ರಸ್ತೆಯಲ್ಲಿ ಕೆಆರ್ ಪೊಲೀಸ್ ಠಾಣೆ ಮುಂಭಾಗ ಮರ ಬಿದ್ದು, ಆಟೋ ಜಖಂಗೊಂಡಿರುವುದು.



ಶ್ರೀನಿವಾಸ ಪ್ರಸಾದರಿಗೆ ಕೆ.ಆರ್.ಕ್ಷೇತ್ರದ ಬಿಜೆಪಿ 'ಭಾವಪೂರ್ಣ ಶ್ರದ್ಧಾಂಜಲಿ'

ಎಂತಹ ಸಮಸ್ಯೆಗೂ ಪ್ರಸಾದರಲ್ಲಿ ಪರಿಹಾರವಿತ್ತು: ಮಾಜಿ ಸಚಿವ ಸುರೇಶ್‌ಕುಮಾರ್ ಗುಣಗಾನ

ಮೈಸೂರು, ಮೇ 8(ಎಂಕೆ)– ಹಿರಿಯ ರಾಜಕೀಯ ಮುತ್ಸದ್ದಿ, ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರಿಗೆ ಕೆ.ಆರ್. ಕ್ಷೇತ್ರದ ಬಿಜೆಪಿ ವತಿಯಿಂದ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಶ್ರೀ ಆರಾಧ್ಯ ಮಹಾಸಭಾ ಭವನದಲ್ಲಿ ಬುಧವಾರ ಆಯೋಜಿಸಿದ್ದ 'ಭಾವಪೂರ್ಣ ಶ್ರದ್ಧಾಂಜಲಿ' ಹಾಗೂ 'ನುಡಿನಮನ' ಕಾರ್ಯಕ್ರಮದಲ್ಲಿ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಹಾಗೆಯೇ ಗಾಯಕ ಜಯಶಂಕರ್ ಮೇಸ್ತ್ರಿ ತಾವು ರಚಿಸಿದ 'ಸ್ವಾಭಿಮಾನಿ ಪ್ರಸಾದಣ್ಣ' ಹಾಡನ್ನು ಹಾಡಿ ಗೌರವ ಸಲ್ಲಿಸಿದರು.

ಬಳಿಕ ಮಾಜಿ ಸಚಿವ ಎಸ್.ಸುರೇಶ್ ಕುಮಾರ್ ಮಾತನಾಡಿ, ಸಾರ್ವಜನಿಕ ಕ್ಷೇತ್ರದಲ್ಲಿ ದುರಾಭಿಮಾನವೇ ಹೆಚ್ಚಾಗಿರುವಾಗ ಸ್ವಾಭಿಮಾನ ಎಂಬುದನ್ನು ತೋರಿಸಿಕೊಟ್ಟ ವಿ.ಶ್ರೀನಿವಾಸ್ ಪ್ರಸಾದ್ ಎಂಬ ಮೇಲ್ಪಂಕ್ತಿ ನಾಯಕರನ್ನು ನೋಡಿದ್ದು, ಅವರೊಂದಿಗೆ ಕೆಲಸ ಮಾಡಿದ್ದೆ ನಮ್ಮ ಸುಕೃತ. ಚಿಕ್ಕ ವಯಸ್ಸಿನಲ್ಲೇ ಲೋಕಸಭಾ ಸದಸ್ಯರಾಗಿದ್ದ ವಿ.ಶ್ರೀನಿವಾಸ್ ಪ್ರಸಾದ್ ಅವರು ಜನಪರ ಹಾಗೂ ಯೋಗ್ಯ ಕಾರ್ಯ ಮಾಡಿದ್ದಾರೆ. ಅವರ ಬಗ್ಗೆ ಸಾಕಷ್ಟು ಕೇಳಿದ್ದೆ. ಆದರೆ 1989ರಲ್ಲಿ ಅವರನ್ನು ಮೊದಲ ಬಾರಿ ಶಿಬಿರವೊಂದರಲ್ಲಿ ಕಂಡಿದ್ದು. 2008 ರಿಂದ 2013ರವರೆಗೆ ಅವರೊಂದಿಗೆ ಒಡನಾಟ ಹೆಚ್ಚಾಗಿತ್ತು. ಕುಕ್ಕೆ ಸುಬ್ರಹ್ಮಣ್ಯದಲ್ಲಿ ಆಚರಣೆಯಲ್ಲಿದ್ದ ಮಡೆಸ್ನಾನ ರದ್ದುಮಾಡುವ ಬಗ್ಗೆ ಅವರು ಮಾತನಾಡಿದ್ದು, ಅವರ ಮಾತಿನಲ್ಲಿದ್ದ ಕಳಕಳಿ ಬೇರೆ ಯಾವ ನಾಯಕರಲ್ಲಿ ಕಾಣಲಿಲ್ಲ. ಮಡೆಸ್ನಾನ ಆಚರಣೆ ರದ್ದು ಮಾಡುವ ಭರವಸೆ ನೀಡಿದಾಗ ನನ್ನ ಹೆಗಲ ಮೇಲೆ ಕೈಹಾಕಿ ಸಮಾಧಾನ ವ್ಯಕ್ತಪಡಿಸಿದ್ದರು. ನಂತರ ಮಡೆಸ್ನಾನ ಆಚರಣೆ ರದ್ದಾಗಿದ್ದು ಇತಿಹಾಸ ಎಂದು ಸ್ಮರಿಸಿದರು.



ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಮೌನಾಚರಣೆ ಮೂಲಕ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಆರ್‌ಎಸ್‌ಎಸ್ ಹಿರಿಯ ಮುಖಂಡ ಮಾ.ವೆಂಕಟರಾಮ್, ಮಾಜಿ ಸಚಿವರಾದ ಸುರೇಶ್‌ಕುಮಾರ್, ಕೋಟಾ ಶ್ರೀನಿವಾಸ ಪೂಜಾರಿ, ಎನ್.ಮಹೇಶ್, ಶಾಸಕ ಶ್ರೀವತ್ಸ ಮತ್ತಿತರರಿದ್ದರು.

ಕಂದಾಯ ಸಚಿವರಾಗಿ ಸೂಕ್ಷ್ಮ ವಿಚಾರಗಳನ್ನು ಪರಿಗಣಿಸುತ್ತಿದ್ದ ಶ್ರೀನಿವಾಸ ಪ್ರಸಾದರು ಎಂದೂ ರಾಜಿಯಾಗದ ವ್ಯಕ್ತಿ. ಅವರು ಸಂಸದರಾಗಿ ಆಯ್ಕೆಯಾದಾಗ ಚಾ.ನಗರ ಲೋಕಸಭಾ ಕ್ಷೇತ್ರದ ಚುನಾವಣಾ ಉಸ್ತುವಾರಿಯನ್ನು ನನಗೆ ನೀಡಲಾಗಿತ್ತು. ಅವರ ಗೆಲುವಿಗಾಗಿ ಶ್ರಮಿಸಿದ್ದೇವು. ಎಂದಿಗೂ ಅವರು, ಗಾಂಭೀರ್ಯ ಕಳೆದುಕೊಂಡಿದ್ದನ್ನು ನೋಡಿಯೇ ಇಲ್ಲ. ಎಂತಹ ಸಮಸ್ಯೆಗಳಿಗೂ ಪರಿಹಾರ ಸೂಚಿಸುತ್ತಿದ್ದ ನಿಜವಾದ ಜನನಾಯಕ ಎಂದು ಗುಣಗಾನ ಮಾಡಿದರು. ಆರ್‌ಎಸ್‌ಎಸ್‌ನ ಹಿರಿಯ ಮುಖಂಡ ಮಾ. ವೆಂಕಟರಾಮ್ ಮಾತನಾಡಿ, ಭಾರತ ಮಾತೆಯ ಸುಪುತ್ರ ವಿ.ಶ್ರೀನಿವಾಸ್ ಪ್ರಸಾದ್. ನನ್ನ ಬಾಲ್ಯ ಸ್ನೇಹಿತ. ದೀನ–ದಲಿತರೇ ಹೆಚ್ಚಾಗಿರುವ ಅಶೋಕಪುರಂನಲ್ಲಿ ಹುಟ್ಟಿದ ನಾವುಗಳು ಒಟ್ಟಾಗಿಯೇ ಆರ್‌ಎಸ್‌ಎಸ್ ಶಾಖೆ ಸೇರಿಕೊಂಡೆವು. ಅಲ್ಲಿನ ಆಟಪಾಠದ ಜೊತೆಗೆ ದೇಶಭಕ್ತಿ ಗೀತೆಗಳ ಹೇಳಿಕೊಡುತ್ತಾ ಆತ್ಮೀಯವಾಗಿ ಕಾಣಲಾಗುತ್ತಿತ್ತು. 1967ರಲ್ಲಿ ಆರ್‌ಎಸ್‌ಎಸ್ ನಡೆಸಿದ ಶಿಬಿರದಲ್ಲಿ ಭಾಗವಹಿಸಿದ್ದೆವು. ಅಲ್ಲಿ ಹೇಗೆ ಮಾತನಾಡಬೇಕು ಎಂಬುದನ್ನು ಹೇಳಿಕೊಡುತ್ತಿದ್ದರು. ಅಲ್ಲಿ ಎಲ್ಲರಿಗೂ ಪ್ರಶ್ನೆಗಳನ್ನು ಕೇಳಿದರೆ, ಪ್ರಸಾದ್‌ಗೆ ಮಾತ್ರ ನೀನು ವಾರಕ್ಕೆ ಎಷ್ಟು ಸಿನಿಮಾ ನೋಡುತ್ತಿಯಾ ಎಂದಿದ್ದರು. ಅದಕ್ಕೆ ವಾರದಲ್ಲಿ 2 ದಿನ ಎಂಜಿಆರ್ ಸಿನಿಮಾ ನೋಡುತ್ತೇವೆ ಎಂದಿದ್ದೆವು. ಅಶೋಕಪುರಂ ಜನತೆ ದೈವ ಭಕ್ತರಾಗಿದ್ದು, ಅಂದೇ ಯುವಕರ ಸಂಘ ಕಟ್ಟಿ ಗೋಹತ್ಯೆ ನಿಷೇದವಾಗಬೇಕು ಎಂದು ಸತ್ಯಾಗ್ರಹ ಮಾಡಿದ್ದೆವು. ಅನೇಕ ಹಿರಿಯರು, ಅಧಿಕಾರಿಗಳೊಂದಿಗೆ ಆತ್ಮೀಯ ಸಂಬಂಧ ಇಟ್ಟುಕೊಂಡಿದ್ದ ಶ್ರೀನಿವಾಸ್ ಪ್ರಸಾದ್ ಮಾರ್ಗದರ್ಶನ ಇನ್ನೂ ಇರಬೇಕಿತ್ತು ಎಂದು ಬಾಲ್ಯದ ದಿನಗಳನ್ನು ಮೆಲುಕು ಹಾಕಿದರು.

ಗಟ್ಟಿಧ್ವನಿ: ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಶ್ರೀನಿವಾಸ್ ಪ್ರಸಾದ್ ಅವರ ಸಂಪರ್ಕ 1980–81 ರಿಂದಲೂ ಇದೆ. ಬಸಲಿಂಗಪ್ಪ ಅವರನ್ನು ಬಿಟ್ಟರೆ ಈ ರಾಜ್ಯಕ್ಕೆ ಗಟ್ಟಿಧ್ವನಿಯಾಗಿದ್ದ ಅವರು, ಯಾವತ್ತು ಒಂದು ವರ್ಗದ ಪರವಾಗಿ ಇದ್ದವರಲ್ಲ. ದಲಿತರಾಗಿ ಹುಟ್ಟಿದರು ಎಲ್ಲಾ ಸಮುದಾಯಗಳ ನಾಯಕರಾಗಿದ್ದರು. ಅವರಿಗೆ ಆರೋಗ್ಯ ಸಮಸ್ಯೆ ಎದುರಾಗದೆ ಇದ್ದಿದ್ದರೆ ಇಡೀ ರಾಜ್ಯವೇ ಗುರ್ತಿಸುವಂತಹ ನಾಯಕರಾಗಿ ಬೆಳೆಯುತ್ತಿದ್ದರು.

ಶ್ರೀನಿವಾಸ್ ಪ್ರಸಾದ್‌ರಿಗೆ ರಾಜಕೀಯವಾಗಿ ಅನ್ಯಾಯವಾಗದೇ ಇದ್ದಿದ್ದರೆ ನಾನು ಬಿಜೆಪಿಯಲ್ಲಿ ಇರುತ್ತಿರಲಿಲ್ಲ. ರಾತ್ರೋರಾತ್ರಿ ಕ್ಯಾಬಿನೆಟ್‌ನಿಂದ ಅವರನ್ನು ತೆಗೆದಾಗ ತಪ್ಪು ಎಂದು ಪ್ರಶ್ನಿಸಿದ್ದಕ್ಕೆ ನಾನಿರುವ ಜಾಗದಿಂದಲೇ ನನ್ನ ವಿರುದ್ಧ ವಿರೋಧಗಳು ವ್ಯಕ್ತವಾದವು. ಎಂಎಲ್‌ಎ ಟಿಕೆಟ್ ತಪ್ಪಿಸಿದರು. ಯಾರೋ ಚಿಕ್ಕ ವಯಸ್ಸಿನವರಿಗೆ ಟಿಕೆಟ್ ನೀಡಿದರು. ನನಗೆ ಕಾಂಗ್ರೆಸ್‌ನಲ್ಲಿ ಭವಿಷ್ಯವಿಲ್ಲ ಎಂದ ಮೇಲೆಯೇ ಬಿಜೆಪಿ ಸೇರಿ ವಿಧಾನ ಪರಿಷತ್ ಸದಸ್ಯನಾಗಿದ್ದೇನೆ ಎಂದು ತಿಳಿಸಿದರು. ಸಚಿವ ಕೋಟಾ ಶ್ರೀನಿವಾಸ ಪೂಜಾರಿ, ಎನ್.ಮಹೇಶ್, ಶಾಸಕ ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಸ್.ರಾಜೇಂದ್ರ, ಕಾರ್ಯದರ್ಶಿ ರಾಜೇಶ್, ಸಾಮಾಜಿಕ ಕಾರ್ಯಕರ್ತ ವಾದಿರಾಜ್, ಮಾಜಿ ಮೇಯರ್ ಶಿವಕುಮಾರ್, ಬಿಜೆಪಿ ಕೆ.ಆರ್.ಕ್ಷೇತ್ರದ ಅಧ್ಯಕ್ಷ ಯು.ಜಿ.ಗೋಪಾಲರಾಜೇ ಅರಸ್, ಕೆ.ಎಂ. ನಿಶಾಂತ್ ಮತ್ತಿತರರು ಉಪಸ್ಥಿತರಿದ್ದರು.

ಆಶೀರ್ವಾದ ಮಾಡಿದ್ದರು...

> ಶ್ರೀನಿವಾಸ ಪ್ರಸಾದರ ಪರಿಚಯ 2015ರಲ್ಲಾಯಿತು. ಜಿಲ್ಲಾ ಉಸ್ತುವಾರಿ ಸಚಿವಾಗಿದ್ದ ಅವರು, ದಸರಾ ಕಾರ್ಯಕ್ರಮಗಳ ನಿಮಿತ್ತ ಅರಮನೆಗೆ ಬರುತ್ತಿದ್ದರು. ಸಾರ್ವಜನಿಕವಾಗಿ ಹೇಗೆ ಸರಳವಾಗಿರಬೇಕು ಎಂಬುದನ್ನು ಅವರನ್ನು ನೋಡಿ ತಿಳಿದುಕೊಂಡಿದ್ದೇನೆ. ಚುನಾವಣೆ ನಿಮಿತ್ತ ಅವರನ್ನು ಭೇಟಿಯಾದಾಗ ಆಶೀರ್ವಾದ ಮಾಡಿದ್ದರು. ಆರೋಗ್ಯ ಚೆನ್ನಾಗಿದ್ದರೆ ಪ್ರಚಾರಕ್ಕೆ ಬರುವುದಾಗಿಯೂ ಹೇಳಿದ್ದರು. ರಾಜಕೀಯಕ್ಕೆ ಒಳ್ಳೆಯ ನಾಯಕರು ಬರಬೇಕು ಎಂಬುದು ಅವರ ಕಳಕಳಿಯಾಗಿತ್ತು ಅವರಲ್ಲಿನ ತತ್ವ–ಆದರ್ಶಗಳನ್ನು ನಾವು ಪಾಲಿಸಬೇಕು.
>
> – ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ

ಪಶ್ಚಾತ್ತಾಪ ಎಂದುಕೊಂಡಿದ್ದೆ ಆದರೆ...!

> ಇತ್ತೀಚೆಗೆ ರಾಜ್ಯದ ಮುಖ್ಯಮಂತ್ರಿಗಳು ರಾತ್ರೋರಾತ್ರಿ ಕ್ಯಾಬಿನೆಟ್‌ನಿಂದ ಹೊರಗಟ್ಟಿದ್ದಕ್ಕೆ ಪಶ್ಚಾತ್ತಾಪ ಪಟ್ಟು, ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರ ಮನೆಗೆ ಹೋಗುತ್ತಿದ್ದಾರೆ ಎಂದುಕೊಂಡಿದ್ದೆ. ಆದರೆ ಅಲ್ಲಿ ಹೋಗಿ ತಮ್ಮ ಅಭ್ಯರ್ಥಿಗೆ ಬೆಂಬಲ ಕೋರಿದ್ದರು ಎಂದು ತಿಳಿದು ಮತ್ತೆ ಬೇಸರವಾಯಿತು. ಶ್ರೀನಿವಾಸ್ ಪ್ರಸಾದರಿಗಾದ ನೋವನ್ನು ಅವರೇ ಮರೆತಿರಬಹುದು. ಆದರೆ ಅವರ ಅಭಿಮಾನಿಗಳು ಯಾವತ್ತು ಮರೆಯೋದಿಲ್ಲ.
>
> –ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ ಸದಸ್ಯ

ಇಂದು ಕಾಂಗ್ರೆಸ್ ವಿರುದ್ಧ ಜೆಡಿಎಸ್ ಪ್ರತಿಭಟನೆ

ಮಡಿಕೇರಿ: ಕೊಡಗು ಜಿಲ್ಲಾ ಜೆಡಿಎಸ್ ವತಿಯಿಂದ ಕಾಂಗ್ರೆಸ್ ವಿರುದ್ಧ ಮೇ 9 ರಂದು ಬೆಳಗ್ಗೆ 11.30ಕ್ಕೆ ನಗರದಲ್ಲಿ ಪ್ರತಿಭಟನೆ ಹಮ್ಮಿಕೊಂಡಿರುವುದಾಗಿ ಜೆಡಿಎಸ್ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಮೂಟೆರಾ ಪುಷ್ಪಾವತಿ ರಮೇಶ್ ತಿಳಿಸಿದ್ದಾರೆ.

ನಗರದ ಗಾಂಧಿ ಮೈದಾನದಿಂದ ಜಿಲ್ಲಾಧಿಕಾರಿ ಕಚೇರಿ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಗುವುದು. ನಂತರ ಕಾಂಗ್ರೆಸ್ ನಾಯಕರ ವಿರುದ್ಧ ಮನವಿ ಸಲ್ಲಿಸಲಾಗುವುದು. ಹಾಸನದ ಪೆನ್‌ಡ್ರೈವ್ ಪ್ರಕರಣ ಮುಂದಿಟ್ಟುಕೊಂಡು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಹಾಗೂ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ತೇಜೋವಧೆ ಮಾಡಲಾಗುತ್ತಿದೆ ವಿನಃಕಾರಣ ದೇವೇಗೌಡರು ಹಾಗೂ ಕುಮಾರಸ್ವಾಮಿ ಅವರ ಹೆಸರನ್ನು ಬಳಕೆ ಮಾಡುವ ಮೂಲಕ ಕಾಂಗ್ರೆಸ್ ನಾಯಕರು ಕ್ಷುಲ್ಲಕ ರಾಜಕಾರಣ ಮಾಡುತ್ತಿದ್ದಾರೆ. ಇದನ್ನು ಖಂಡಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಪೋಕ್ಲು ವ್ಯಾಪ್ತಿ ಭಾರಿ ಮಳೆ

● ಧರೆಗುರುಳಿದ ವಿದ್ಯುತ್ ಕಂಬಗಳು ● ಅಂಗಡಿಗಳಿಗೆ ನುಗ್ಗಿದ ನೀರು

ಮಡಿಕೇರಿ, ಮೇ 8–ನಾಪೋಕ್ಲು ಭಾಗದ ಕೆಲವು ಪ್ರದೇಶಗಳಲ್ಲಿ ಬುಧವಾರ ಸಂಜೆ ಗುಡುಗು, ಆಲಿಕಲ್ಲು ಸಹಿತ ಭಾರಿ ಮಳೆಯಾಗಿದೆ.

ಒಂದು ಇಂಚಿಗೂ ಅಧಿಕ ಮಳೆಯಾಗಿದ್ದು, ಗಾಳಿ ಸಹಿತ ಮಳೆ ಸುರಿದ ಹಿನ್ನೆಲೆಯಲ್ಲಿ ಕೆಲವೆಡೆ ವಿದ್ಯುತ್ ಕಂಬಗಳು ಧರೆಗುರಿಳಿವೆ. ಮಳೆಯಿಂದ ಚೆರಿಯಪರಂಬು ಕಲ್ಲುಮೊಟ್ಟೆ ಗ್ರಾಮದಲ್ಲಿ ವಿದ್ಯುತ್ ಕಂಬ ಉರುಳಿ ಬಿದ್ದಿದ್ದು, ಹಲವು ಮನೆಗಳ ವಿದ್ಯುತ್ ಸಂಪರ್ಕದ ತಂತಿಗಳು ಹಾನಿಗೀಡಾಗಿವೆ.

ಕಳೆದ ಎರಡು ವಾರಗಳ ಹಿಂದೆ ನಾಪೋಕ್ಲು ವಿಭಾಗದಲ್ಲಿ ಉತ್ತಮ ಮಳೆಯಾಗಿತ್ತು. ನಂತರ ಬಿಸಿಲ ಬೇಗೆ ಹೆಚ್ಚಾಗಿದ್ದು, ಮಂಗಳವಾರ ಮಧ್ಯರಾತ್ರಿ ನಾಪೋಕ್ಲು ವ್ಯಾಪಿಯಲ್ಲಿ ಸಾಧಾರಣ ಮಳೆಯಾಗಿತ್ತು. ಬುಧವಾರ ಸಂಜೆ ಗುಡುಗು ಸಹಿತ ಭಾರಿ ಮಳೆಯಾಗಿದ್ದು, ಬಿಸಿಲ ಬೇಗೆಯಿಂದ ಬಸವಳಿದಿದ್ದ ಜನರಲ್ಲಿ ಕೊಂಚ ನೆಮ್ಮದಿ ಮೂಡಿಸಿದೆ.



ನಾಪೋಕ್ಲು ವ್ಯಾಪ್ತಿ ಬುಧವಾರ ಗುಡುಗು ಸಹಿತ ಭಾರಿ ಮಳೆ ಸುರಿಯಿತು.

ಉಕ್ಕಿ ಹರಿದ ಚರಂಡಿ: ಸುರಿದ ಭಾರಿ ಮಳೆಗೆ ನಾಪೋಕ್ಲು ಪಟ್ಟಣದಲ್ಲಿ ಚರಂಡಿಗಳಲ್ಲಿ ನೀರು ಉಕ್ಕಿ ಹರಿದು ಕೆಲವು ಅಂಗಡಿಗಳಿಗೆ ನುಗ್ಗಿರುವ ಬಗ್ಗೆ ವರದಿಯಾಗಿದೆ.

ಇದರಿಂದಾಗಿ ಅಂಗಡಿಗಳ ಮಾಲೀಕರು ಪರದಾಡುವ ಪರಿಸ್ಥಿತಿ ಉಂಟಾಗಿತ್ತು. ಚರಂಡಿಯಲ್ಲಿ ನೀರು ಸರಾಗವಾಗಿ ಹರಿದು ಹೋಗದಿರುವುದೇ ಈ ಅವಾಂತರಕ್ಕೆ ಕಾರಣ ಎಂದು ಅಂಗಡಿ ಮಾಲೀಕರು ಅಸಮಾಧಾನ ವ್ಯಕ್ತಪಡಿಸಿದರು. ಕೂಡಲೇ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಿಬ್ಬಂದಿ ಇತ್ತ ಕಡೆ ಗಮನಹರಿಸಿ, ನಾಪೋಕ್ಲು ಪಟ್ಟಣದ ಚರಂಡಿಗಳನ್ನು ಸ್ವಚ್ಛಗೊಳಿಸಿ ಮಳೆ ನೀರು ಸರಾಗವಾಗಿ ಹರಿದು ಹೋಗುವಂತೆ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಭೂ ಪರಿವರ್ತನೆ ರದ್ದುಗೊಳಿಸುವಂತೆ ಒತ್ತಾಯಿಸಿ

ನಾಳೆ ಸಿಎನ್‌ಸಿಯಿಂದ ಧರಣಿ

ಮಡಿಕೇರಿ: ಸಿದ್ದಾಪುರ ವ್ಯಾಪ್ತಿಯ 2400 ಎಕರೆ ಕಾಫಿ ತೋಟ ಸೇರಿದಂತೆ ಕೊಡಗು ಜಿಲ್ಲೆಯ ಕಾವೇರಿ ಜಲಾನಯನ ಪ್ರದೇಶದ ಎಲ್ಲಾ ಭೂ ಪರಿವರ್ತನೆಯನ್ನು ರದ್ದುಗೊಳಿಸಬೇಕು ಎಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಮೇ 10ರಂದು ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಲಾಗುವುದು ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.



ಎನ್.ಯು.ನಾಚಪ್ಪ

ಅಂದು ಶಾಂತಿಯುತ ಧರಣಿ ನಡೆಸಿ ರಾಷ್ಟ್ರಪತಿ, ಪ್ರಧಾನಿ, ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯ, ಯುನೆಸ್ಕೋದ ಮಹಾನಿರ್ದೇಶಕರು, ದೆಹಲಿಯ ಜಲ ನಿರ್ವಹಣಾ ಪ್ರಾಧಿಕಾರ, ಕರ್ನಾಟಕದ ಕಾವೇರಿ ನೀರಾವರಿ ನಿಯಂತ್ರಣ ಸಮಿತಿ, ಅರ್ಥಶಾಸ್ತ್ರಜ್ಞ ಡಾ.ಸುಬ್ರಮಣ್ಯನ್‌ಸ್ವಾಮಿ ಹಾಗೂ ಸಂಬಂಧಿಸಿದ ಇಲಾಖೆಗಳ ಹಿರಿಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಮೂಲಕ ಮನವಿ ಸಲ್ಲಿಸಲಾಗುವುದು.

ಹಸಿರ ಪರಿಸರದಿಂದ ಕೂಡಿರುವ ಕಾಫಿ ತೋಟವನ್ನು ಭೂ ಪರಿವರ್ತಿಸುವ ಮೂಲಕ ಭೂ ಮಾಫಿಯಾ, ರೆಸಾರ್ಟ್ ದೊರೆಗಳು, ರಿಯಲ್ ಎಸ್ಟೇಟ್ ದಣಿಗಳು, ಅನಿವಾಸಿ ಭಾರತೀಯ ಉದ್ಯಮಿಗಳು, ಬಹುರಾಷ್ಟ್ರೀಯ ಕಂಪನಿಗಳು ಮತ್ತು ಕಾರ್ಪೊರೇಟ್ ವಲಯಗಳಿಗೆ ವಿಲ್ಲಾ, ಬೃಹತ್ ಬಂಗಲೆ ಹಾಗೂ ಟೌನ್ ಶಿಪ್‌ಗಳನ್ನು ನಿರ್ಮಿಸಲು ಸರ್ಕಾರ ಅನುಮತಿ ನೀಡಲು ಮುಂದಾಗಿದೆ.

ಕಾವೇರಿ ನದಿ ಪಾತ್ರದ ಒಂದು ದೊಡ್ಡ ಹಸಿರು ಹೊದಿಕೆಯ ಭೂ ಪ್ರದೇಶದ ಪರಿಸರವನ್ನು ನಾಶಪಡಿಸಿದ್ದಲ್ಲಿ ಅದು ಭೌಗೋಳಿಕ ಅಸಮತೋಲನಕ್ಕೆ ಕಾರಣವಾಗಲಿದೆ. ದಕ್ಷಿಣ ಭಾರತದ ಜೀವನ ರೇಖೆಯಾದ ಕಾವೇರಿ ನದಿಯ ಜಲಮೂಲಗಳಿಗೆ ಧಕ್ಕೆಯಾಗಲಿದೆ. ಭೂ ಪರಿವರ್ತಿತ ಪ್ರದೇಶಗಳ ಶಾಂತಿ, ಪ್ರಶಾಂತತೆ ಮತ್ತು ನೆಮ್ಮದಿ ಭಂಗವಾಗಬಹುದು ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ವಿಶ್ವಸಂಸ್ಥೆಯ ನಿಯಮಾನುಸಾರ ಸ್ಥಳೀಯ ಹಕ್ಕುಗಳನ್ನು ಶಾಸನಬದ್ಧವಾಗಿ ರಕ್ಷಿಸಬೇಕು ಮತ್ತು ನಮ್ಮ ಆಂತರಿಕ ರಾಜಕೀಯ, ಸ್ವಯಂ ನಿರ್ಣಯ ಹಕ್ಕುಗಳನ್ನು ಗುರುತಿಸಲು ಸಂವಿಧಾನಾತ್ಮಕ ಪರಿಹಾರವಾಗಿ ಆರ್ಟಿಕಲ್ 32ರಡಿ ಸಾಂವಿಧಾನಿಕ ಕಾರ್ಯವಿಧಾನವನ್ನು ಪ್ರಾರಂಭಿಸಬೇಕು. ಸಂವಿಧಾನದ 244 ಮತ್ತು 371ನೇ ವಿಧಿಯ ಪ್ರಕಾರ ಎಸ್‌ಟಿ ಟ್ಯಾಗ್ ಮತ್ತು ಸ್ವ ಆಡಳಿತ ಕೊಡವರನ್ನು ಹಾಗೂ ಕೊಡವ ಲ್ಯಾಂಡ್ ಅನ್ನು ರಕ್ಷಿಸುವ ಏಕೈಕ ಅಸ್ತ್ರವಾಗಿದೆ. ಆದ್ದರಿಂದ ಭೂ ಮಾಫಿಯಾಗಳಿಂದ ಕೊಡವ ಲ್ಯಾಂಡ್ ಅನ್ನು ರಕ್ಷಿಸಲು ಸಿಎನ್‌ಸಿ ಶಾಂತಿಯುತ ಹೋರಾಟ ನಡೆಸಲಾಗುವುದು ಎಂದು ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಗೋಣಿಕೊಪ್ಪ ಕಾಪ್ಸ್ ಶಾಲೆಗೆ ಶೇ.100 ಫಲಿತಾಂಶ

ಗೋಣಿಕೊಪ್ಪ, ಮೇ 8– ಗೋಣಿಕೊಪ್ಪ ಕಾಪ್ಸ್ ಶಾಲೆಗೆ ಸಿಬಿಎಸ್‌ಸಿ 10ನೇ ತರಗತಿಯ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಬಂದಿದೆ.

ಪರೀಕ್ಷೆಗೆ ಹಾಜರಾಗಿದ್ದ 98 ವಿದ್ಯಾರ್ಥಿಗಳಲ್ಲಿ 80 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 18 ವಿದ್ಯಾರ್ಥಿಗಳು ಪ್ರಥಮ ದರ್ಜೆ ಶ್ರೇಣಿ ಪಡೆದಿದ್ದಾರೆ. ಎಸ್.ದೀಪನ್ ಶೇ.98.6, ನೇಹಾಲ್ ಗೌಡ್ರು 98.2, ಡಿ.ಹಿತೇಶ್ ಶೆಟ್ಟಿ 97.8 ಅಂಕ ಗಳಿಸಿದ್ದಾರೆ.

ಮೇ 18ರಿಂದ ಬಂಟ ಸಮುದಾಯದ ಜಿಲ್ಲಾ ಮಟ್ಟದ ಕ್ರೀಡಾಕೂಟ



ವಿರಾಜಪೇಟೆ: ಬಂಟ ಸಮುದಾಯದ 11ನೇ ವರ್ಷದ ಜಿಲ್ಲಾ ಮಟ್ಟದ ಕ್ರೀಡಾಕೂಟವನ್ನು ಮೇ 18 ಹಾಗೂ 19ರಂದು ವಿರಾಜಪೇಟೆಯ ಸಂತ ಅನ್ನಮ್ಮ ವಿದ್ಯಾಸಂಸ್ಥೆ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಬಂಟರ ಸಂಘದ ತಾಲೂಕು ಅಧ್ಯಕ್ಷ ನೀಲಿಮಾಡು ಲೀಲಾಧರ್ ರೈ ತಿಳಿಸಿದರು.

ಪಟ್ಟಣದ ಪ್ರೆಸ್‌ಕ್ಲಬ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮುದಾಯದವರನ್ನು ಒಟ್ಟುಗೂಡಿಸುವ ದೃಷ್ಟಿಯಿಂದ ಪ್ರತಿವರ್ಷ ಕ್ರೀಡಾಕೂಟ ಆಯೋಜಿಸಲಾಗುತ್ತಿದೆ ಈ ಬಾರಿ ವಿರಾಜಪೇಟೆ ಹಾಗೂ ಪೊನ್ನಂಪೇಟೆ ತಾಲೂಕಿನ ಬಂಟರ ಸಂಘದ ವತಿಯಿಂದ ಕ್ರೀಡಾಕೂಟ ನಡೆಸಲಾಗುತ್ತಿದೆ. ಪುರುಷರಿಗೆ ಕ್ರಿಕೆಟ್, ಗುಂಡು ಎಸೆತ, ಹಗ್ಗಜಗ್ಗಾಟ ಹಾಗೂ ಮಹಿಳೆಯರಿಗೆ ಥ್ರೋಬಾಲ್, ಸಂಗೀತ ಕುರ್ಚಿ, ಪುರುಷರಿಗೆ ಹಗ್ಗಜಗ್ಗಾಟ ಸ್ಪರ್ಧೆ ಏರ್ಪಡಿಸಲಾಗಿದೆ. 1 ರಿಂದ 4, 5 ರಿಂದ 7 ಹಾಗೂ 8 ರಿಂದ 10ನೇ ತರಗತಿಯ ಶಾಲಾ ಮಕ್ಕಳಿಗೆ ಪ್ರತ್ಯೇಕ ಓಟದ ಸ್ಪರ್ಧೆ, ಪುಟಾಣಿಗಳಿಗೆ ಕಪ್ಪೆ ಜಿಗಿತ ಸೇರಿದಂತೆ ಹಲವು ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

ಈಗಾಗಲೇ ನೋಂದಾಯಿಸಿಕೊಂಡಿರುವ ಕ್ರಿಕೆಟ್ ತಂಡಗಳಿಗೆ ಮೇ 12ರಂದು ಬೆಳಗ್ಗೆ 10 ಗಂಟೆಗೆ ವಿರಾಜಪೇಟೆಯ ಮಂಜುನಾಥ ಹೋಟೆಲ್‌ನಲ್ಲಿ ತಂಡಗಳ ನಡುವಿನ ಪಂದ್ಯಾವಳಿಯ ಪಟ್ಟಿ ಮಾಡಲಾಗುವುದು. ಈ ವೇಳೆ ಎಲ್ಲಾ ತಂಡಗಳ ನಾಯಕರು ಹಾಜರಾಗಬೇಕು. ಮೇ 18 ರಂದು ಬೆಳಗ್ಗೆ 9 ಗಂಟೆಗೆ ಕ್ರೀಡಾಕೂಟಕ್ಕೆ ಚಾಲನೆ ನೀಡಲಾಗುವುದು. ಮೇ 19ರಂದು ಸಂಜೆ 6 ಗಂಟೆಗೆ ಸಮಾರೋಪ ನಡೆಯಲಿದ್ದು, ಶಾಸಕ ಎ.ಎಸ್.ಪೊನ್ನಣ್ಣ, ಬಂಟರ ಸಂಘದ ಜಿಲ್ಲಾಧ್ಯಕ್ಷ ಜಗದೀಶ್ ರೈ, ಪ್ರಧಾನ ಕಾರ್ಯದರ್ಶಿ ರವೀಂದ್ರ ರೈ ಮತ್ತಿತರರು ಭಾಗವಹಿಸಲಿದ್ದಾರೆ. ಇದೇ ವೇಳೆ ಮಂಗಳೂರಿನ ಅಲಂಗಾರಿನ ನಕ್ಷತ್ರ ಕಲಾ ತಂಡದಿಂದ 'ನವಶಕ್ತಿ ವೈಭವ ಯಕ್ಷಗಾನ' ಪ್ರದರ್ಶಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬಂಟರ ಸಂಘದ ತಾಲೂಕು ಉಪಾಧ್ಯಕ್ಷ ಪ್ರಕಾಶ್ ರೈ, ಕಾರ್ಯದರ್ಶಿ ಸಂಪತ್ ಶೆಟ್ಟಿ, ಹೇಮಂತ್ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಮಳೆಯಿಂದ ಪ್ರಾಣ ಹಾನಿಯಾಗದಂತೆ ಎಚ್ಚರ ವಹಿಸಿ

ನಿರ್ಲಕ್ಷ್ಯ ವಹಿಸುವ ಅಧಿಕಾರಿಗಳ ವಿರುದ್ಧ ಕ್ರಮ: ಜಿಲ್ಲಾಧಿಕಾರಿ ಎಚ್ಚರಿಕೆ

● ಬಿದ್ದ ಮರ, ವಿದ್ಯುತ್ ಕಂಬ ತಕ್ಷಣ ತೆರವುಗೊಳಿಸಿ, ಅನಾಹುತ ತಪ್ಪಿಸಿ
● ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಿ

ಮಂಡ್ಯ, ಮೇ 8– ಮಳೆಗಾಲ ಪ್ರಾರಂಭವಾಗುತ್ತಿದ್ದು, ಮಳೆ ಹಾಗೂ ಗಾಳಿಯಿಂದ ಪ್ರಾಣ ಹಾನಿಯಾಗದಂತೆ ಮುನ್ನೆಚ್ಚರಿಕೆ ಕ್ರಮ ವಹಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ. ಕುಮಾರ ಸೂಚಿಸಿದರು.

ಇಂದು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ವಿಪತ್ತು ನಿರ್ವಹಣಾ ಸಮಿತಿ ಸಭೆಯಲ್ಲಿ ಮಾತನಾಡಿ ಅವರು, ಇಲಾಖೆಗಳು ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸದೇ ಸಣ್ಣ ಪುಟ್ಟ ಕಾರಣಗಳಿಂದ ಮಳೆ ಅಥವಾ ಬಿರುಗಾಳಿಯಿಂದ ಪ್ರಾಣ ಹಾನಿಯಾದಲ್ಲಿ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವುದರ ಜೊತೆಗೆ ವಿಪತ್ತು ನಿರ್ವಹಣಾ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಜಿಲ್ಲೆಯಲ್ಲಿ ಈ ಬಾರಿ ಸಾಮಾನ್ಯ ಮಳೆಗಿಂತ ಅಧಿಕ ಮಳೆಯಾಗುವ ಸಾಧ್ಯತೆಯಿದೆ. ಮಳೆಯ ಜೊತೆ ಹೆಚ್ಚಿನ ಗಾಳಿಯು ಸಂಭವಿಸಲಿದ್ದು, ಕೂಡಲೇ ಎಲ್ಲಾ ಇಲಾಖೆಯವರು ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಿಳಿಸಿದ ಅವರು ದುರ್ಬಲ ಕೊಂಬೆಗಳನ್ನು ತೆರವುಗೊಳಿಸಿ ನಗರ ಸ್ಥಳೀಯ ಸಂಸ್ಥೆಗಳು, ಗ್ರಾಮ ಪಂಚಾಯಿತಿಗಳು ಅರಣ್ಯ ಇಲಾಖೆಯೊಂದಿಗೆ ಜಂಟಿಯಾಗಿ ಕಾರ್ಯನಿರ್ವಹಿಸಿ ಮರದ ದುರ್ಬಲ ಕೊಂಬೆಗಳನ್ನು ತೆರವುಗೊಳಿಸಿ ಎಂದರು.

ಮಳೆ ಬಂದ ಸಂದರ್ಭದಲ್ಲಿ ಮರಗಳು, ವಿದ್ಯುತ್ ಕಂಬಗಳು ಗಾಳಿಯಿಂದ ಬಿದ್ದು ಹೋದಲ್ಲಿ ಅವುಗಳನ್ನು ತಕ್ಷಣ ತೆರವುಗೊಳಿಸಲು ಇಲಾಖೆ ಸಜ್ಜಾಗಿರಬೇಕು. ಮಳೆಯ ಸಂದರ್ಭದಲ್ಲಿ ಕ್ಷಿಪ್ರವಾಗಿ ಕೆಲಸ ನಿರ್ವಹಿಸಲು ತಂಡಗಳನ್ನು ರಚಿಸಿ. ಸಾರ್ವಜನಿಕರಿಂದ ದೂರು ಬಾರದಂತೆ ಕೆಲಸನಿರ್ವಹಿಸಿ ಎಂದರು.

ಕಂಟ್ರೋಲ್ ರೂಂ ತಾಲೂಕುವಾರು ತಾಲೂಕು ಕಚೇರಿ, ತಾಲೂಕು ಪಂಚಾಯಿತಿ ಕಚೇರಿ, ನಗರ ಸ್ಥಳೀಯ ಸಂಸ್ಥೆಗಳ ಕಚೇರಿ, ಸೆಸ್ಕ್ ಕಚೇರಿ, ಅರಣ್ಯ ಇಲಾಖೆಗಳಲ್ಲಿ 2 ದಿನದೊಳಗಾಗಿ ಕಂಟ್ರೋಲ್ ರೂಂ ತೆರೆದು ಸಾರ್ವಜನಿಕರು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಗಳ ವಿವರವನ್ನು ಮಾಹಿತಿಗಾಗಿ ಅನಾವರಣಗೊಳಿಸಬೇಕು ಎಂದರು. ಮಳೆಯಿಂದ ಮನೆ ಹಾನಿ ಅಥವಾ ಬೆಳೆ ಹಾನಿಯಾದಲ್ಲಿ ತಕ್ಷಣ ಪರಿಶೀಲಿಸಿ ತಹಶೀಲ್ದಾರ್, ಜಿಲ್ಲಾಧಿಕಾರಿ ಕಚೇರಿಗೆ ವರದಿ ಸಲ್ಲಿಸಬೇಕು ಎಂದರು.



ವಿಪತ್ತು ನಿರ್ವಹಣಾ ಸಮಿತಿ ಸಭೆ ನಡೆಸಿದ ಜಿಲ್ಲಾಧಿಕಾರಿ ಡಾ.ಕುಮಾರ್

ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಮಳೆ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಮಳೆ ನೀರು ನಿಂತಲ್ಲಿ ತೆರವುಗೊಳಿಸಲು ತಂಡಗಳನ್ನು ರಚಿಸಿ ದಿನದ 24 ಗಂಟೆ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕು. ವಿದ್ಯುತ್ ಕಂಬಗಳು ಸುಸ್ಥಿತಿಯಲ್ಲಿರುವ ಬಗ್ಗೆ ಪರಿಶೀಲಿಸಿ ವರದಿ ನೀಡಬೇಕು ಎಂದರು.

ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್ ನಾಗರಾಜು ಅವರು ಮಾತನಾಡಿ ಈ ಹಿಂದೆ ಮಳೆಯಾದ ಸಂದರ್ಭದಲ್ಲಿ ನಾಗಮಂಗಲ ಬಸ್ ನಿಲ್ದಾಣದಲ್ಲಿ ನೀರು ತುಂಬಿಕೊಂಡು ತೊಂದರೆಯಾಗಿತ್ತು. ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಿ. ಕೆರೆಗಳಲ್ಲಿ ಹೂಳು ತೆಗೆಯುವ ಕೆಲಸ ವ್ಯವಸ್ಥಿತವಾಗಿ ನಡೆಯಲಿ ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶೇಖ್ ತನ್ವೀರ್ ಆಸೀಫ್, ಪಾಂಡವಪುರ ಉಪವಿಭಾಗಾಧಿಕಾರಿ ಮಾರುತಿ, ಸೆಸ್ಕ್ ಅಧೀಕ್ಷಕ ಅಭಿಯಂತರ ಸೋಮಶೇಖರ್, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕ ಕೃಷ್ಣಕುಮಾರ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕಿ ರೂಪಶ್ರೀ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಜಪಾನಿನ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಕ್ಕೆ ಮಂಡ್ಯ ವಿದ್ಯಾರ್ಥಿಗಳು

ಮಂಡ್ಯ, ಮೇ 8– ಜಪಾನ್ ದೇಶದಲ್ಲಿ ಮೇ 29ರಿಂದ ಜೂನ್ 6ರವರೆಗೆ ನಡೆಯುವ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಕ್ಕೆ ರಿಪಬ್ಲಿಕ್ ಸೆಂಟ್ರಲ್ ಸ್ಕೂಲ್‌ನ ವಿದ್ಯಾರ್ಥಿಗಳಾದ ಅಜಿತ್ ಪಿ.ಗೌಡ ಹಾಗೂ ಹಿತಶ್ರೀ ಪ್ರಸಾದ್ ಆಯ್ಕೆಯಾಗಿದ್ದಾರೆ.

ತಾಲೂಕಿನ ಸಿದ್ದಯ್ಯನ ಕೊಪ್ಪಲು ಗೇಟ್ ಬಳಿ ಇರುವ ರಿಪಬ್ಲಿಕ್ ಸೆಂಟ್ರಲ್ ಸ್ಕೂಲ್ ಆವರಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಶಾಲೆಯ ಅಧ್ಯಕ್ಷ ಮಂಜು, ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಕ್ಕೆ ನಮ್ಮ ಶಾಲೆಯ ಇಬ್ಬರು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡಿದೆ ಎಂದು ತಿಳಿಸಿದರು.

ತಾಲೂಕಿನ ಎ.ಹುಲ್ಲುಕೆರೆ ಗ್ರಾಮದ ಪ್ರಭು ಹಾಗೂ ರಜನಿ ದಂಪತಿಯ ಪುತ್ರ ಅಜಿತ್ ಪಿ.ಗೌಡ ಹಾಗೂ ಚಾಮಲಾಪುರ ಗ್ರಾಮದ ಹರಿಪ್ರಸಾದ್ ಹಾಗೂ ಮಾಲಾ ದಂಪತಿಯ ಪುತ್ರಿ ಹಿತಶ್ರೀ ಪ್ರಸಾದ್ ಜಪಾನ್ ದೇಶಕ್ಕೆ ತೆರಳುತ್ತಿರುವುದು ನಮ್ಮ ಶಾಲೆಗೆ ಮತ್ತೊಂದು ಕೀರ್ತಿದಾಯಕ ವಿಷಯವಾಗಿದೆ. ಇಬ್ಬರು ವಿದ್ಯಾರ್ಥಿಗಳಿಗೆ ನಮ್ಮ ಶಾಲೆಯ ವತಿಯಿಂದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದರು.

ಕಳೆದ ಶೈಕ್ಷಣಿಕ ವರ್ಷದಲ್ಲಿ ನಮ್ಮ ಶಾಲೆಯ 7ನೇ ತರಗತಿಯ ವಿದ್ಯಾರ್ಥಿ ಶಾನ್ ಸ್ಟೀವನ್ ಹಾಗೂ 8ನೇ ತರಗತಿಯ ಧನ್ಯ ಜೆ.ಗೌಡ ಅವರು ಜಪಾನ್ ದೇಶದ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಕ್ಕೆ ಆಯ್ಕೆಯಾಗಿದ್ದರು. ಇಡೀ ಕರ್ನಾಟಕ ರಾಜ್ಯದಲ್ಲಿ ಜಪಾನ್ ದೇಶಕ್ಕೆ ಆಯ್ಕೆಯಾದ ಶಾಲೆ ನಮ್ಮದು ಎಂದು ಶ್ಲಾಘಿಸಿದರು.

ಕಳೆದ ಬಾರಿ ಜಪಾನ್ ದೇಶಕ್ಕೆ ತೆರಳಿದ ಸಂದರ್ಭದಲ್ಲಿ ಅಲ್ಲಿಯ ಜನ ಜೀವನ, ಶಿಕ್ಷಣ, ಸಂಸ್ಕೃತಿ ಬಗ್ಗೆ ನಮ್ಮ ಶಾಲೆಯ ವಿದ್ಯಾರ್ಥಿಗಳು ತಿಳಿದುಕೊಂಡಿದ್ದರು. ಜಪಾನ್ ವಿದ್ಯಾರ್ಥಿಗಳು ಓದಿನ ಜೊತೆಗೆ ಕರಾಟೆ, ಕುಂಗ್ ಫು, ವಿವಿಧ ಕ್ರೀಡೆಗಳು, ಶಾಲೆಗಳನ್ನು ಸ್ವಚ್ಛ ಮಾಡುವುದಕ್ಕೆ ಆದ್ಯತೆ ನೀಡುತ್ತಾರೆ ಎಂಬ ವಿಚಾರ, ಬುಲೆಟ್ ಟ್ರೈನ್ ಕಾರ್ಯ ನಿರ್ವಹಣೆ, ಸುನಾಮಿ ಮತ್ತು ಭೂಕಂಪ ಆದ ಸ್ಥಳಗಳಿಗೂ ಕರೆದುಕೊಂಡು ಹೋಗಿ ಹಲವು ವಿಚಾರಗಳನ್ನು ತಿಳಿಸಿಕೊಟ್ಟಿದ್ದರು ಎಂದರು.



ಜಪಾನಿಗೆ ತೆರಳುತ್ತಿರುವ ಅಜಿತ್.ಪಿ.ಗೌಡ ಮತ್ತು ಹಿತಶ್ರೀ ಪ್ರಸಾದ್‌ರನ್ನು ಅಭಿನಂದಿಸಲಾಯಿತು.

ನಮ್ಮ ಶಾಲೆಯು 2021–22ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು, ಮೊದಲ ವರ್ಷದಲ್ಲೇ ಶಾಲೆಯು ಎಲ್‌ಕೆಜಿಯಿಂದ 10ನೇ ತರಗತಿವರೆಗೆ ಐಸಿಎಸ್‌ಇ ಮತ್ತು ರಾಜ್ಯ ಪಠ್ಯಕ್ರಮಗಳು ಪ್ರಾರಂಭಗೊಂಡು, ಅದೇ ವರ್ಷದಲ್ಲಿ 280 ವಿದ್ಯಾರ್ಥಿಗಳನ್ನು ಒಳಗೊಂಡಿತ್ತು. 2022–23ನೇ ಸಾಲಿನಲ್ಲಿ 400 ವಿದ್ಯಾರ್ಥಿಗಳನ್ನು ಒಳಗೊಂಡಿರುವುದು ಹೆಮ್ಮೆಯ ವಿಷಯ. ನಮ್ಮ ಶಾಲೆಯಲ್ಲಿ ಚಟುವಟಿಕೆ ಆಧಾರಿತವಾಗಿ ಶಿಕ್ಷಣವನ್ನು ನೀಡುತ್ತಿದ್ದು, ಕರಾಟೆ, ಯೋಗ, ಕ್ರೀಡೆಯಲ್ಲೂ ಸಹ ನಮ್ಮ ಮಕ್ಕಳು ಅತ್ಯುತ್ತಮ ಸಾಧನೆಯನ್ನು ಮಾಡಿದ್ದಾರೆ. ಕರಾಟೆ, ಯೋಗ, ಅಥ್ಲೆಟಿಕ್ಸ್‌ನಲ್ಲಿ ನಮ್ಮ ಶಾಲೆಯ ಮಕ್ಕಳು ರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ಬಹುಮಾನ ಗಳಿಸಿ ನಮ್ಮ ಶಾಲೆಗೆ ಕೀರ್ತಿ ತಂದಿದ್ದಾರೆ ಎಂದರು.

ಒಟ್ಟು ಮೂರು ರೌಂಡ್‌ನಲ್ಲಿ ಜಪಾನ್‌ನ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಕ್ಕೆ ಭಾರತದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡಿದ್ದು, ದೇಶದಿಂದ ಒಟ್ಟು 78 ವಿದ್ಯಾರ್ಥಿಗಳು ಸ್ಪರ್ಧೆಗಿಳಿದಿದ್ದರು. ಈ ಪೈಕಿ ಕರ್ನಾಟಕದಿಂದ ಇಬ್ಬರು ವಿದ್ಯಾರ್ಥಿಗಳು ಆಯ್ಕೆಯಾಗಿದ್ದು, ಛತ್ತೀಸ್‌ಘಡದ ಶಾಲೆಯೊಂದರಿಂದ 22ಕ್ಕೂ ಹೆಚ್ಚು ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ ಎಂದು ವಿವರಿಸಿದರು.

ಗೋಷ್ಠಿಯಲ್ಲಿ ಪ್ರಾಂಶುಪಾಲೆ ಸುನೀತಾ ರಾಜನ್ ಹಾಗೂ ವಿದ್ಯಾರ್ಥಿಗಳಾದ ಅಜಿತ್ ಪಿ.ಗೌಡ, ಹಿತಶ್ರೀ ಹಾಗೂ ಪೋಷಕರು ಇದ್ದರು.

ಬಂಗಾರದ ಪಲ್ಲಕಿಯಲ್ಲಿ ರಾಮಾನುಜಾಚಾರ್ಯರ ವೈಭವದ ಉತ್ಸವ

ಮೇಲುಕೋಟೆ: ರಾಮಾನುಜಾಚಾರ್ಯರ 1007ನೇ ತಿರುನಕ್ಷತ್ರ ಮಹೋತ್ಸವದ 5ನೇ ದಿನದ ಅಂಗವಾಗಿ ಮಂಗಳವಾರ ರಾತ್ರಿ ಮೇಲು ಕೋಟೆಯ ಶ್ರೀರಾಮಾನುಜಾಚಾರ್ಯರಿಗೆ ಪುಷ್ಪಾಲಂಕೃತ ಬಂಗಾರದ ಪಲ್ಲಕ್ಕಿ ಉತ್ಸವ ವೈಭವದಿಂದ ನೆರವೇರಿತು.

ಮಲ್ಲಿಗೆ ಹಾಗೂ ಕನಕಾಂಬರಗಳಿಂದ ಭವ್ಯವಾಗಿ ಅಲಂಕೃತಗೊಂಡಿದ್ದ ಬಂಗಾರದ ಪಲ್ಲಕ್ಕಿಯಲ್ಲಿ ವಿಶೇಷ ಪುಷ್ಪಾಹಾರಗಳೊಂದಿಗೆ ಅಲಂಕೃತರಾದ ರಾಮಾನುಜರ ಉತ್ಸವ ರಾತ್ರಿ 7–30ಕ್ಕೆ ಆರಂಭವಾಗಿ ನಾಲ್ಕೂ ಬೀದಿಗಳಲ್ಲಿ ವೈಭವದಿಂದ ನೆರವೇರಿತು.

ದಿವ್ಯಪ್ರಬಂಧ ಪಾರಾಯಣ ಹಾಗೂ ಮಂಗಳವಾದ್ಯಗಳೊಂದಿಗೆ ನಡೆದ ಆಚಾರ್ಯರ ಉತ್ಸವದ ವೈಭವವನ್ನು ಸಹಸ್ರಾರು ಭಕ್ತರು ಕಣ್ತುಂಬಿಕೊಂಡರು. ಐದನೇ ದಿನದ ವಿಶೇಷದ ಅಂಗವಾಗಿ ರಾಮಾನುಜಾಚಾರ್ಯರಿಗೆ ಅಶ್ವವಾಹನೋತ್ಸವ ತಿರುವಾರಾಧನೆ, ನಂತರ ಅಭಿಷೇಕ ಮಹೋತ್ಸವಗಳು ನಡೆದವು. ರಾಮಾನುಜಾಚಾರ್ಯ ಸನ್ನಿಧಿಯ ಅರ್ಚಕ ವಿದ್ವಾನ್ ಬಿ.ವಿ ಆನಂದಾಳ್ವಾರ್ ಪರಿಶ್ರಮದಲ್ಲಿ ವಿಶೇಷ ವ್ಯವಸ್ಥೆಗಳನ್ನು ಮಾಡಲಾಗಿತ್ತು ಆಚಾರ್ಯರ ತಿರುನಕ್ಷತ್ರಮಹೋತ್ಸವದ ಉತ್ಸವಗಳು ನೆರವೇರುತ್ತಿವೆ.



ಅರಣ್ಯಕ್ಕೆ ಬೆಂಕಿ ಇಟ್ಟಿದ್ದವನ ಬಂಧನ

ಗುಂಡ್ಲುಪೇಟೆ, ಮೇ 8–ತಾಲೂಕಿನ ಬಂಡೀಪುರ ಮದ್ದೂರು ಅರಣ್ಯಕ್ಕೆ ಬೆಂಕಿ ಇಟ್ಟಿದ್ದ ಒಬ್ಬನನ್ನು ಅರಣ್ಯಾಧಿಕಾರಿಗಳು ಬಂಧಿಸಿದ್ದು, ತಲೆ ಮರೆಸಿಕೊಂಡಿರುವ ಮತ್ತಿಬ್ಬರ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.

ತಾಲೂಕಿನ ಕಳ್ಳೀಪುರ ಗ್ರಾಮದ ನಿವಾಸಿ ಅರುಣ್ ಕುಮಾರ್ ಬಂಧಿತ. ಈತನಿಂದ ತೇಗದ ಮರದ ನಾಲ್ಕು ತುಂಡುಗಳನ್ನು ವಶಪಡೆಸಿಕೊಳ್ಳಲಾಗಿದೆ.

ಇತ್ತೀಚಿಗೆ ಬಂಧಿತ ಅರುಣ್ ಕುಮಾರ್ ಮತ್ತಿಬ್ಬರೊಂದಿಗೆ ಕಾಡಿಗೆ ಬೆಂಕಿ ಹಚ್ಚಿ, ಅದನ್ನು ನಂದಿಸಲು ಅರಣ್ಯ ಸಿಬ್ಬಂದಿ ಬೇರೆಡೆ ತೆರಳುತ್ತಿದ್ದಂತೆ ಕಾಡಂಚಿನ ತೇಗದ ಮರಗಳನ್ನು ಕಡಿದು ಸಾಗಿಸಿದ್ದ.

ಇದನ್ನು ಪತ್ತೆ ಹಚ್ಚಿದ ಅರಣ್ಯಾಧಿಕಾರಿಗಳು ಮನೆಯಲ್ಲಿಯೇ ಇದ್ದ ಅರುಣ್ ಕುಮಾರ್‌ನನ್ನು ಬಂಧಿಸಿ, ತೇಗದ ಮರದ ತುಂಡುಗಳನ್ನು ವಶ ಪಡಿಸಿಕೊಳ್ಳಲಾಗಿದೆ ಎಂದು ಎಸಿಎಫ್ ರವೀಂದ್ರ ತಿಳಿಸಿದ್ದಾರೆ.




ಅರಣ್ಯಕ್ಕೆ ಬೆಂಕಿ ಇಟ್ಟಿದ್ದ ಆರೋಪಿಯನ್ನು ಅರಣ್ಯಾಧಿಕಾರಿಗಳು ಬಂಧಿಸಿ, ತೇಗದ ತುಂಡುಗಳನ್ನು ವಶಪಡಿಸಿಕೊಂಡಿರುವುದು.

ದಾಖಲಾತಿ ಅವಧಿ ವಿಸ್ತರಣೆ

ಚಾಮರಾಜನಗರ, ಮೇ 8–ನಗರದ ಹೊರವಲಯದ ಮಲ್ಲಯ್ಯನಪುರದ ಆದರ್ಶ ವಿದ್ಯಾಲಯದ 2024–25ನೇ ಸಾಲಿನ 6ನೇ ತರಗತಿಗೆ ಮೊದಲನೇ ಸುತ್ತಿನ ಆಯ್ಕೆ ಪಟ್ಟಿಯನ್ನು ಈಗಾಗಲೇ ಬಿಡುಗಡೆ ಮಾಡಲಾಗಿದ್ದು, ಆಯ್ಕೆಯಾಗಿರುವ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಮೇ 18ರವರೆಗೆ ಅವಧಿ ವಿಸ್ತರಿಸಲಾಗಿದೆ ಎಂದು ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿವಮ್ಮ ನಿಧನ

ಚಾಮರಾಜನಗರ, ಮೇ 8–ತಾಲೂಕಿನ ಬೂದಂಬಳ್ಳಿ ಗ್ರಾಮದ ಜಿಲ್ಲಾ ಕಾಂಗ್ರೆಸ್ ಕಿಸಾನ್ ಘಟಕದ ಜಿಲ್ಲಾಧ್ಯಕ್ಷ ಬೂದುಬಳ್ಳಿ ಶಂಕರ್ ಅವರ ತಾಯಿ ಶಿವಮ್ಮ (60) ಬುಧವಾರ ಮಧ್ಯಾಹ್ನ ನಿಧನರಾದರು.



ಮೃತರು ಬೂದಂಬಳ್ಳಿ ಶಂಕರ್, ಎಲ್‌ಐಸಿ ಪ್ರತಿನಿಧಿ ಎಂ.ಮಹೇಶ್ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮದ ಮೃತರ ಜಮೀನಿನಲ್ಲಿ ಗುರುವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಲಿದೆ.

ವಿದ್ಯಾರ್ಥಿನಿ ನೇಣು ಬಿಗಿದುಕೊಂಡು ಆತ್ಮಹತ್ಯೆ

ಚಾಮರಾಜನಗರ, ಮೇ 8–ಕಾಲೇಜಿಗೆ ಸೇರುವ ವಿಚಾರವಾಗಿ ವಿದ್ಯಾರ್ಥಿನಿಯೊಬ್ಬಳು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಂಗಳವಾರ ರಾತ್ರಿ ನಗರದಲ್ಲಿ ನಡೆದಿದೆ.

ನಗರದ ನಿವಾಸಿ ನಾಗರಾಜು ಅವರ ಪುತ್ರಿ ಪೂಜಾ (17) ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿನಿ. ನಗರದ ಕಾಲೇಜೊಂದರಲ್ಲಿ ಪ್ರಥಮ ಪಿಯುಸಿ ಮುಗಿಸಿದ್ದ ಈಕೆ, ದ್ವಿತೀಯ ಪಿಯುಸಿಗೆ ಬೇರೆ ಕಾಲೇಜಿಗೆ ಸೇರಲು ಬಯಸಿದ್ದಳು. ಇದಕ್ಕೆ ಪೋಷಕರು ಒಪ್ಪಿರಲಿಲ್ಲ. ಇನ್ನು ಒಂದು ವರ್ಷ ಅದೇ ಕಾಲೇಜಿನಲ್ಲಿ ಓದು. ನಂತರ ಬೇರೆ ಕಾಲೇಜಿಗೆ ಸೇರು ಎಂದು ಪೋಷಕರು ಆಕೆಯ ಮನವೊಲಿಸಲು ಯತ್ನಿಸಿದ್ದರು. ಆದರೆ, ಈ ವಿಚಾರವಾಗಿ ಮನನೊಂದು ಮನೆಯ ಕೊಠಡಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಈ ಸಂಬಂಧ ಚಾಮರಾಜನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಳ್ಳಂ ಬೆಳಗ್ಗೆಯೇ ಪುಂಡಾನೆ ಸೆರೆ

ಸಾಕಾನೆಗಳ ಮೂಲಕ ಅರಣ್ಯಾಧಿಕಾರಿಗಳ ಕಾರ್ಯಾಚರಣೆ

ಗುಂಡ್ಲುಪೇಟೆ, ಮೇ 8–ತಾಲೂಕಿನ ಹಿಮವದ್ ಗೋಪಾಲಸ್ವಾಮಿಬೆಟ್ಟದ ಕಾಡಂಚಿನ ಗ್ರಾಮಗಳ ರೈತರ ಜಮೀನುಗಳಲ್ಲಿ ದಾಂಧಲೆ ನಡೆಸುತ್ತಿದ್ದ ಪುಂಡಾನೆಯನ್ನು ಅರಣ್ಯ ಇಲಾಖೆಯ ಅಧಿಕಾರಿಗಳು ಸಾಕಾನೆಗಳ ಮೂಲಕ ಬುಧವಾರ ಬೆಳಂಬೆಳಗ್ಗೆ ಸೆರೆ ಹಿಡಿದಿದ್ದಾರೆ.

ಗೋಪಾಲಸ್ವಾಮಿಬೆಟ್ಟ ವಲಯ ವ್ಯಾಪ್ತಿಯ ಸೋಮನಾಥಪುರದ ಸ್ಯಾಂಡಲ್ ರಿಸರ್ವ್ ಅರಣ್ಯ ಪ್ರದೇಶದಲ್ಲಿ ಸೆರೆ ಹಿಡಿದ ಸುಮಾರು 40 ವರ್ಷದ ಗಂಡಾನೆಯನ್ನು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಪರಿಸರ ಸೂಕ್ಷ್ಮ ವಲಯದ ಗುಂಡ್ರೆ ಅರಣ್ಯಕ್ಕೆ ಸುರಕ್ಷಿತವಾಗಿ ಬಿಡಲಾಯಿತು.

ಇಪ್ಪತ್ತು ದಿನಗಳ ಹಿಂದೆಯೇ ಬಂಡೀಪುರದ ರಾಂಪುರ ಹಾಗೂ ದುಬಾರೆ ಶಿಬಿರದ ಸಾಕಾನೆಗಳನ್ನು ಕರೆತಂದು ಪುಂಡಾನೆ ಸೆರೆಗೆ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ಆದರೆ, ಅರಣ್ಯ ಸಿಬ್ಬಂದಿ ಹಾಗೂ ಸಾಕಾನೆಗಳನ್ನು ಕಂಡ ಕೂಡಲೇ ಈ ಪುಂಡಾನೆ ಓಡಿಹೋಗುತ್ತಿತ್ತು. ಕಾರ್ಯಾಚರಣೆ ನಿಲ್ಲಿಸಿದ ನಂತರ ಜಮೀನುಗಳತ್ತ ಮತ್ತೆ ಬಂದು ದಾಂಧಲೆ ನಡೆಸುತ್ತಿತ್ತು.

ಆದರೆ, ಬುಧವಾರ ಮುಂಜಾನೆಯೇ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಸಾಕಾನೆಗಳಾದ ಕಂಜನ್, ರಾಮ, ಲಕ್ಷ್ಮಣ, ಈಶ್ವರ, ರೋಹಿತ ನೆರವಿನಿಂದ ಕೂಂಬಿಂಗ್ ನಡೆಸಿ ಪುಂಡಾನೆಯನ್ನು ಸೆರೆ ಹಿಡಿದರು. ಮಂಗಳವಾರ ಸಂಜೆಯಿಂದಲೇ ಪುಂಡಾನೆಯ ಚಲನವಲನದ ಮೇಲೆ ಕಣ್ಣಿಟ್ಟಿದ್ದ ಅರಣ್ಯಾಧಿಕಾರಿಗಳು ಬುಧವಾರ ಮುಂಜಾನೆ ಸಫಾರಿ ಟಿಕೆಟ್ ಕೌಂಟರ್ ಬಳಿಯೇ ಸುಳಿದಾಡುತ್ತಿರುವುದನ್ನು ಪತ್ತೆ ಹಚ್ಚಿದರು. ನಂತರ ದಿಢೀರ್ ಕಾರ್ಯಾಚರಣೆ ನಡೆಸಿ, ಮುಖ್ಯ ಪಶು ವೈದ್ಯ ಡಾ.ಮುಜಿಬುರು ರೆಹಮಾನ್, ಪಶು ವೈದ್ಯ ಡಾ.ಮಿರ್ಜಾ ವಾಸಿಂ ಸಾಕಾನೆಗಳ ಮೇಲೆ ಕುಳಿತು ಪುಂಡಾನೆಯನ್ನು ಸುತ್ತುವರೆದು ಅರಿವಳಿಕೆ ಮದ್ದು ನೀಡಿ ಪ್ರಜ್ಞೆ ತಪ್ಪಿಸಿದರು. ಬಳಿಕ ಸೆರೆ ಹಿಡಿಯಲಾಯಿತು.



ರೈತರ ಜಮೀನುಗಳಲ್ಲಿ ದಾಂಧಲೆ ನಡೆಸುತ್ತಿದ್ದ ಪುಂಡಾನೆಯನ್ನು ಅರಣ್ಯ ಅಧಿಕಾರಿಗಳು ಸೆರೆ ಹಿಡಿದಿರುವುದು.

ಕಾರ್ಯಾಚರಣೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರಭಾಕರನ್, ಎಸಿಎಫ್ ನವೀನ್, ಆರ್‌ಎಫ್‌ಓ ಮಂಜುನಾಥ್, ಜ್ಞಾನಶೇಖರ್, ಗಜೇಂದ್ರ, ವಿಜಯ್, ಕಾರ್ತಿಕ್, ಗೋಪಾಲಕೃಷ್ಣ, ಆನಂದ್ ನೇತೃತ್ವದಲ್ಲಿ 100ಕ್ಕೂ ಹೆಚ್ಚು ಎಸ್‌ಟಿಪಿಎಫ್ ಮತ್ತು ಲೆಪಾರ್ಡ್ ಟಾಸ್ಕ್‌ಫೋರ್ಸ್ ಸಿಬ್ಬಂದಿ ಭಾಗವಹಿಸಿದ್ದರು.

ಅಭಿನಂದನೆ: ಕಳೆದ ಮೂರು ತಿಂಗಳಿನಿಂದ ಸತತವಾಗಿ ದಾಳಿ ನಡೆಸಿ ಬೆಳೆ ಹಾನಿ ಮಾಡುತ್ತಿದ್ದ ಪುಂಡಾನೆಯನ್ನು ಯಶಸ್ವಿಯಾಗಿ ಸೆರೆಹಿಡಿದ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗೆ ಈ ಭಾಗದ ರೈತರು ಅಭಿನಂದಿಸಿದ್ದಾರೆ.

ಖಾಸಗಿ ಬಸ್ ಡಿಕ್ಕಿ: ಬೈಕ್ ಸವಾರ ಸಾವು

ಕೊಳ್ಳೇಗಾಲ, ಮೇ 8– ಖಾಸಗಿ ಬಸ್ ಡಿಕ್ಕಿ ಹೊಡೆದು ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲೂಕಿನ ಸಿಂಗನಲ್ಲೂರು ಗ್ರಾಮದ ಮುಖ್ಯ ರಸ್ತೆಯಲ್ಲಿ ಬುಧವಾರ ನಡೆದಿದೆ.

ಸಿಂಗಾನಲ್ಲೂರು ಗ್ರಾಮದ ವಾಸಿ ಶ್ರೀಧರ್(51) ಮೃತಪಟ್ಟ ಬೈಕ್ ಸವಾರ. ಈತ ಹನೂರಿನಲ್ಲಿ ಬಾಳೆ ಹಣ್ಣಿನ ಅಂಗಡಿ ಇಟ್ಟುಕೊಂಡ ವ್ಯಾಪಾರ ಮಾಡುತ್ತಿದ್ದರು. ಬುಧವಾರ ಶ್ರೀಧರ್ ಬೈಕ್‌ನಲ್ಲಿ ಗ್ರಾಮಕ್ಕೆ ಹೋಗುತ್ತಿದ್ದಾಗ ಮಹದೇಶ್ವರಬೆಟ್ಟದ ಕಡೆಯಿಂದ ಬರುತ್ತಿದ್ದ ಖಾಸಗಿ ಬಸ್ ಡಿಕ್ಕಿ ಹೊಡೆದಿದೆ.



ಶ್ರೀಧರ್

ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕೊಳ್ಳೇಗಾಲ ಗ್ರಾಮಾಂತರ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ: ಸೆಸ್ಕ್‌ನ ಸಂತೇಮರಹಳ್ಳಿ ಉಪ ವಿಭಾಗ ವ್ಯಾಪ್ತಿಯ ವಿದ್ಯುತ್ ಮಾರ್ಗ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೇ 9ರಂದು ಬೆಳಗ್ಗೆ 6.30 ರಿಂದ ಸಂಜೆ 5.30ರ ವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಸಂತೇಮರಹಳ್ಳಿ, ಸಂತೇಮರಹಳ್ಳಿ ಮೋಳೆ, ಹೊಸಮೋಳೆ, ಕೆಂಪನಪುರ, ಚುಂಗಡಿಪುರ, ಮಹಂತಾಳಪುರ, ಹುಲ್ಲೇಪುರ, ನಡುಕಲ ಮೋಳೆ, ಬಸವಟ್ಟಿ, ತೆಳ್ಳನೂರು, ಕಾವುದವಾಡಿ, ಬಾಣಹಳ್ಳಿ, ಹೆಗ್ಗವಾಡಿ, ಮೂಡಲ ಅಗ್ರಹಾರ, ವಿವೇಕಾನಂದ ಕಾಲೋನಿ, ಹೆಗ್ಗವಾಡಿಪುರ, ದೇಶವಳ್ಳಿ, ಕುದೇರು, ದೇಮಹಳ್ಳಿ, ಕಮರವಾಡಿ, ಹೆಬಚಹಳ್ಳಿ, ಅಂಕಶೆಟ್ಟಿಮೋಳೆ, ದೇಮಹಳ್ಳಿ ಮೋಳೆ, ಕೊನ್ನುಂಡಿ, ಯಲಕ್ಕೂರು, ತೆಂಕಲಮೋಳೆ, ಬಡಗಲಮೋಳೆ, ಅಂಬಳೆ, ಕಂದಹಳ್ಳಿ, ದುಗ್ಗಹಟ್ಟಿ, ಹೊನ್ನೂರು ಗ್ರಾಮಗಳು ಹಾಗೂ ಐಪಿ ಲಿಮಿಟ್‌ಗಳ ಭಾಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WANTED
Cashier & Manager
Experience 3 years
(Male / Female)
Age 35 years below
Cafe in KD Road, Mysore
96067 88633

ಬೇಕಾಗಿದ್ದಾರೆ
ಜ್ಯೂಸ್ ಶಾಪ್‌ನಲ್ಲಿ ಕೆಲಸ ಮಾಡಲು ಸ್ಯಾಂಡ್ವಿಚ್, ಬರ್ಗರ್, ಮಿಲ್ಕ್‌ಶೇಕ್ ಮಾಡಲು ಅನುಭವವಿರುವರು ಬೇಕು
ಸ್ಥಳ : ರಾಮವಿಲಾಸ ರಸ್ತೆ, ಬನುಮಯ್ಯ ಚೌಕ್, ಮೈಸೂರು
7899798479

ಮೊಬೈಲ್ ಅಂಗಡಿ ಮಾರಾಟಕ್ಕಿದೆ
ಬಸವನಗುಡಿ – ಮೇಟಗಳ್ಳಿ ಮುಖ್ಯ ರಸ್ತೆಯಲ್ಲಿ ಸುಸಜ್ಜಿತವಾಗಿ ರೆಡಿಯಾಗಿ ರನ್ನಿಂಗ್‌ನಲ್ಲಿರುವ ಅಂಗಡಿ ತಕ್ಷಣಕ್ಕೆ ಮಾರಾಟಕ್ಕಿದೆ.
Mob: 8217323951

ಮನೆ ಮಾರಾಟಕ್ಕಿದೆ
30x60 ಅಳತೆಯ ಜಯದೇವ ಆಸ್ಪತ್ರೆ ಹತ್ತಿರ, ಕಾವೇರಿ ಬಡಾವಣೆ.
ಸಂಪರ್ಕಿಸಿ:
7019796722, 9845531718

ಮಾರಾಟಕ್ಕಿದೆ
ನಿವೇಶನ ಹಾಗೂ ಮನೆ ಸೇರಿ
20x30 - 29,30,000/-
30x40 - 58,60,000/-
ಬಿ.ಎಂ.ಐ.ಸಿ. ಅಪ್ರೂವ್ಡ್ ನಿವೇಶನ, ಬ್ಯಾಂಕಿನಿಂದ ಹಣದ ಸಾಲ ಸೌಲಭ್ಯ
ಸಾತಗಳ್ಳಿ ರಿಂಗ್ ರಸ್ತೆ ಇಂದ 3 ಕಿ.ಮೀ. ಮೈಸೂರು
Mob: 9141614633

WANTED
Wanted Teaching staff for reputed institution (Experience Preferred) for all subjects. Transport facilities available. Drop your resume through WhatsApp
8971577685
9980631121

SITES FOR SALE
30x40 ಸೈಟು 14 ಲಕ್ಷ, ಹೆಚ್.ಡಿ. ಕೋಟೆ ರಸ್ತೆಯಲ್ಲಿ ಸೈಟ್ ಬುಕ್ಕಿಂಗ್ ಮಾಡಿ ಹಾಗೂ ಪಡೆಯಿರಿ 150 ಗ್ರಾಂ ಬೆಳ್ಳಿ FREE.
Mob: 9035565773

ಅಡುಗೆಯವರು ಬೇಕಾಗಿದ್ದಾರೆ
ಬ್ರಾಹ್ಮಿನ್ಸ್ ಮಹಿಳಾ ಅಡುಗೆಯವರು ಬೇಕಾಗಿದ್ದಾರೆ
9019522523

SK CONSTRUCTION
ಹೊಸ ಮನೆ ಕಟ್ಟಬೇಕೆ ಚಿಂತೆ ಬೇಡ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineer Plan, 3D Elevation ಸಹಿತ ನಾವೇ ಲೋನ್ ಮಾಡಿ ನಿಮ್ಮ ಕನಸಿನ ಮನೆ ಕಟ್ಟಿ ಕೊಡುತ್ತೇವೆ.
9620528490

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

ಸುಗ್ಗಿ ರಿಯಲ್ ಎಸ್ಟೇಟ್
40x60 W/F
40 feet road,
ಜೆ.ಪಿ.ನಗರ Old,
ಆರ್.ಟಿ.ನಗರ, ಮೈಸೂರು
40x60 W/F
9945148025

SITES FOR SALE
Ready for Construction
Muda Approved
Khata Obtained
Ready for Registration
20x33, 3 Sites all W/F
Keragalli, Dattagalli, Mysore
9886311754

ಸುವರ್ಣ ಯಾತ್ರ
1. ನೇಪಾಳ ಪಶುಪತಿನಾಥ ಅಯೋಧ್ಯ, ಮುಕ್ತಿನಾಥ, ಮನೋಕಾಮನ, ಕಠ್ಮಂಡು ಪೋಕ್ರ ಪ್ರವಾಸ 9 ದಿನಗಳು 29–5–24
2. ಚಾರ್‌ಧಾಮ್ ಯಾತ್ರ ಕೇದಾರ್ ನಾಥ್, ಬದ್ರಿನಾಥ್, ಗಂಗೋತ್ರಿ, ಯಮುನೋತ್ರಿ, ಹರಿದ್ವಾರ್ ಹೊರಡಿ 13 ದಿನಗಳು 7–6–24
3. ಕಾಶಿ ವಿಶ್ವನಾಥ ಬಾಬಾ ವೈದ್ಯನಾಥ್ ಪ್ರವಾಸ 7 ದಿನಗಳು 24–5–24
9019462508
6360146483

ಮನೆ ಮಾರಾಟಕ್ಕಿದೆ
ಜೆ.ಪಿ ನಗರ ಪಕ್ಕದಲ್ಲಿರುವ ಮಾನಂದವಾಡಿ ಮುಖ್ಯ ರಸ್ತೆಗೆ ತಾಗಿಕೊಂಡಿರುವ ಪ್ರಶಾಂತ ಬಡಾವಣೆಯಲ್ಲಿ ಸುಸಜ್ಜಿತವಾದ 20x30 ಡ್ಯೂಪ್ಲೆಕ್ಸ್ ಹೊಸ ಮನೆ ಮಾರಾಟಕ್ಕಿದೆ. ನೇರ ಮಾಲೀಕರನ್ನು ಸಂಪರ್ಕಿಸಲು ಕರೆ ಮಾಡಿ.
7019188932

ಕುವೆಂಪುನಗರದ ಹೋಟೆಲ್
ಒಂದಕ್ಕೆ ಈ ಕೆಳಕಂಡ ಅಭ್ಯರ್ಥಿಗಳು ಬೇಕಾಗಿದ್ದಾರೆ. ವೈಟರ್, ಕ್ಯಾಪ್ಟನ್, ಹೌಸ್ ಕೀಪಿಂಗ್, ಕೌಂಟರ್ ಬಾಯ್ (ಮಹಿಳೆಯರಿಗೂ ಆದ್ಯತೆ) ಆಲ್ ರೌಂಡರ್, ಬೇಕಾಗಿದ್ದಾರೆ.
7676111390

ಎಸ್.ಬಿ.ಬುಕ್ ಡಿಸ್ಟ್ರಿಬ್ಯೂಟರ್ಸ್, ಮೈಸೂರು
ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
ಹುದ್ದೆ – ಡ್ರೈವರ್ ಮತ್ತು ಹೆಲ್ಪರ್–1
2) ಡ್ರೈವರ್ ಮತ್ತು ಡೆಲಿವರಿ ಸಹಾಯಕರು–1
3) ಆಫೀಸ್ ಸಹಾಯಕರು, ಪುರುಷ/ಮಹಿಳೆ–3
ದೂರವಾಣಿ ಸಂಪರ್ಕಿ:
9535584111
9448263927

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training.
www.imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಸುವರ್ಣ ಯಾತ್ರ
1) ನೇಪಾಳ ಪಶುಪತಿನಾಥ ಅಯೋಧ್ಯ ಮುಕ್ತಿನಾಥ ಮನೋಕಾಮನ ಕಠ್ಮಂಡು ಪೋಕ್ರ ಪ್ರವಾಸ 27–05–2024 – 9 ದಿನಗಳು
2) ಕಾಶಿ ಪ್ರವಾಸ 2 ಜ್ಯೋತಿರ್ಲಿಂಗದೊಂದಿಗೆ 24–05–2024 – 7 ದಿನಗಳು
3) 7 ದಿನಗಳು ಭೂತಾನ್ ಪ್ರವಾಸ 6–6–24
6360146483
8660233673

DTCP SITES FOR SALE
DTCP Sites
With RERA
Near Jayapura,
H.D. Kote Road, Mysore.
9590491194, 9606783264

ಇವಾ ಬ್ರೈಡಲ್ ಸ್ಟುಡಿಯೋ ಅಂಡ್ ಅಕಾಡೆಮಿ
ಕೇವಲ 10000/- ರೂ.ಗಳಿಗೆ 30 ದಿನದಲ್ಲಿ ಮೇಕಪ್ ಕೋರ್ಸ್‌ನ್ನು ಹೇಳಿಕೊಡಲಾಗುತ್ತದೆ. ಸೌಮ್ಯ, ಮೈಸೂರು
9731956246

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ.
SSLC/PUC-Pass / Fail - 5 Posts
ಸಂಪರ್ಕಿಸಿ:
ಶ್ರೀ ವಿನಾಯಕ ಟ್ರೇಡರ್ಸ್, ಹೆಬ್ಬಾಳ್, ಮೈಸೂರು
ಸ್ಥಳೀಯರಿಗೆ ಮೊದಲ ಆದ್ಯತೆ
9901212321, 8880883339

SITE FOR SALE
Near to INFOSYS, L&T and BEML 6 acre 18 Gunta Project
60 Feet Road Approach
MUDA APPROVED Layout
90% Work completed
Now Bookings Open
More Details call me
9916766389, 6363400519

DTCP Sites for Sale
Amruthaa Nagar, Off Jayapura, HD Kote Main Road
30x40, 30x50 & Odd sites
RERA No. PRM/KA/RERA/1268/378/PR/200219/003298
7829331999, 6364382399

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9108566022

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 – 86,000.
6364308851, 7892046990

ಬೇಕಾಗಿದೆ
ಜಮೀನು ಬೇಕಾಗಿದೆ
ಬೋಗಾದಿ ರಿಂಗ್ ರೋಡ್‌ನಿಂದ 5 ಕಿ.ಮೀ ವ್ಯಾಪ್ತಿಯ ಒಳಗೆ
98455 99788

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 7204494854

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದ ಟಿವಿಎಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸ್ಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು
ವಯೋಮಿತಿ : 45 ವರ್ಷದ ಒಳಗೆ
ESI & PF ಊಟ ತಿಂಡಿ ವಸತಿ ಸೌಲಭ್ಯವಿರುತ್ತದೆ
9620777819
9620667819

ವಿವಾಹ ಪರಿಚಯ
ಮದುವೆ ಆಗಿಲ್ಲವೆ ಚಿಂತೆ ಬೇಡ? ಯಾವುದೇ ಜಾತಿ ಆದರೂ ಸರಿ 1 ವಾರದಲ್ಲಿ ವಧುವರರನ್ನು ಹುಡುಕಿ ಕೊಡುತ್ತೇವೆ. ಲಿಂಗಾಯತ ಅಥವಾ ಗೌಡಾಸ್
8123252840

HOUSE SALE
Vijaynagar
3 BHK Duplex New House, 40x60, MUDA, N/F Door
Price - 3.15 Cr,
Near Sangam Circle, Vijaynagar 3rd Stage
8660105902

SITES for SALE
JP Nagar Ring Road
20 x 30 - 17 Lakhs,
30 x 40 - 33 Lakhs,
Near Gurur Bus Stop,
Ramabainagar, Mysore.
DTCP approved (Corporation limits)
1.5 Km from JP Nagar Ring Road
8660105902

SITE FOR SALE
40x60 / 30x40,
West/East Facing Site,
Behind Christ Public School, Dattagalli,
Price - 1.20 Cr / 62 Lakhs
8660105902

HOUSE FOR RENT
Semi furnished 2 BHK House / Flat with Lift facility at 5th Cross, Thyagaraja Road, (Near JSS Hospital)
Contact:
Whatsapp Call: 90666 61928
94480 52932
Brokers Excuse

ADMISSION OPEN
DISTANCE & ONLINE UG & PG UNIVERSITY COURSES-
BA, BCom, BSc, BCA, MA, MCom, MCA, MBA & many more
For Details Contact:
YUVA INFOTECH MYSORE
Call: 9986492001

ಮನೆ / ಮಳಿಗೆ ಬಾಡಿಗೆಗೆ
ಪೂರ್ವ ದಿಕ್ಕಿನಲ್ಲಿರುವ ರಾಮಕೃಷ್ಣ ನಗರ 'I' ಬ್ಲಾಕಿನಲ್ಲಿ ಕೆಳಹಂತಸ್ತು ಮತ್ತು 2ನೇ ಅಂತಸ್ತಿನಲ್ಲಿ ಎರಡೂ ರೂಂ ಗಳಿರುವ ಮನೆ ಇದೆ. 493 ಮನೆ ಸಂಖ್ಯೆಯಲ್ಲಿ ಒಂದು ಮಳಿಗೆ 8x8 ಬಾಡಿಗೆಗೆ ದೊರೆಯುತ್ತದೆ
8147704670

WANTED FOR SHOP
(E-STAMPING & XEROX)
WITH COMPUTER KNOWLEDGE
CALL US:
9481243139

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್ & ಸರ್ವೀಸ್
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ವಿವಾಹ ಭಾಗ್ಯ
MRJ ಮ್ಯಾಟ್ರಿಮೋನಿ
ಎಲ್ಲಾ ಜಾತಿಯ ವಧು / ವರರಿಗಾಗಿ ಸಂಪರ್ಕಿಸಿ:
1) ಮೊದಲನೆ ಮದುವೆ
2) ಎರಡನೆ ಮದುವೆ
3) ವಿಧವೆ / ವಿದುರರು
FREE REGISTRATION
8904890413

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡಿ ಪ್ರತಿ ತಿಂಗಳಿಗೆ ರೂ. 15,000 ಸಂಪಾದಿಸಿ.
Mob: 9731891409

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

WANTED MARKETING EXECUTIVES (MALE)
Vehicle and DL Mandatory
Send your resume to
enquiry@godsandgodesses.store.in
8088209960
8431340738
Watsapp Message Only
Email resume and details. No calls

FOR SALE
1. 30X50 SITES NEAR VARUNA LAKE
2. 30X50 KHB KENCHALGUDUKOTE ROAD
3. 30X40, 40X60 AT POLICE LAYOUT
4. 35X45, 40X70 HOUSE AT VIDYARANYA PURAM
5. 40X60 COMMERCIAL SITE NEAR MANGALYA CHOULTRY, DATTAGALLI, PRAKRUTHI PROPERTIES
9538690359, 9035990359

ಬೇಕಾಗಿದ್ದಾರೆ
ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಸಂಬಳ 18000/-
Ph.7406369369
ಶಿವರಾಂಪೇಟೆ, ಮೈಸೂರು

neem BOND PLATINUM

100% Neem Ply & Doors
10 YEARS WARRANTY
@ FACTORY DEPOT RATES
9731591267, 9901291267

2.5 BHK HOME INTERIORS @
Starting @ ₹2.5 Lacs*

Home Space Mart
TALK TO OUR DESIGN TEAM
9108923123

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ರತ್ನಮೂರ್ತಿ
ಮೊ.: 9741806990
ಶಾಪ, ದುಷ್ಟಶಕ್ತಿ, ಮಾಟ ಮಂತ್ರ, ಪ್ರೀತಿಯಲ್ಲಿ ಮೋಸ, ಗಂಡ ಹೆಂಡತಿ ಜಗಳ, ಮದುವೆ ವಿಳಂಬ, ಸಂತಾನ, ಆರೋಗ್ಯ, ವ್ಯಾಪಾರ, ಉದ್ಯೋಗ, ಕೋರ್ಟ್ ಕೇಸು, ಹಣಕಾಸು ತೊಂದರೆ ಇತ್ಯಾದಿ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ. ವಿಳಾಸ: ಮೈಸೂರು.

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಳಿಕಾ ದೇವಿ ಉಪಾಸಕರು, ಮಾಟ ಮಂತ್ರ, ಶತ್ರು ಬಾಧೆ, ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ವಿವಾಹ ವಿಳಂಬ ಇತ್ಯಾದಿ ಸಮಸ್ಯೆಗಳಿಗೆ 3 ದಿನಗಳಲ್ಲಿ ಶಾಶ್ವತ ಪರಿಹಾರ ಮಾಡಿಕೊಡಲಾಗುವುದು. ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಹತ್ತಿರ, ವಿದ್ಯಾರಣ್ಯ ನಗರ, ಮೈಸೂರು.

ಬೇಕಾಗಿದ್ದಾರೆ
Front Office Assistant
Night Shift Only
Only for Male
9901700044

ಮನೆ ಮಾರಾಟಕ್ಕಿದೆ
40x55
11/3 ಪಂಚಾಯತ್
2ನೇ ಮಹಡಿ,
ಮನೆ ನಂ. 197, 3ನೇ ಕ್ರಾಸ್, ಶ್ರೀರಾಂಪುರ ಕಿಂಗ್‌ಡಂ ರೆಸ್ಟೋರೆಂಟ್ ಎದುರು, ಮೈಸೂರು
9980981000

Change of Name
I, Gordhan Ram, residing at Village and Post: Kyamsar, PS, Maulasar, TEH Didwana District, Nagaur, State: Rajasthan-341551, India, changed my name as Gordhan Ram Bajiya on my own free will, in front of Notary C. Mangala on 30-4-2024.
Sd/- Gordhan Ram Bajiya

AFFIDAVIT
I, Meer Zawar Ali, residing at #3035, 11th Cross, Hyderali Block, Ghousiya Nagar, Udayagiri, Mysuru. That my name is wrongly mentioned as Zawar Ali in passport. In all documents my name is mentioned as correct name as Meer Zawar Ali. That Meer Zawar Ali and Zawar Ali are one and the same person which refers to me only. I declare this in front of Notary Rajendrakumar K.M. on 8-5-24.
Sd/- Meer Zawar Ali

Efficient Tutor needed for 3rd Grade
NPS Student (CBSE), Address: #5, 1st Floor, 'B' Block, 80 Feet Road, 3rd Stage, Vijayanagar, Mysore-570 017. Contact:
Mob: 9880899888

Site for Sale
40x60 - S/F site is for sale at "C" Block, Srinagar, Mysore.
Mob: 9448342593

WANTED
SLN AGRI TECH, MYSORE (Authorised dealer for VST Tiller Tractor Ltd.). Sales Executive - 10 Nos. For Chamarajanagar, Hunsur, Nanjangud. Qualification: SSLC / PUC. Walk in interview 10-5-2024 at 10 am to 4 pm
9844039455, 7760345133

HOUSE FOR RENT
1 BHK 2nd FLOOR
VIJAYANGAR 2nd STAGE, SNAKE SHYAM ROAD MYSORE
9448640366
9980732797

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ 14000 ಮತ್ತು ಸೂಪರ್ ವೈಸರ್ 16000
ESI & PF
ಹೌಸ್ ಕೀಪಿಂಗ್ ಮಹಿಳೆಯರು ಪುರುಷರು ಬೇಕಾಗಿದ್ದಾರೆ.
9035367083

ಬೇಕಾಗಿದ್ದಾರೆ
ಮೈಸೂರಿನ ಇನ್ಫೋಸಿಸ್‌ಗೆ ಪುರುಷರು ಅಭ್ಯರ್ಥಿಗಳು
ಸೆಕ್ಯೂರಿಟಿ ಗಾರ್ಡ್ಸ್
ಆಕರ್ಷಕ ಸಂಬಳ : 21,000/–
ವಿದ್ಯಾರ್ಹತೆ: 10ನೇ ತರಗತಿ & ಪಿಯುಸಿ ತೇರ್ಗಡೆ
ವಯಸ್ಸು : 22 ರಿಂದ 40 ವರ್ಷ
78296 48007

LED, LCD, TV
ರಿಪೇರಿ ಸರ್ವಿಸ್ ಮಾಡಿಕೊಡಲಾಗುತ್ತದೆ
9110295573

WANTED
SALES GIRLS & TELECALLER
SALARY : 15000 TO 20,000 + INCENTIVE
IRVIN ROAD & SHARADADEVI NAGAR, MYSURU
8050744784

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು ಕೂಡಲೇ ಬೇಕಾಗಿದ್ದಾರೆ ಮೈಸೂರಿನ ಹೆಬ್ಬಾಳ್, ಬೆಳಗೊಳ, ಬೋಗಾದಿ, ಎಸ್.ಆರ್. ಮೊಹಲ್ಲಾ, (ಹಗಲು ಮತ್ತು ರಾತ್ರಿ ಪಾಳಿಗೆ) ಗೋಕುಲಂ, ಸಾತಗಳ್ಳಿ, ಶ್ರೀರಾಂಪುರ, ಗುಂಡ್ಲುಪೇಟೆ, ವಿವಿಧಡೆಯಲ್ಲಿ ಕೆಲಸ ಮಾಡಲು ವಿದ್ಯಾಭ್ಯಾಸವುಳ್ಳ ಆರೋಗ್ಯವಂತ ಯುವಕರು ಬೇಕಾಗಿದ್ದಾರೆ. ಆಸಕ್ತಿಯುಳ್ಳವರು ಕೂಡಲೇ ಮೊಬೈಲ್ ದೂರವಾಣಿಯ ಮೂಲಕ ಸಂಪರ್ಕಿಸಿ.
9483615539

REQUIRED
Marketing Executive - 4 Any Degree (Freshers also welcome) Male & Female
Walk in interview - 9th May & 10th May 2024
Time : 10 am to 6 pm STAR BAJAJ Authorised Main Dealer for Bajaj for Auto Ltd.)
opp Axis Bank V V Mohalla Mysore-02
Contact : 9743647484
Ganesha Temple Road, Maruthi Circle NR Mohalla-570007
8660381094

ಮನೆ ಮಾರಾಟಕ್ಕಿದೆ
ಶ್ರೀರಾಂಪುರ ರಿಂಗ್ ರಸ್ತೆ (ಯುನಿವರ್ಸಿಟಿ ಲೇಔಟ್ ಎದುರು) ಶಂಕರನಗರ ಗಾಯತ್ರಿ ಬಡಾವಣೆಯಲ್ಲಿ ಕಾರ್ನರ್ ಮನೆ 40x68 ಅಳತೆ G+2 ಹೊಸ ಮನೆ ಮಾರಾಟಕ್ಕಿದೆ.
9108946647
9448092818

WANTED
Beautician Wanted
at Naidunagar Parlour
9380705968

ಬೇಕಾಗಿದ್ದಾರೆ
ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಪುರುಷರು ಮಹಿಳೆಯರು ಬೇಕಾಗಿದ್ದಾರೆ. ಬೆಳಗ್ಗೆ ಅಥವಾ ರಾತ್ರಿ ಅಥವಾ 24 ಗಂಟೆ ಸೇವೆ ಮಾಡುವವರು ಹಾಗೂ ಬೆಂಗಳೂರಿಗೆ ಮನೆ ಕೆಲಸ ಅಡುಗೆ ಕೆಲಸ ಮಾಡುವವರು ಸಂಪರ್ಕಿಸಿ: ಸಂಬಳ 12000 ರಿಂದ 25000
8123252840

ನರ್ಸಿಂಗ್ ಹೋಂನಲ್ಲಿ ಉದ್ಯೋಗಾವಕಾಶ
ಮೈಸೂರಿನ ಹೆಸರಾಂತ ನರ್ಸಿಂಗ್ ಹೋಂನಲ್ಲಿ ಕಾರ್ಯ ನಿರ್ವಹಿಸಲು ಯುವಕ ಯುವತಿ ಮತ್ತು ಮಹಿಳೆಯರು ಬೇಕಾಗಿದ್ದಾರೆ:
Nursing Staff: ANM, GNM, B.Sc
Nursing (Full Time / Part Time)
House Keeping : 7th, SSLC, PUC
9606714441, 7349278504
0821-4242351

ಬೇಕಾಗಿದ್ದಾರೆ
ಪ್ರತಿಷ್ಠಿತ Finance ಕಂಪನಿಯಾದ Finbud Financial Service Pvt Ltd ಗೆ branch Manager, Sales Manager ಹಾಗೂ Telecaller ಬೇಕಾಗಿದ್ದಾರೆ. ಆಕರ್ಷಕ ಸಂಬಳದ ಜೊತೆ + Incentive ಇರುತ್ತದೆ. ಆಸಕ್ತಿ ಉಳ್ಳವರು ಈ ಕೆಳಗಿನ ಸಂಖ್ಯೆಗೆ ಸಂಪರ್ಕಿಸಿ.
8050923846
7829004182

"ಸಿದ್ಧ ಸಮಾಧಿ ಯೋಗ" ಶಿಬಿರ
ಧ್ಯಾನ, ಪ್ರಾಣಾಯಾಮ, ಆಹಾರ ಕ್ರಮ, ವ್ಯಕ್ತಿತ್ವವಿಕಾಸ ಪರಿಚಯ ಕಾರ್ಯಕ್ರಮ ದಿ 12–05–2024 ಭಾನುವಾರ ಸಂಜೆ 6.00ಕ್ಕೆ ಶಿಬಿರ ಪ್ರಾರಂಭ ದಿನಾಂಕ: 13–05–24 ಸಂಜೆ 6.00ಕ್ಕೆ ಸ್ಥಳ: ಋಷಿ ಸಂಸ್ಕೃತಿ ವಿದ್ಯಾಕೇಂದ್ರ ಆದಿ ಚುಂಚನಗಿರಿ ರಸ್ತೆ, ಕುವೆಂಪುನಗರ, ಮೈಸೂರು.
9448458050
8618762110

ಪ್ರಮಾಣ ಪತ್ರ
ಶಶಿಕಲಾ ಅಲಿಯಾಸ್ ರಾಜೇಶ್ ಶರ್ಮ ಸಿ ಆದ ನಾನು ನಂ.1849, 7ನೇ ಕ್ರಾಸ್, ಅಶೋಕಪುರಂ, ಮೈಸೂರು–570008, ಇಲ್ಲಿ ವಾಸವಿದ್ದು, ನನ್ನ ಹೆಸರು ಆಧಾರ್ ಕಾರ್ಡ್ (ನಂ.306451834968) ರೆಕಾರ್ಡ್‌ನಲ್ಲಿ ರಾಜೇಶ್ ಶರ್ಮ ಸಿ ಎಂದು ನಮೂದಾಗಿದೆ. ಆದರೆ ಮೈಸೂರಿನ ಪಿಎಫ್ ಆಫೀಸ್ ರೆಕಾರ್ಡ್‌ನಲ್ಲಿ ಶಶಿಕಲಾ ಎಂದು ನಮೂದಾಗಿದೆ. ಈ ಎರಡೂ ಹೆಸರು ನನಗೇ ಸೇರಿದ್ದು ಎಂದು ನೋಟರಿ ಎಸ್.ವಿ.ನಾಗೇಂದ್ರ ಅವರ ಸಮ್ಮುಖದಲ್ಲಿ ಪ್ರಮಾಣೀಕರಿಸುತ್ತೇನೆ.
ಸಹಿ/– ರಾಜೇಶ್ ಶರ್ಮ ಸಿ

ಮನೆ ಮಾರಾಟಕ್ಕಿದೆ
15x30 ಅಳತೆಯ ಮನೆ ಕುವೆಂಪುನಗರದ 'M' ಬ್ಲಾಕ್‌ನಲ್ಲಿ ಮಾರಾಟಕ್ಕಿದೆ.
9845124678

ಬೇಕಾಗಿದ್ದಾರೆ
ಕೈಗಾರಿಕಾ ಪ್ರದೇಶ ಯಾದವಗಿರಿ, ಮೈಸೂರು
ಮಹಿಳೆಯರು : 12000
ಹುಡುಗರು : 16000
ಕೆಲಸದ ಸಮಯ: 9 ರಿಂದ 6.30
9448664411

ಸೇಲ್ ಮುಡಾ ಖಾತಾ ಸೈಟ್
ಈಸ್ಟ್ ಫೇಸಿಂಗ್ ಕಾರ್ನರ್ ಸೈಟ್, 8.7 ಮೀ X 12ಮೀ ದಡದಹಳ್ಳಿ, ಜ್ಞಾನ ಭಾರತಿ ಲೇಔಟ್ ಏರ್‌ಪೋರ್ಟ್ ಹಿಂಭಾಗದ ರಾಜ್ಯ ಹೆದ್ದಾರಿ.
ಬೆಲೆ: 35 ಲಕ್ಷ
9342123373

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್, ಸೆಕ್ಯೂರಿಟಿ ಸೂಪರ್‌ವೈಸರ್‌ಗಳು, ಮೈಸೂರಿನ ಎಲ್ಲಾ ಪ್ರದೇಶಗಳಿಗೂ ಬೇಕಾಗಿದ್ದಾರೆ. ಮಾರ್ಕೆಟಿಂಗ್ ಮ್ಯಾನೇಜರ್‌ಗಳು, ಬೇಕಾಗಿದ್ದಾರೆ. ESI+PF ಹಾಗೂ ಊಟ-ವಸತಿ ಸೌಲಭ್ಯ ಇರುತ್ತದೆ. ಮೊದಲು ಬಂದವರಿಗೆ ಆದ್ಯತೆ
9632049421
7259624713

ಹಳೆ ಮನೆ ಮಾರಾಟಕ್ಕಿದೆ
18x40 ಅಳತೆಯ ಸೈಟ್‌ನಲ್ಲಿ ಕುವೆಂಪುನಗರದ 'M' ಬ್ಲಾಕ್‌ನಲ್ಲಿ ಹಳೆ ಮನೆ ಮಾರಾಟಕ್ಕಿದೆ.
9880044298

45 ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಿಕೊಳ್ಳುವುದು. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಕೇಸ್: ಸರ್ಕಾರದ ನಡೆ ಸಮರ್ಥಿಸಿಕೊಂಡ ಒಕ್ಕಲಿಗ ಸಚಿವರು

● ಇದು ಪ್ರಪಂಚದ ದೊಡ್ಡ ಲೈಂಗಿಕ ಹಗರಣ ● ಪ್ರಜ್ವಲ್ ರೇವಣ್ಣ ಪೊಲೀಸ್ ಮುಂದೆ ಶರಣಾಗಬೇಕು ● ಅಪರಾಧ ಮುಚ್ಚಿಡಲು ಯತ್ನಿಸುವುದು ದೊಡ್ಡ ಅಪರಾಧ

ಬೆಂಗಳೂರು, ಮೇ 8– ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ ಜೆಡಿಎಸ್, ಬಿಜೆಪಿ ಆರೋಪಕ್ಕೆ ಒಕ್ಕಲಿಗ ಸಮುದಾಯದ ಸಚಿವರು ತಿರುಗೇಟು ನೀಡಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ಮಧ್ಯಾಹ್ನ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಸಚಿವರಾದ ಎನ್.ಚೆಲುವರಾಯಸ್ವಾಮಿ, ಕೃಷ್ಣಬೈರೇಗೌಡ, ರಾಮಲಿಂಗಾ ರೆಡ್ಡಿ, ಡಾ. ಎಂ.ಸಿ.ಸುಧಾಕರ್ ಹಾಗೂ ಒಕ್ಕಲಿಗ ಸಮುದಾಯದ ಶಾಸಕರು ಭಾಗಿಯಾಗಿದ್ದರು.

ವಿರೋಧ ಸರಿಯಲ್ಲ: ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಎನ್. ಚೆಲುವರಾಯಸ್ವಾಮಿ, ಇಂತಹ ಆರೋಪ ಬಂದಾಗ ತನಿಖೆ ನಡೆಸುವುದು ಸರ್ಕಾರದ ಜವಾಬ್ದಾರಿ. ಹೊರಗಡೆ ಇದ್ದು ತನಿಖೆ ಹೀಗೆ ಮಾಡಬೇಕು ಎಂದು ಸರ್ಕಾರಕ್ಕೆ ನಿರ್ದೇಶನ ನೀಡುವುದು ಸರಿಯಲ್ಲ. ನಮ್ಮ ತನಿಖಾ ತಂಡದಲ್ಲಿ ಇರುವವರು ಸಮರ್ಥರಿದ್ದಾರೆ ಎಂದು ಈ ಹಿಂದೆ ಬಿಜೆಪಿ, ಜೆಡಿಎಸ್‌ನವರು ಹೇಳುತ್ತಿದ್ದರು. ಆದರೆ ಈಗ ಎಸ್‌ಐಟಿ ಬಗ್ಗೆ ಪ್ರಾರಂಭದಲ್ಲೇ ವಿರೋಧ ಮಾಡುವುದು ಎಷ್ಟರ ಮಟ್ಟಿಗೆ ಸರಿ? ಎಂದು ಪ್ರಶ್ನಿಸಿದರು.

ಈ ಘಟನೆಯಿಂದ ಎಷ್ಟೊಂದು ಸಂಸಾರಗಳು ಕೆಟ್ಟ ಪರಿಸ್ಥಿತಿ ಎದುರಿಸುತ್ತಿವೆ. ವಿಡಿಯೋವನ್ನು ಅವರೇ ಮಾಡಿಕೊಂಡಿದ್ದು, ಅದು ಹೊರಬಂದಿದೆ. ಗಾಳಿಗೆ ಹಾರಿ ಹೋದ ಮೇಲೆ ಅದು ಯಾವ ದಿಕ್ಕಿಗೆ ಹೋಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ತನಿಖೆ ಆಗಲಿ, ತನಿಖೆಗೆ ಎಲ್ಲ ಪಕ್ಷದವರು ಸಹಕಾರ ಕೊಡಬೇಕು. ತನಿಖೆ ಆಗುವಾಗ ಇಷ್ಟರ ಮಟ್ಟಿಗೆ ಬೀದಿಯಲ್ಲಿ ಚರ್ಚೆ ಮಾಡುವುದು ಸರಿಯಲ್ಲ ಎಂದರು.

ಏನು ಸಾಧನೆ ಮಾಡಿದ್ದಾರೆ ಎಂದು ಪ್ರತಿಭಟನೆ ಮಾಡಲು ಕರೆ ಕೊಡುತ್ತಾರೆ. ನಡೆದ ಘಟನೆಯನ್ನು ಸೆರೆ ಹಿಡಿದಿದ್ದು ಯಾರು? ಅದನ್ನು ಯಾರಿಗೆ ವರ್ಗಾವಣೆ ಮಾಡಿದ್ದರು? ಕೆಪಿಸಿಸಿ ಅಧ್ಯಕ್ಷರಿಗೂ ಇದಕ್ಕೂ ಸಂಬಂಧವೇ ಇಲ್ಲ. ಡಿಕೆ ಶಿವಕುಮಾರ್ ವಿರುದ್ಧ ಜೆಡಿಎಸ್ ನಾಯಕರು ಸಾಕಷ್ಟು ಬಾರಿ ಹರಿಹಾಯ್ದಿದ್ದರು. ಅವರ ಹೇಳಿಕೆಗೆ ಶಿವಕುಮಾರ್ ಈಗಾಗಲೇ ತಿರುಗೇಟು ನೀಡಿದ್ದಾರೆ ಎಂದು ಹೇಳಿದರು.



ದೇವರಾಜೇಗೌಡ ಬಿಜೆಪಿಯವರೇ. ಕಾಂಗ್ರೆಸ್ ನಾಯಕರ ಜೊತೆಗಿನ ಫೋಟೋ ಹಿಡಿದುಕೊಂಡು ಅವರನ್ನು ಹೊಣೆ ಮಾಡುವುದು ಸರಿಯಲ್ಲ ಎಂದು ಚೆಲುವರಾಯಸ್ವಾಮಿ ಆಕ್ಷೇಪ ವ್ಯಕ್ತಪಡಿಸಿದರು. ಪ್ರಕರಣವನ್ನು ಡೈವರ್ಟ್ ಮಾಡುವ ಉದ್ದೇಶದಿಂದ ವಿಡಿಯೋ ಬಿಡುಗಡೆ ಬಗ್ಗೆ ಮಾತನಾಡ್ತಾರೆ. ಅಶೋಕ್ ಒಂದು ಕಡೆ ಕ್ರಮ ಆಗಲೇಬೇಕು ಎನ್ನುತ್ತಾರೆ. ಇದಕ್ಕೆ ನಾವು ಬೆಂಬಲ ಕೊಡಲ್ಲ ಎಂದು ಪ್ರಧಾನಿ ಹೇಳುತ್ತಾರೆ. ಅಮಿತ್ ಶಾ ಕೂಡಾ ಈ ಪ್ರಕರಣ ತನಿಖೆ ಮಾಡಿ ಎಂದು ಹೇಳುತ್ತಾರೆ. ಆದರೆ ಜೆಡಿಎಸ್‌ನವರು ಮಾತ್ರ ಡಿಕೆ ಶಿವಕುಮಾರ್ ಅವರನ್ನು ಸಂಪುಟದಿಂದ ವಜಾ ಮಾಡಲು ಆಗ್ರಹಿಸುತ್ತಾರೆ ಎಂದು ಕಿಡಿಕಾರಿದರು.

ತೊಡೆ ತಟ್ಟುವುದು ಬಿಡಿ: ಎಚ್‌ಡಿ ಕುಮಾರಸ್ವಾಮಿ ತೊಡೆ ತಟ್ಟುವುದನ್ನು ಬಿಡಬೇಕು. ಕಾಂಗ್ರೆಸ್ ನಾಯಕರ ವಿರುದ್ಧ ಏಕವಚನದಲ್ಲಿ ಮಾತನಾಡುವುದನ್ನು ಕೂಡ ಬಿಡಬೇಕು. ಡಿ.ಕೆ ಶಿವಕುಮಾರ್, ಸಿದ್ದರಾಮಯ್ಯ ವಿರುದ್ಧ ಲಘು ವಾಗಿ ಮಾತ ನಾ ಡುವುದನ್ನು ನಿಲ್ಲಿಸ ಬೇಕು. ತನಿಖೆ ಆಗಲಿ ಸತ್ಯ ಹೊರ ಬರುತ್ತದೆ. ಎಂದು ಇದೇ ಸಂದರ್ಭದಲ್ಲಿ ಚೆಲುವರಾಯ ಸ್ವಾಮಿ ಆಗ್ರಹಿಸಿದರು.

ಅವರಿಂದಲೇ ಪ್ರಕರಣ ಬಯಲಾಗಿದೆ: ರಾಮಲಿಂಗಾರೆಡ್ಡಿ ಮಾತನಾಡಿ, ಅವರ ನಡುವಿನ ಜಗಳದಿಂದ ಈ ಪ್ರಕರಣ ಹೊರ ಬಂದಿದೆ. ಯಾರು ತಪ್ಪು ಮಾಡಿ ದ್ದಾರೆ ಎಂಬುದು ತನಿಖೆಯಿಂದ ಹೊರ ಬರಲಿದೆ. ಪ್ರಜ್ವಲ್ ರೇವಣ್ಣ ಪೊಲೀಸರ ಮುಂದೆ ಶರಣಾಗಬೇಕು ಎಂದು ಹೇಳಿದರು. ಈ ಪ್ರಕರಣಕ್ಕೂ ಒಕ್ಕಲಿಗ ಸಮುದಾಯಕ್ಕೂ ಏನು ಸಂಬಂಧ? ದೇವರಾಜೇಗೌಡ ಬಿಜೆಪಿ ಮುಖಂಡರಾಗಿದ್ದಾರೆ. ಆದರೆ ಅನವಶ್ಯಕವಾಗಿ ಡಿಕೆ ಶಿವಕುಮಾರ್ ಹಾಗೂ ಸಿಎಂ ಸಿದ್ದರಾಮಯ್ಯ ಹೆಸರು ತರುವುದು ಸೂಕ್ತ ಅಲ್ಲ. ಕಾಂಗ್ರೆಸ್ ವಿರುದ್ಧ ಯಾಕಾಗಿ ಪ್ರತಿಭಟನೆ ಮಾಡಲಾಗ್ತಿದೆ ಎಂದು ಅವರು ಪ್ರಶ್ನಿಸಿದರು.

ಇದು ಪ್ರಪಂಚದ ದೊಡ್ಡ ಲೈಂಗಿಕ ಹಗರಣ: ಕಂದಾಯ ಸಚಿವ ಕೃಷ್ಣಭೈರೇಗೌಡ ಮಾತನಾಡಿ, ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ ವಕೀಲ ದೇವರಾಜೇಗೌಡ ಅವರು ಎಚ್.ಡಿ.ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ಏನು ಚರ್ಚೆ ಮಾಡಿದ್ದಾರೆ? ಎಂಬ ಬಗ್ಗೆ ಹಾಸನಾಂಬೆ ಮುಂದೆ ಬಂದು ಪ್ರಮಾಣ ಮಾಡಲಿ ಎಂದು ಸವಾಲು ಹಾಕಿದರು. ಇದು ಪ್ರಪಂಚದ ಅತ್ಯಂತ ದೊಡ್ಡ ಲೈಂಗಿಕ ಪ್ರಕರಣವಾಗಿದೆ. ವ್ಯವಸ್ಥಿತವಾಗಿ ಒಂದು ಜಿಲ್ಲೆಯಲ್ಲಿ ಮನೆಗೆ ನುಗ್ಗಿ ಮಹಿಳೆಯರ ಮಾನಹರಣ, ಶೀಲಹರಣ, ಮಾಂಗಲ್ಯ ದೋಚಲಾಗಿದೆ ಎಂದು ವಾಗ್ದಾಳಿ ನಡೆಸಿದರು. ಮಹಿಳೆಯರ ಮಾನಹರಣ ಮಾಡಿದವರಿಗೆ ಶಿಕ್ಷೆ ಆಗಬೇಕು. ಮಾನಹರಣ ಮಾಡಿದ್ದು ಅಪರಾಧ ಅಲ್ಲ. ಬದಲಾಗಿ ಇದರ ಬಗ್ಗೆ ಮಾತನಾಡಿದ್ದು ಅಪರಾಧವಾಗಿದೆ. ಇದರ ಬಗ್ಗೆ ಚರ್ಚೆ ಆಗುತ್ತಿದೆ. ಮೂಲ ಪ್ರಕರಣ ಕಣ್ಮರೆ ಆಗ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಅಪರಾಧ ಮುಚ್ಚಿಸುವುದೂ ಅಪರಾಧವೇ: ಹಾಸನ ಪೆನ್‌ಡ್ರೈವ್ ಪ್ರಕರಣವನ್ನು ಮುಚ್ಚಿ ಹಾಕುವ ವ್ಯವಸ್ಥಿತ ಪ್ರಯತ್ನ ನಡೆಯುತ್ತಿದೆ. ಲೈಂಗಿಕ ದೌರ್ಜನ್ಯ ಎಸಗಿದವರನ್ನು ಬಚಾವು ಮಾಡುವ ಪ್ರಯತ್ನ ಆಗ್ತಿದೆ. ಇದು ಸರ್ಜಿಕಲ್ ಸ್ಟ್ರೈಕ್ ಮಾದರಿಯಲ್ಲಿ ವ್ಯವಸ್ಥಿತ ಸಂಚು ಆಗ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ದೇವರಾಜೇಗೌಡರು ಪೆನ್‌ಡ್ರೈವ್ ತಮ್ಮ ಬಳಿ ಬಂದಾಗ ಡಿಜಿಪಿಗೆ ಏಕೆ ಕೊಟ್ಟಿಲ್ಲ? ಆಗ ಮಾನಹರಣ ಆಗ್ತಿರಲಿಲ್ಲವಲ್ಲಾ? ಅಥವಾ ಹೈಕೋರ್ಟ್ ಜಡ್ಜ್‌ಗೆ ಕೊಡಬಹುದಿತ್ತಲ್ವಾ? ಕ್ರೈಮ್ ಮುಚ್ಚಿಡುವುದು ಅಪರಾಧ ಅಲ್ಲವೇ? ಎಂದು ಪ್ರಶ್ನಿಸಿದರು.

ಮಹಿಳೆಯರ ಮಾನಹರಣ ಆಗಿದ್ದೇ ಇವರಿಂದ. ಬಿಜೆಪಿಗರು ಇವರನ್ನು ಮುಗಿಸಲು ಏನೆಲ್ಲಾ ಬೇಕು ಅಷ್ಟು ಮಾಡಿದ್ದಾರೆ. ಜೋಶಿ, ಮೋದಿ ಹೇಳಿಕೆ ಹಾಗೆ ಇದೆ. ಆದರೆ ಕಾಂಗ್ರೆಸ್ ವಿರುದ್ಧ ಆರೋಪ ಮಾಡ್ತಿದ್ದಾರೆ. ಅತ್ಯಾಚಾರ ಮಾಡಿ ಎಂದು ನಾವು ಹೇಳಿದ್ದೇವಾ? ಮಹಿಳೆಯನ್ನು ಕಿಡ್ನಾಪ್ ಮಾಡಲು ನಾವು ಹೇಳಿದ್ದೇವಾ? ಮೂಲ ಪ್ರಕರಣ ಮುಚ್ಚಿ ಹಾಕಲು ಪ್ರಯತ್ನ ನಡೆಯುತ್ತಿದೆ. ಇವರು ಸಂವಿಧಾನಕ್ಕೂ ಮಿಗಿಲಾ? ಎಂದು ಪ್ರಶ್ನಿಸಿದರು.ಪ್ರಜ್ವಲ್‌ನನ್ನು ಏಕೆ ಸರೆಂಡರ್ ಮಾಡಿಸುತ್ತಿಲ್ಲ. ತಪ್ಪು ಮಾಡಿದವರಿಗೆ ಶಿಕ್ಷೆ ಆದರೆ ಸಂತ್ರಸ್ತರಿಗೆ ನ್ಯಾಯ ಸಿಗಲು ಸಾಧ್ಯ. ತಲೆ ಎತ್ತಿ ಓಡಾಡಲಾಗದೆ ಹಲವರು ಊರು ಬಿಟ್ಟಿದ್ದಾರೆ ಎಂದು ವಿವರಿಸಿದರು.

ಪ್ರಜ್ವಲ್ ಮಾಜಿ ಕಾರು ಚಾಲಕ ಬೆಂಗಳೂರಲ್ಲೇ ಇದ್ದಾನೆ...!

ಬೆಂಗಳೂರು, ಮೇ 8– ಪ್ರಜ್ವಲ್ ಮಾಜಿ ಕಾರು ಚಾಲಕ ಕಾರ್ತಿಕ್ ಬೆಂಗಳೂರಿನಲ್ಲೇ ಇದ್ದಾನೆ. ಆತನನ್ನು ಡಿ.ಕೆ.ಶಿವಕುಮಾರ್ ರಕ್ಷಣೆ ಮಾಡುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿಯವರು ಹೊಸ ಬಾಂಬ್ ಸಿಡಿಸಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಅವರು, 'ನಿಮ್ಮ ತನಿಖೆ ರೇವಣ್ಣ ಹಾಗೂ ಪ್ರಜ್ವಲ್ ಮೇಲೆ ಮಾತ್ರ ಯಾಕೆ ಟಾರ್ಗೆಟ್ ಆಗಿದೆ. ವಿಡಿಯೋ ಬಿಡುಗಡೆ ಮಾಡಿದವರನ್ನು ಯಾಕೆ ತನಿಖೆ ಮಾಡುತ್ತಿಲ್ಲ' ಎಂದು ಗೃಹ ಸಚಿವರಿಗೆ ಪ್ರಶ್ನಿಸಿದ್ದಾರೆ.



ಎಸ್‌ಐಟಿ ರಚನೆ ಆಗಿದೆ. ಮಹಿಳಾ ಆಯೋಗ ಕೂಡ ಪತ್ರ ಬರೆದಿದೆ ವಿಡಿಯೋ ಲೀಕ್ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಿ. ಆದರೆ, ಇದುವರೆಗೂ ನವೀನ್, ಕಾರ್ತಿಕ್, ಶ್ರೇಯಸ್‌ಗೆ ನೋಟಿಸ್ ಕೊಟ್ಟಿಲ್ಲ, ರೇವಣ್ಣಗೆ ಮಾತ್ರ ನೋಟಿಸ್ ಕೊಟ್ಟಿದ್ದಾರೆ. ಬೆಂಗಳೂರಿನ ಗಿರಿನಗರದಲ್ಲೇ ಪ್ರಜ್ವಲ್ ಮಾಜಿ ಡ್ರೈವರ್ ಕಾರ್ತಿಕ್ ಇದ್ದಾನೆ. ಕಾರ್ತಿಕ್‌ನನ್ನು ಖಾಸಗಿ ಚಾನೆಲ್‌ನಲ್ಲಿ ಕುಳಿತು ಟ್ರೈನ್ ಅಪ್ ಮಾಡುತ್ತಿದ್ದಾರೆ. ಇಷ್ಟೆಲ್ಲ ನಡೆಯುತ್ತಿದ್ದರೂ ಮಿಸ್ಟರ್ ಪರಮೇಶ್ವರ ಏನ್ ಮಾಡ್ತಾ ಇದ್ದಾರೆ 14 ವರ್ಷದಿಂದ ಕಾರ್ತಿಕ್ ಕೆಲಸದಲ್ಲಿ ಇದ್ದವನು, ಪ್ರಜ್ವಲ್ ನಡವಳಿಕೆ ಗೊತ್ತಿದ್ದರೆ ಕೆಲಸ ಬಿಡಬೇಕಿತ್ತು. ಇದೀಗ ಬಂಡೆ ರಕ್ಷಣೆ ಮಾಡುತ್ತೆ ಎಂದು ಕಾಯ್ತಾ ಇದ್ದಾನೆ.

ಡಿಕೆ ಸಂಸ್ಕೃತಿ ಎಲ್ಲರಿಗೂ ಗೊತ್ತಾಗಿದೆ. ಡಿ.ಕೆ. ನೀನು ದೇವರಾಜೇಗೌಡ ಜೊತೆ ಯಾಕಪ್ಪ ಮಾತಾನಾಡಿದೆ? 5 ಜನ ಇಟ್ಟುಕೊಂಡಿದ್ದೀನಿ ಎಂದು ಹೇಳಿ ದ್ದೀಯಾ. ನಿನಗೇನಿತ್ತು ಕೆಲಸ ಡಿಕೆ?. ಪರಮೇಶ್ವರ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಮಾನಮರ್ಯಾದೆ ಇದೆಯಾ, ಎಸ್‌ಐಟಿ ಅಧಿಕಾರಿಗಳಿಗೆ ಕ್ರೆಡಿಬಲಿಟಿ ಇದ್ಯಾ ಎಂದು ಕಿಡಿಕಾರಿದರು. ಇನ್ನು ಪ್ರಜ್ವಲ್‌ನದು 2900 ಪ್ರಕರಣ ಅಂದಿದ್ದಾರೆ. ಇದೂವರೆಗೂ ಯಾವುದೇ ಕೇಸ್ ಆಗಿಲ್ಲ, ಸಂತ್ರಸ್ತೆಯನ್ನು ತೋಟದ ಮನೆಯಲ್ಲೇ ಹಿಡಿದ್ರಾ, ಸಂತ್ರಸ್ತೆ ಸಿಕ್ಕಿದ್ದು ಅವರ ಸಂಬಂಧಿಕರ ಮನೆಯಲ್ಲಿ, ಆಕೆಯನ್ನು ಪವಿತ್ರ ಅವರ ಮನೆಯಿಂದ ಕರೆದುಕೊಂಡು ಬಂದಿದ್ದು, 12 ಜನರನ್ನು ಕುಮಾರಕೃಪದಲ್ಲಿ ಇಟ್ಟಿದ್ದಾರೆ.

ನಾನು ರೇವಣ್ಣ ವಿಚಾರದಲ್ಲಿ ಮಾತ್ರ ಹೋರಾಟ ಮಾಡ್ತೀನಿ. ಪ್ರಜ್ವಲ್ ರೇವಣ್ಣ ಬಗ್ಗೆ ಅಲ್ಲ, ಪ್ರಜ್ವಲ್ ರೇವಣ್ಣ ಯಾವಾಗ ಬರ್ತಾರೆ ಅಂತ ಗೊತ್ತಿಲ್ಲ. ನೀವು (ಮಾಧ್ಯಮದವರು) ತೋರಿಸಿದ್ದಷ್ಟೇ ನಮಗೆ ಗೊತ್ತು. ಅದನ್ನು ಹೊರತುಪಡಿಸಿ ಬೇರೆ ಏನು ಗೊತ್ತಿಲ್ಲ. 15ನೇ ತಾರೀಖು ಬರ್ತಾನೆ ಅಂತ ಹೇಳಿದ್ದಾರೆ ಬರ್ತಾನಾ ನೋಡೋಣ. ನಾಳೆ ಅದರ ಬಗ್ಗೆ ಉತ್ತರ ಕೊಡ್ತೀನಿ. ರೇವಣ್ಣ ಅವರ ಪರವಾಗಿ ಶಾಸಕಾಂಗ ಪಕ್ಷದ ನಾಯಕನಾಗಿ ಹೋರಾಟ ಮಾಡ್ತೀನಿ. ಆದರೆ, ಸಂಬಂಧಿಯಾಗಿ ಅಲ್ಲ ಎಂದು ಖಡಕ್ ಆಗಿ ಹೇಳಿದರು.

ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಕೇಸ್ ಹಿಂದೆ 'ಬ್ಲಾಕ್‌ಮೇಲ್ ಕಿಂಗ್' ಹೆಚ್‌ಡಿಕೆ ಕೈವಾಡ

ಡಿಸಿಎಂ ಡಿ.ಕೆ.ಶಿವಕುಮಾರ್ ಆರೋಪ

ಚಿಕ್ಕಮಗಳೂರು, ಮೇ 8– ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯದ ಪೆನ್ ಡ್ರೈವ್ ಲೀಕ್ ಹಿಂದೆ 'ಬ್ಲಾಕ್‌ಮೇಲ್ ಕಿಂಗ್' ಎಚ್.ಡಿ.ಕುಮಾರಸ್ವಾಮಿ ಕೈವಾಡವಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್, ಬುಧವಾರ ಆರೋಪಿಸಿದ್ದಾರೆ.

ಚಿಕ್ಕಮಗಳೂರಿನ ಹೆಲಿಪ್ಯಾಡ್‌ನಲ್ಲಿ ಮಾತನಾಡಿದ ಅವರು, ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ಪ್ರಕರಣದಲ್ಲಿ ತಮ್ಮ ಕೈವಾಡ ಇದೆ ಎಂದು ಆರೋಪಿಸಿದ್ದ ಕುಮಾರಸ್ವಾಮಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಕುಮಾರಸ್ವಾಮಿ ಅವರಿಗೆ ಪೆನ್‌ಡ್ರೈವ್‌ನ ಸಂಪೂರ್ಣ ವಿಚಾರ ತಿಳಿದಿದೆ. ವಕೀಲರೊಬ್ಬರು (ದೇವರಾಜೇಗೌಡ) ಮತ್ತು ಇತರರು ಇದರ ಬಗ್ಗೆ ಮಾತನಾಡುತ್ತಿದ್ದಾರೆ. ಕುಮಾರಣ್ಣ ನನ್ನ ರಾಜೀನಾಮೆ ಬಯಸುತ್ತಿದ್ದಾರೆ, ಒಕ್ಕಲಿಗ ನಾಯಕರ ಪೈಪೋಟಿಯಂತೆ, ರಾಜೀನಾಮೆ ಬೇಕಂತೆ,



ಕೊಡೋಣ ರಾಜೀನಾಮೆ. ಮುಗಿಸೋದೇ ಅಲ್ವಾ ಅವರ ಕೆಲಸ, ಕಿಂಗ್ ಆಫ್ ಬ್ಲಾಕ್‌ಮೇಲ್ ಕುಮಾರಸ್ವಾಮಿ, ಅಧಿಕಾರಿಗಳು ಮತ್ತು ರಾಜಕಾರಣಿಗಳನ್ನು ಹೆದರಿಸುತ್ತಿದ್ದಾರೆ, ಅವರದು ಇದೇ ಕೆಲಸ. ಚರ್ಚೆ ಮಾಡಲು ಇನ್ನೂ ಟೈಮ್ ಇದೆ, ವಿಧಾನಸಭೆ ಅಧಿವೇಶನ ಇದೆ, ಎಲ್ಲಾ ತೆಗೆದುಕೊಂಡು ಬರಲಿ ಚರ್ಚೆ ಮಾಡೋಣ ಎಂದು ಹೇಳಿದರು.

ಕುಮಾರಸ್ವಾಮಿ, ರೇವಣ್ಣರದ್ದು ಬೇರೆ ಫ್ಯಾಮಿಲಿ, ನಮ್ಮದೇ ಬೇರೆ ಫ್ಯಾಮಿಲಿ ಎಂದಿದ್ದಾರೆ. ಉಪ್ಪು ತಿಂದವನು ನೀರು ಕುಡಿಬೇಕು ಎಂದವರು ಈಗ ಯಾಕೆ ಉರಿ ಮಾಡಿಕೊಳ್ಳುತ್ತಿದ್ದಾರೆ. ಇವರೇನು ಲಾಯರ್ರಾ, ಜಡ್ಜಾ? ಹೋಗಿ ಕೋರ್ಟಿನಲ್ಲಿ ವಾದ ಮಾಡಲಿ. ಶಿವಕುಮಾರ್, ಸಿದ್ದರಾಮಯ್ಯ, ಸುರ್ಜೆವಾಲಾ ಇನ್ವೆಸ್ಟಿಗೇಷನ್ ಟೀಮ್‌ನಲ್ಲಿದ್ದಾರೆಂದು ಹೇಳಿದ್ದಾರೆ. ಕಥಾನಾಯಕ, ಡೈರೆಕ್ಟರ್, ಪ್ರೊಡ್ಯೂಸರ್ ಎಲ್ಲಾ ಕುಮಾರಸ್ವಾಮಿಯವರೇ. ಅವರ ಕಾರ್ಯಕರ್ತರು ಏನೋ ಇದ್ದಾರೆ ಅಂತೆ, ಮರ್ಯಾದೆ ಇದ್ದರೆ ಹೋಗಿ ಜೈಲು ಸೇರಿದವರಿಗೆ ಧೈರ್ಯ ತುಂಬಲಿ. ಇವರೆಲ್ಲರಿಗೂ ನನ್ನ ಹೆಸರು ಬರಬೇಕು ಅಷ್ಟೇ. ನನ್ನ ಮೇಲೆ ಆರೋಪ ಮಾಡದಿದ್ದರೆ ಮಾರ್ಕೆಟ್ ಓಡಲ್ಲ ಎಂದು ವ್ಯಂಗ್ಯವಾಡಿದರು.

ಬೆಳ್ತಂಗಡಿ ಮಾಜಿ ಶಾಸಕ ಕೆ.ವಸಂತ ಬಂಗೇರ ನಿಧನ

ಬೆಂಗಳೂರು, ಮೇ 8– ದಕ್ಷಿಣ ಕನ್ನಡ ಜಿಲ್ಲೆಯ ಪ್ರಭಾವಿ ರಾಜಕಾರಣಿಯಾಗಿದ್ದ, ಬೆಳ್ತಂಗಡಿ ಮಾಜಿ ಸಚಿವ, ಕೆ ವಸಂತ ಬಂಗೇರ(79) ಇಂದು ನಿಧನರಾದರು.



ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಅವರು ಚಿಕಿತ್ಸೆ ಪಡೆಯುತ್ತಿದ್ದರು. ಮೇ 9 ರಂದು ಬೆಳಿಗ್ಗೆ ಬಂಗೇರ ಅವರ ಪಾರ್ಥಿವವನ್ನು ಶರೀರ ಬೆಳ್ತಂಗಡಿಗೆ ಕೊಂಡೊಯ್ಯುವ ಬಗ್ಗೆ ಮಾಹಿತಿ ಇದ್ದು, ಸಾರ್ವಜನಿಕರ ಅಂತಿಮ ದರ್ಶನದ ಬಳಿಕ ಅಂತ್ಯಕ್ರಿಯೆ ನಡೆಯಲಿದೆ. 1946ರ ಜ.15ರಲ್ಲಿ ಸುಬ್ಬ ಪೂಜಾರಿ–ದೇವಕಿ ದಂಪತಿಯ ಕುಟುಂಬದಲ್ಲಿ ವಸಂತ ಬಂಗೇರ ಜನಿಸಿದ್ದರು. ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದ ಅವರು ಬೆಳ್ತಂಗಡಿ ಕ್ಷೇತ್ರದಿಂದ 5 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು.

ವಸಂತ ಬಂಗೇರ ನಿಧನಕ್ಕೆ ಗಣ್ಯರು ಸಂತಾಪ ಸೂಚಿಸಿದ್ದಾರೆ ಸಿಎಂ ಸಿದ್ದರಾಮಯ್ಯ ಟ್ವಿಟರ್‌ನಲ್ಲಿ ಸಂತಾಪ ಸಂದೇಶ ಪ್ರಕಟಿಸಿದ್ದು, ಬಂಗೇರ ಅವರನ್ನು ನೇರ, ನಿಷ್ಠುರ ನಡೆ–ನುಡಿಯ ಅಂತರ್ಯದಲ್ಲಿ ಅಪಾರವಾದ ಜನಪರ ಕಾಳಜಿ ಮತ್ತು ಸ್ನೇಹನಿಷ್ಠೆಯನ್ನು ಹೊಂದಿದ್ದ ದೊಡ್ಡ ಮನುಷ್ಯ ಎಂದು ಬಣ್ಣಿಸಿದ್ದಾರೆ.

ಲಖನೌ ವಿರುದ್ಧ ಹೈದರಾಬಾದ್‌ಗೆ 10 ವಿಕೆಟ್‌ಗಳ ಭರ್ಜರಿ ಜಯ

ಹೈದರಾಬಾದ್: ಆರಂಭಿಕ ಆಟಗಾರರಾದ ಟ್ರಾವಿಸ್ ಹೆಡ್ (89) ಹಾಗೂ ಅಭಿಷೇಕ್ ಶರ್ಮಾ (75) ಅಜೇಯರಾಗಿ ಸ್ಫೋಟಿಸಿದ ಅರ್ಧ ಶತಕಗಳ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವು ಇಂದು ಲಖನೌ ಸೂಪರ್ ಜೈಂಟ್ಸ್ ವಿರುದ್ಧ ನಡೆದ ಐಪಿಎಲ್ ಪಂದ್ಯದಲ್ಲಿ 10 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿದೆ.



166 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ ಹೈದರಾಬಾದ್ ಕೇವಲ 9.4 ಓವರ್‌ಗಳಲ್ಲೇ ಗುರಿ ತಲುಪಿತು. ಹೆಡ್ 16 ಹಾಗೂ ಅಭಿಷೇಕ್ 19 ಎಸೆತಗಳಲ್ಲಿ ಅರ್ಧ ಶತಕ ಗಳಿಸಿ ಅಜೇಯರಾಗುಳಿದರು. ಅಂತಿಮವಾಗಿ ಹೆಡ್ ಅಜೇಯ 89 (30 ಎಸೆತ, 8 ಬೌಂಡರಿ, 8 ಸಿಕ್ಸರ್) ಹಾಗೂ ಅಭಿಷೇಕ್ ಅಜೇಯ 75 ರನ್ (28 ಎಸೆತ, 8 ಬೌಂಡರಿ, 6 ಸಿಕ್ಸರ್) ಗಳಿಸಿ ಅಬ್ಬರಿಸಿದರು.

ಈ ಮೊದಲು ಬ್ಯಾಟಿಂಗ್ ವೈಫಲ್ಯ ಅನುಭವಿಸಿದ ಲಖನೌ 4 ವಿಕೆಟ್ ನಷ್ಟಕ್ಕೆ 165 ರನ್ ಗಳಿಸಲಷ್ಟೇ ಸಾಧ್ಯವಾಯಿತು. ನಿಕೋಲಸ್ ಪೂರನ್ (48*) ಹಾಗೂ ಆಯುಷ್ ಬಡೋನಿ (55*) ಮುರಿಯದ ಐದನೇ ವಿಕೆಟ್‌ಗೆ 99 ರನ್‌ಗಳ ಜೊತೆಯಾಟ ಕಟ್ಟಿದರು. ನಾಯಕ ಕೆ.ಎಲ್. ರಾಹುಲ್ 29 ರನ್ ಗಳಿಸಿ ಔಟ್ ಆದರು.

ಆತಿಥೇಯ ಸನ್‌ರೈಸರ್ಸ್ ತಂಡವು ತನ್ನ ಬಲಾಢ್ಯ ಬ್ಯಾಟಿಂಗ್ ನೆಚ್ಚಿಕೊಂಡು ಕಣಕ್ಕಿಳಿದಿದೆ. ಉಭಯ ತಂಡಗಳೂ ತಲಾ 11 ಪಂದ್ಯಗಳಲ್ಲಿ ಆಡಿ 12 ಅಂಕ ಗಳಿಸಿವೆ. ಸನ್‌ರೈಸರ್ಸ್ ತಂಡವು ನೆಟ್ ರನ್‌ರೇಟ್‌ನಲ್ಲಿ ಸ್ವಲ್ಪ ಹೆಚ್ಚು ಇರುವುದರಿಂದ ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಲಖನೌ ಆರನೇ ಸ್ಥಾನದಲ್ಲಿದೆ.

ಮೈಸೂರು ಅರಮನೆ ಉತ್ತರ ದ್ವಾರದ ಮುಂದೆ ಪರಿವಾಳಗಳಿಗೆ ಧಾನ್ಯ ಚೆಲ್ಲುವುದ ನಿರ್ಬಂಧಿಸಿ

● ಪತ್ರ ಮುಖೇನ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರರಲ್ಲಿ ಬಿಜೆಪಿ ಮುಖಂಡ ಆರ್.ರಘು ಕೌಟಿಲ್ಯ ಒತ್ತಾಯ ● ಪರಿವಾಳಗಳಿಂದ ಅರಮನೆ ಅಂದ–ಸ್ಥಿರತೆಗೆ ಧಕ್ಕೆ ಉಂಟಾಗುತ್ತದೆ


ಡಾ.ರಾಜೇಂದ್ರ


ಆರ್.ರಘು ಕೌಟಿಲ್ಯ

ಮೈಸೂರು,ಮೇ 8(ಪಿಎಂ)– ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು (ಅರಮನೆ ಉತ್ತರ ದ್ವಾರ) ಪಾರಿವಾಳಗಳಿಗೆ ಧಾನ್ಯ ಹಾಕುವುದನ್ನು ನಿರ್ಬಂಧಿಸುವಂತೆ ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರನ್ನು ಬಿಜೆಪಿ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾದ ಅಧ್ಯಕ್ಷ ಆರ್.ರಘು ಕೌಟಿಲ್ಯ ಪತ್ರ ಮುಖೇನ ಒತ್ತಾಯಿಸಿದ್ದಾರೆ.



ಇಡೀ ಪರಿಸರ ಅಶುಚಿತ್ವ

ಧಾನ್ಯ ಚೆಲ್ಲುವುದರಿಂದ ಸಾವಿರಾರು ಪಾರಿವಾಳಗಳು ಅಲ್ಲಿ ಜಮಾಯಿಸುತ್ತಿವೆ. ಆ ಮೂಲಕ ಇಡೀ ಪರಿಸರದಲ್ಲಿ ಅಶುಚಿತ್ವ ಉಂಟು ಮಾಡುತ್ತಿವೆ. ಅಲ್ಲದೆ, ಎದುರು ಇರುವ ಹತ್ತನೇ ಚಾಮರಾಜ ಒಡೆಯರ್ ಅವರ ಪ್ರತಿಮೆ ಹಾಗೂ ಆವರಣದಲ್ಲಿ ಸ್ವಚ್ಛತೆ ಇಲ್ಲವಾಗುತ್ತಿದೆ. ಈ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳು, ನಗರ ಪಾಲಿಕೆ ಹಾಗೂ ಪ್ರಾಚ್ಯವಸ್ತು ಮತ್ತು ಪುರಾತತ್ವ ಇಲಾಖೆ ಆಯುಕ್ತರು, ನಗರ ಪೊಲೀಸ್ ಆಯುಕ್ತರಿಗೆ ಈಗಾಗಲೇ ಪತ್ರ ಬರೆದಿದ್ದೇನೆ. ಜಿಲ್ಲಾಡಳಿತ, ನಗರ ಪಾಲಿಕೆ ಇಂತಹ ವಿಚಾರಗಳಲ್ಲಿ ಹೆಚ್ಚು ಎಚ್ಚರ ವಹಿಸುವುದು ಅಗತ್ಯ. ಈಗಾಗಲೇ ಸಾಕಷ್ಟು ಹಾನಿಯುಂಟಾಗಿದೆ. ಸ್ವಚ್ಛತೆ ಮಾಡುವುದು ಹಾಗೂ ರಕ್ಷಣೆಗೆ ಸೂಕ್ತ ಕ್ರಮ ವಹಿಸುವ ಬದ್ಧತೆಯು ಅಧಿಕಾರಿಗಳಿಗೆ ಇಲ್ಲವಾಗಿದೆ.

–ಆರ್.ರಘು ಕೌಟಿಲ್ಯ

ಸದರಿ ಸ್ಥಳದಲ್ಲಿ ಕೆಲವರು ಪಾರಿವಾಳಗಳಿಗೆ ನಿತ್ಯ ಧಾನ್ಯಗಳನ್ನು ತಂದು ಚೆಲ್ಲುತ್ತಿರುವುದರಿಂದ ಸಾವಿರಾರು ಸಂಖ್ಯೆಯಲ್ಲಿ ಹಾರಿ ಬರುವ ಪಾರಿವಾಳಗಳು ಅರಮನೆಯ ಅಂದಗೆಡಲು ಹಾಗೂ ಕಟ್ಟಡಕ್ಕೆ ಅಸ್ಥಿರತೆ ಉಂಟು ಮಾಡಲು ಕಾರಣವಾಗಿವೆ. ಜೊತೆಗೆ ಇಲ್ಲಿಗೆ ಸಮೀಪದಲ್ಲಿರುವ ನಾಲ್ವಡಿಯವರ ತಂದೆಯವರಾದ ಮಹಾರಾಜ ಹತ್ತನೇ ಚಾಮರಾಜೇಂದ್ರ ಒಡೆಯರ್ ಅವರ ಪ್ರತಿಮೆ ಮತ್ತು ಅದರ ಆವರಣ ಸಹ ತ್ಯಾಜ್ಯಗಳಿಂದ ಕಲುಷಿತಗೊಂಡಿದೆ. ಆ ಮೂಲಕ ಮೈಸೂರು ಸಂಸ್ಥಾನದ ಅಭಿವೃದ್ಧಿಗೆ ಚಾರಿತ್ರಿಕ ಕೊಡುಗೆಗಳನ್ನು ನೀಡಿದ ಅವರನ್ನು ನಿತ್ಯವೂ ಅಪಮಾನಿಸುವಂತಾಗಿದೆ. ಅರಮನೆಯ ಸುತ್ತಮುತ್ತ ವ್ಯಾಪಾರವನ್ನು ಆಶ್ರಯಿಸಿರುವವರು, ದೇವಸ್ಥಾನಗಳ ಪೂಜಾ ಕೈಂಕರ್ಯಗಳನ್ನು ಕೈಗೊಳ್ಳುವ ಅರ್ಚಕರು ಹಾಗೂ ಇಲ್ಲಿಗೆ ಭೇಟಿ ನೀಡುವ ಪ್ರವಾಸಿಗರು, ಸಾರ್ವಜನಿಕರ ಆರೋಗ್ಯದ ಮೇಲೂ ಇಲ್ಲಿನ ಅಶುಚಿತ್ವದ ವಾತಾವರಣ ದುಷ್ಪರಿಣಾಮ ಉಂಟು ಮಾಡುತ್ತಿದೆ. ಮೈಸೂರಿನ ಹೆಮ್ಮೆಯ, ವಿಶ್ವವಿಖ್ಯಾತ ಸುಂದರ ಅರಮನೆಯ ಆಯಕಟ್ಟಿನ ಸ್ಥಳಗಳಲ್ಲಿ ಗೂಡು ಕಟ್ಟಿಕೊಂಡಿರುವ ಪಾರಿವಾಳಗಳು ಅರಮನೆಯ ಸೌಂದರ್ಯ ಹಾಗೂ ಕಟ್ಟಡದ ಅಸ್ತಿತ್ವಕ್ಕೂ ಧಕ್ಕೆ ಉಂಟು ಮಾಡುತ್ತಿವೆ. ಅಲ್ಲದೇ ಇವುಗಳ ಹಾರಾಟದಿಂದ ಸಾರ್ವಜನಿಕರು, ವಾಹನಗಳ ಸುಗಮ ಸಂಚಾರಕ್ಕೂ ತೀವ್ರ ಅಡಚಣೆ ಉಂಟಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕೂಡಲೇ ಮೈಸೂರು ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ ಹಾಗೂ ಪ್ರಾಚ್ಯವಸ್ತು ಮತ್ತು ಪುರಾತತ್ವ ಇಲಾಖೆಯ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡು, ಪಾರಿವಾಳಗಳಿಗೆ ಧಾನ್ಯ ತಂದು ಚೆಲ್ಲುವವರಿಗೆ ತಡೆಯೊಡ್ಡಿ ಅರಮನೆಯ ಸುತ್ತಳತೆಯ 2 ಕಿ.ಮೀ. ವ್ಯಾಪ್ತಿಯವರೆಗೂ ಇದಕ್ಕೆ ನಿರ್ಬಂಧ ವಿಧಿಸುವಂತೆ ಪರಂಪರೆ ಮತ್ತು ಪರಿಸರ ಕಾಳಜಿ ಹೊಂದಿರುವ ನಾಗರಿಕರ ಪರವಾಗಿ ಒತ್ತಾಯಿಸುವುದಾಗಿ ಅವರು ತಿಳಿಸಿದ್ದಾರೆ.

ಅಲ್ಪ ವೆಚ್ಚದಲ್ಲಿ ಮಹಾನ್ ಪುಣ್ಯ ಕಟ್ಟಿಕೊಳ್ಳುತ್ತೇವೆಂಬ ಭ್ರಮೆಯಲ್ಲಿನ ಕೆಲವು ವ್ಯಕ್ತಿಗಳು ಪಾರಿವಾಳಗಳಿಗೆ ಧಾನ್ಯಗಳನ್ನು ತಂದು ಚೆಲ್ಲುತ್ತಿದ್ದು, ಈ ನಿಟ್ಟಿನಲ್ಲಿ ತಕ್ಷಣವೇ ಕ್ರಮ ಕೈಗೊಂಡು ಪಾರಂಪರಿಕ ಅರಮನೆಯ ಪಾವಿತ್ರ್ಯತೆ ಹಾಗೂ ಸೌಂದರ್ಯ ಕಾಪಾಡುವುದು ಅಗತ್ಯವಾಗಿದೆ. ಈ ಸಂಬಂಧ ಶೀಘ್ರದಲ್ಲಿ ಕ್ರಮ ಕೈಗೊಳ್ಳದಿದ್ದರೆ ಹೋರಾಟ ನಡೆಸುವುದು ಅನಿವಾರ್ಯ ಎಂದು ಪತ್ರದಲ್ಲಿ ಅವರು ಎಚ್ಚರಿಸಿದ್ದಾರೆ.

ಮೂರನೇ ಪುಟದಿಂದ

ರೇವಣ್ಣ ಜೈಲು ಪಾಲು

ನ್ಯಾಯಾಲಯಕ್ಕೆ ಕರೆತಂದರು. ಮೂರು ದಿನಗಳಿಂದ ನಾನು ನಿದ್ದೆ ಮಾಡಿಲ್ಲ, ಆರೋಗ್ಯ ಕೆಟ್ಟಿದೆ. ಹೊಟ್ಟೆನೋವಿನಿಂದ ಬಳಲುತ್ತಿದ್ದೇನೆ. ನಿನ್ನೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ದಾಖಲು ಮಾಡುವ ಬದಲು ಮತ್ತೆ ವಾಪಸು ಕರೆತಂದರು. ಈಗಲೂ ನಾನು ಅನಾರೋಗ್ಯದಿಂದ ಬಳಲುತ್ತಿದ್ದೇನೆ. ನಾನು ಹೇಳುವುದು ಇನ್ನೇನೂ ಇಲ್ಲ ಎಂದರು.

ಅವರ ಹೇಳಿಕೆ ಮುಗಿಯುತ್ತಿದ್ದಂತೆ ಏಳು ದಿನಗಳ ಕಾಲ ನ್ಯಾಯಾಂಗ ವಶಕ್ಕೆ ನೀಡಿ ಜಾಮೀನು ಅರ್ಜಿಯನ್ನು ನಾಳೆ ಕೈಗೆತ್ತಿಕೊಳ್ಳುವುದಾಗಿ ತಿಳಿಸಿದ್ದರಿಂದ, ರೇವಣ್ಣ ಅವರಿಗೆ ಜೈಲೇ ಗತಿಯಾಯಿತು. ಹಾಸನ ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣದ ಸಂತ್ರಸ್ತೆಯನ್ನು ರೇವಣ್ಣ ಅಪಹರಿಸಿದ್ದಾರೆಂದು ಆರೋಪಿಸಿ, ಎಸ್‌ಐಟಿ ಅವರನ್ನು ವಶಕ್ಕೆ ಪಡೆದು ನಾಲ್ಕು ದಿನಗಳ ಕಾಲ ಕಸ್ಟಡಿಗೆ ತೆಗೆದುಕೊಂಡಿತ್ತು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ವಾರದಲ್ಲಿ ಗೋಮಾಳ ಒತ್ತುವರಿ ಕುರಿತು ವರದಿ ನೀಡದಿದ್ದರೆ ಕ್ರಮ

● ಮೈಸೂರು ಜಿಲ್ಲಾ ಲೋಕಾಯುಕ್ತ ಎಸ್ಪಿ ಸತೀಶ್ ಎಚ್ಚರಿಕೆ ● ಗ್ರಾಮ ಪಂಚಾಯಿತಿ ಸದಸ್ಯರಿಂದಲೇ ಅಧಿಕಾರಿಗಳ ವಿರುದ್ಧ ಕ್ರಮ

ಹೆಚ್.ಡಿ.ಕೋಟೆ, ಮೇ 8– ಅಕ್ರಮವಾಗಿ ಗೋಮಾಳ ಒತ್ತುವರಿ ಮಾಡಿಕೊಂಡಿರುವ ಪ್ರಕರಣ ಕುರಿತು ವಾರದಲ್ಲಿ ವರದಿ ನೀಡದಿದ್ದರೆ ಸಂಬಂಧಿಸಿದ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲಾಗುವುದು ಎಂದು ಮೈಸೂರು ಜಿಲ್ಲಾ ಲೋಕಾಯುಕ್ತ ಎಸ್ಪಿ ಸತೀಶ್ ಎಚ್ಚರಿಕೆ ನೀಡಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮೈಸೂರು ಜಿಲ್ಲಾ ಲೋಕಾಯುಕ್ತ ಎಸ್ಪಿ ಸತೀಶ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕರ ಕುಂದುಕೊರತೆ ಸಭೆಯಲ್ಲಿ ಮಟಕೆರೆ ಗ್ರಾಮದ ಕೃಷ್ಣ ಮತ್ತು ಮಾದಪುರ ಕುಮಾರಸ್ವಾಮಿ ಮಾತನಾಡಿ, ಸವ್ವೆ ಗ್ರಾಮದ ಸ.ನಂ 58,59,65 ಹಾಗೂ 70 ರಲ್ಲಿ ಆಂಧ್ರಪ್ರದೇಶದ ಮೂಲದ ವ್ಯಕ್ತಿ 30 ವರ್ಷಗಳ ಹಿಂದೆ 33 ಎಕರೆ ಜಮೀನನ್ನು ಖರೀದಿ ಮಾಡಿ ರವಿಬಾಬು ಅವರಿಗೆ ಜಿಪಿಎ ಮಾಡಿಕೊಟ್ಟಿದ್ದಾರೆ. ಆದರೆ ಜಿಪಿಎ ಮಾಡಿಕೊಂಡ ವ್ಯಕ್ತಿ ಪಕ್ಕದಲ್ಲಿ ಇರುವ ಸರ್ಕಾರಿ ಗೋಮಾಳ 30 ಎಕರೆ ಜಮೀನಿನನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ಸ್ವಾಧೀನದಲ್ಲಿ ಇದ್ದಾನೆ. ಈ ವಿಚಾರವಾಗಿ ನಾವು ಕಂದಾಯ ಇಲಾಖೆ ಸಚಿವರ ಜನಸಂಪರ್ಕ ಸಭೆಯಲ್ಲಿ ದೂರು ನೀಡಲಾಗಿ ಸರ್ಕಾರದ ಅಧೀನ ಕಾರ್ಯದರ್ಶಿ ಅವರು ನಿಯಮಾನುಸಾರ ಕ್ರಮವಹಿಸುವಂತೆ ಸೂಚಿಸಿದರು. ಆದರೂ ಕೂಡ ಕಂದಾಯ ಇಲಾಖೆ ಕ್ರಮವಹಿಸಲಿಲ್ಲ ಎಂದರು.

ನಂತರ ನಾವು ಲೋಕಾಯುಕ್ತಕ್ಕೆ ದೂರು ನೀಡಿದ್ದೆವು. ಲೋಕಾಯುಕ್ತ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಅಕ್ರಮವಾಗಿ ಒತ್ತುವರಿಯಾಗಿರುವ ಸರ್ಕಾರಿ ಗೋಮಾಳ ಜಾಗವನ್ನು ತೆರವುಗೊಳಿಸಿ ಆರ್‌ಟಿಸಿ ಕಾಲಂನಲ್ಲಿ ಸರ್ಕಾರ ಎಂದು ನಮೂದು ಮಾಡಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಬೇಕು ಎಂದು ತಹಸೀಲ್ದಾರ್ ಅವರಿಗೆ ಆದೇಶ ಮಾಡಿ ವರ್ಷ ಕಳೆದರೂ ಕೂಡ ಕಂದಾಯ ಇಲಾಖೆ ಅಧಿಕಾರಿಗಳು ಬೇಜವಾಬ್ದಾರಿ ತೋರಿದ್ದಾರೆ. ಹಾಗಾಗಿ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಕೈಗೊಂಡು ಸರ್ಕಾರಿ ಜಮೀನು ಉಳಿಸಿ ಬಡವರಿಗೆ ನೀಡಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಉತ್ತರಿಸಿದ ಲೋಕಾಯುಕ್ತ ಎಸ್ಪಿ ಈ ಬಗ್ಗೆ ಒಂದು ವಾರದೊಳಗೆ ವರದಿ ನೀಡಬೇಕು. ಇಲ್ಲದಿದ್ದರೆ ಅಂತಹ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ತುಂಬಸೋಗೆ ಗ್ರಾಮ ಪಂಚಾಯತಿ ಸದಸ್ಯ ಜಕ್ಕಹಳ್ಳಿ ಶಿವಣ್ಣ ಮಾತನಾಡಿ, ಪಂಚಾಯತಿಯಲ್ಲಿ ಅಭಿವೃದ್ಧಿ ಅಧಿಕಾರಿ ಮತ್ತು ಕಂಪ್ಯೂಟರ್ ಆಪರೇಟರ್ ಅವರು ಸಾರ್ವಜನಿಕರ ಕೆಲಸ ಕಾರ್ಯ ಮಾಡಿಕೊಡುವಲ್ಲಿ ವಿಳಂಬ ಮಾಡುತ್ತಾರೆ. ಹಣ ನೀಡಿದರೇ ಮಾತ್ರ ಸಾರ್ವಜನಿಕರ ಕೆಲಸ ಕಾರ್ಯ ಆಗುತ್ತದೆ. ಕಂದಾಯ ವಸೂಲಿ ಮಾಡಲು ಗ್ರಾಮಗಳಿಗೆ ತೆರಳುತ್ತಿಲ್ಲ. ಗ್ರಾಮ ಪಂಚಾಯತಿ ಅಭಿವೃದ್ಧಿ ಪ್ರಗತಿ ಕುಂಠಿತವಾಗಲು ಇವರು ಕಾರಣರಾಗಿದ್ದಾರೆ ಎಂದು ದೂರಿದರು.

ಇದನ್ನು ಆಲಿಸಿದ ಲೋಕಾಯುಕ್ತ ಎಸ್ಪಿಯವರು ಪಂಚಾಯತಿ ಸದಸ್ಯರೇ ಬಂದು ಕೆಲಸ ಕಾರ್ಯ ಆಗುತ್ತಿಲ್ಲ ಎಂದು ದೂರು ನೀಡುತ್ತಿದ್ದಾರೆ ಎಂದರೆ ಜನಸಾಮಾನ್ಯರ ಕೆಲಸ ಕಾರ್ಯಗಳು ಆಗಲು ಸಾಧ್ಯವೇ ಇಲ್ಲಾ ಎಂದು ಬೇಸರ ವ್ಯಕ್ತಪಡಿಸಿ, ಹಿಂದುಳಿದ ತಾಲೂಕು ಎಸ್‌ಸಿ, ಎಸ್ಟಿ ಜನರು ಹೆಚ್ಚು ವಾಸ ಮಾಡುತ್ತಿದ್ದಾರೆ. ಇವರ ಅಭಿವೃದ್ಧಿಗೆ ಒತ್ತು ಕೊಡಬೇಕು. ಈ ಬಗ್ಗೆ ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದರು.


ಹೆಚ್.ಡಿ.ಕೋಟೆ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಲೋಕಾಯುಕ್ತ ಎಸ್ಪಿ ಸತೀಶ್ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕರ ಕುಂದುಕೊರತೆ ಸಭೆಯಲ್ಲಿ ಸಾರ್ವಜನಿಕರು ದೂರು ಸಲ್ಲಿಸಿದರು.

ದಸಂಸ ತಾಲೂಕು ಸಂಚಾಲಕ ಸಣ್ಣಕುಮಾರ್ ಮಾತನಾಡಿ, ಎರಡು ವರ್ಷದಿಂದ ನಮ್ಮ ಜಮೀನಿಗೆ ತೆರಳಲು ರಸ್ತೆ ಬಿಡಿಸಿಕೊಡಿ ಎಂದು ತಹಸೀಲ್ದಾರ್ ಅವರಿಗೆ ಅರ್ಜಿ ನೀಡಿ ಮನವಿ ಮಾಡಲಾಗಿದೆ. ಹತ್ತು ಬಾರಿ ಅವರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿದ್ದಾರೆ. ಆದರೆ ರಸ್ತೆ ಬಿಡಿಸಿಲ್ಲ ಎಂದು ದೂರಿದರು. ಇದಕ್ಕೆ ಉತ್ತರಿಸಿದ ಲೋಕಾಯುಕ್ತ ಎಸ್ಪಿ ಅವರು, ಇನ್ನು ಹತ್ತು ದಿನದಲ್ಲಿ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದರು.

ಹೆಗ್ಗಡಪುರ ಕೆಂಪಶೆಟ್ಟಿ ಮಾತನಾಡಿ, ತಾಲೂಕಿನಲ್ಲಿ ಬಹುತೇಕ ಕೆರೆಗಳು ಒತ್ತುವರಿಯಾಗಿ ಭೂ ಮಾಲೀಕರ ಒಡೆತನದಲ್ಲಿ ಇದ್ದು, ಜಮೀನುಗಳಾಗಿ ಪರಿವರ್ತನೆ ಆಗಿವೆ. ಹಲವಾರು ಬಾರಿ ಕೆರೆಗಳನ್ನು ಗುರುತಿಸಿ ಒತ್ತುವರಿ ಆಗಿರುವ ಕೆರೆಗಳನ್ನು ಸಂರಕ್ಷಣೆ ಮಾಡಬೇಕು ಎಂದು ಮನವಿ ಮಾಡಿದ್ದರು ಕೂಡ ಅಧಿಕಾರಿಗಳು ಕ್ರಮವಹಿಸಿಲ್ಲ ಎಂದರು.

ಈ ಬಗ್ಗೆ ಸರ್ವೆ ಇಲಾಖೆ ತಾಲೂಕು ಸರ್ವೇಯರ್ ಶಂಭುಲಿಂಗ ಮಾತನಾಡಿ, ತಾಲೂಕಿನಲ್ಲಿ ಒಟ್ಟು 282 ಕೆರೆಗಳು ಇದ್ದು, 88 ಕೆರೆಗಳ ಒತ್ತುವರಿ ತೆರವು ಮಾಡಲಾಗಿದೆ ಎಂದು ಮಾಹಿತಿ ನೀಡಲು ಮುಂದಾದಾಗ ಸಭೆಯಲ್ಲಿ ಇದ್ದ ಸಾರ್ವಜನಿಕರು ನೀವು ಬಿಡಿಸಿರುವ 88 ಕೆರೆಗಳಲ್ಲಿ 8 ಕೆರೆಗಳ ಹೆಸರನ್ನು ತಿಳಿಸಿ, ಜೊತೆಗೆ ಎಷ್ಟು ಕೆರೆಗಳನ್ನು ಬಿಡಿಸಿ ಗ್ರಾಮ ಪಂಚಾಯತಿಗೆ ಹಸ್ತಾಂತರ ಮಾಡಿದ್ದೀರಾ. ಅದನ್ನು ಸಭೆಯ ಗಮನಕ್ಕೆ ತನ್ನಿ ಎಂದಾಗ ಸರ್ವೇಯರ್ ಅವರ ಹತ್ತಿರ ಸರಿಯಾದ ಉತ್ತರ ಬರಲಿಲ್ಲ. ಆಗ ಲೋಕಾಯುಕ್ತ ಎಸ್ಪಿ ಅವರು ನಾನೇ ಸ್ಥಳ ಪರಿಶೀಲನೆ ಮಾಡಿ ವೀಕ್ಷಣೆ ಮಾಡುತ್ತೇನೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ತಹಸೀಲ್ದಾರ್ ಶ್ರೀನಿವಾಸ್, ಇಓ ಧರಣೀಶ್, ಲೋಕಾಯುಕ್ತ ಡಿವೈಎಸ್ಪಿ ಮಾಲತೇಶ್, ಇನ್ಸ್‌ಪೆಕ್ಟರ್ ಜಯರತ್ನ, ರವಿಕುಮಾರ್ ಹಾಗೂ ಸಿಬ್ಬಂದಿಗಳು ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

ನಗರ್ಲೆಯಲ್ಲಿ ಶ್ರೀರಾಮನ ಕೇಸರಿ ಧ್ವಜ ತೆರವು

▶ ಸ್ವತಃ ತಾವೇ ಏಣಿ ಮೇಲೇರಿ ಬಾವುಟ ತೆರವುಗೊಳಿಸಿದ ಪಿಡಿಓ
▶ ಅಧಿಕಾರಿ ಕ್ರಮದ ವಿರುದ್ಧ ಗ್ರಾಮಸ್ಥರು ತೀವ್ರ ಆಕ್ರೋಶ


ಸೋಲಾರ್ ವಿದ್ಯುತ್ ಕಂಬಕ್ಕೆ ಅಳವಡಿಸಿದ್ದ ಶ್ರೀರಾಮಚಂದ್ರ ಪ್ರಭುವಿನ ಕೇಸರಿ ಬಾವುಟವನ್ನು ತೆರವುಗೊಳಿಸುತ್ತಿರುವ ಪಿಡಿಓ ಈಶಕುಮಾರ್.

ನಂಜನಗೂಡು, ಮೇ 8– ಸೋಲಾರ್ ದೀಪದ ಕಂಬಕ್ಕೆ ಅಳವಡಿಸಿದ್ದ ಶ್ರೀರಾಮಚಂದ್ರ ಪ್ರಭುವಿನ ಕೇಸರಿ ಬಾವುಟವನ್ನು ಸ್ವತಃ ಪಿಡಿಓ ಈಶಕುಮಾರ್ ಏಣಿ ಮೇಲೇರಿ ತೆರವುಗೊಳಿಸಿದ ಘಟನೆ ತಾಲೂಕಿನ ನಗರ್ಲೆ ಗ್ರಾಮದಲ್ಲಿ ನಡೆದಿದೆ.

ಗ್ರಾಮದಲ್ಲಿ ಮೇ 4ರಂದು ಶ್ರೀರಾಮನವಮಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಇದರ ಅಂಗವಾಗಿ ನಂಜನಗೂಡು–ತಿ.ನರಸೀಪುರ ಮುಖ್ಯರಸ್ತೆಯ ರಸ್ತೆ ವಿಭಜಕದಲ್ಲಿರುವ ಸೋಲಾರ್ ವಿದ್ಯುತ್ ಕಂಬಕ್ಕೆ ಶ್ರೀರಾಮಚಂದ್ರ ಪ್ರಭುವಿನ ಕೇಸರಿ ಬಾವುಟವನ್ನು ಯುವಕರು ಕಟ್ಟಿದ್ದಾರೆ.

ಬಾವುಟ ಕಟ್ಟಲು ಅನುಮತಿ ಪಡೆದಿಲ್ಲ, ತೆರವುಗೊಳಿಸುವಂತೆ ಮೌಖಿಕವಾಗಿ ತಿಳಿಸಿದರೂ ತೆಗೆದಿರಲಿಲ್ಲ. ಹಾಗಾಗಿ ಬುಧವಾರ ನಾನೇ ಖುದ್ದು ತೆರಳಿ ಏಣಿ ಹತ್ತಿ ತೆರವು ಮಾಡಿದ್ದೇನೆ ಎಂದು ಪಿಡಿಓ ಈಶಕುಮಾರ್ ತಿಳಿಸಿದ್ದಾರೆ.

ಆದರೆ, ಇದಕ್ಕೆ ಯುವಕರು ಆಕ್ಷೇಪ ವ್ಯಕ್ತಪಡಿಸಿದ್ದು, ಗ್ರಾಮದಲ್ಲಿ ಈ ರೀತಿಯ ಅನೇಕ ಬಾವುಟಗಳನ್ನು ಅಳವಡಿಸಲಾಗಿದೆ. ಯಾರೂ ಕೂಡ ಅನುಮತಿ ಪಡೆದಿಲ್ಲ. ಆ ಬಾವುಟ ಇದ್ದಿದ್ದರೆ ಏನೂ ಸಮಸ್ಯೆ ಇರಲಿಲ್ಲ. ಹಿಂದೂ ಧಾರ್ಮಿಕ ನಂಬಿಕೆಗೆ ಧಕ್ಕೆ ತರುವ ನಿಟ್ಟಿನಲ್ಲಿ ಪಿಡಿಓ ಈಶಕುಮಾರ್ ತಾವೇ ಖುದ್ದು ಏಣಿ ಹತ್ತಿ ಬಾವುಟವನ್ನು ಕಿತ್ತು ನೆಲಕ್ಕೆ ಬಿಸಾಡುವ ಮೂಲಕ ಹಿಂದೂಗಳನ್ನು ಕೆರಳುವಂತೆ ಮಾಡಿದ್ದಾರೆ. ಇವರಿಗೆ ಕಿಂಚಿತ್ತು ಧಾರ್ಮಿಕ ಸಹಿಷ್ಣುತೆ ಇದ್ದಿದ್ದರೆ ಧಾರ್ಮಿಕ ಭಾವನೆಗಳನ್ನು ಕೆರಳುವಂತೆ ನಡೆದುಕೊಳ್ಳುತ್ತಿರಲಿಲ್ಲ. ಇದರ ಹಿಂದೆ ಏನೋ ಷಡ್ಯಂತ್ರವಿದೆ ಎಂದು ಗ್ರಾಮದ ಯುವಕರು ಆಪಾದಿಸಿದ್ದಾರೆ.


ಕೇಸರಿ ಬಾವುಟವನ್ನು ನೆಲಕ್ಕೆ ಬಿಸಾಡಿದ ಪಿಡಿಓ ಈಶಕುಮಾರ್.

ಇದರಿಂದಾಗಿ ಪಿಡಿಓ ಈಶಕುಮಾರ್ ಹಾಗೂ ಯುವಕರ ನಡುವೆ ವಾಗ್ವಾದವೂ ನಡೆದಿದೆ. ಇನ್ನು ಪಿಡಿಓ ಈಶಕುಮಾರ್ ಶ್ರೀರಾಮಚಂದ್ರ ಪ್ರಭುವಿನ ಬಾವುಟವನ್ನು ಕಿತ್ತು ನೆಲಕ್ಕೆ ಬಿಸಾಡುವುದನ್ನು ಯುವಕರು ವಿಡಿಯೋ ಚಿತ್ರೀಕರಣ ಮಾಡಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ. ಪಿಡಿಓ ನಡೆದುಕೊಂಡಿರುವ ರೀತಿಗೆ ವ್ಯಾಪಕ ಖಂಡನೆಯೂ ವ್ಯಕ್ತವಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ರತ್ನಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಂಗರೂ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಊಡೂ ಈಸ್ ಬ್ಯಾಕ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಮಾರಕಾಸ್ತ್ರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಅರಮನೆ–4(ತ)	4 ಪ್ರದರ್ಶನಗಳು
ಸಂಗಂ	
ಉಸಿರೇ ಉಸಿರೇ (ಕ)	4 ಪ್ರದರ್ಶನಗಳು
ಲಿಡೋ	
ಮ್ಯಾಟ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬಿಲ್ಲ (ತ)	4 ಪ್ರದರ್ಶನಗಳು
ಪ್ರಭಾ	
ಮಾರಣಾಯುದ್ಧಂ (ತೆ)	4 ಪ್ರದರ್ಶನಗಳು

ಪರಿಶ್ರಮದ ಓದಿನಿಂದ ಸಾಧನೆ ಸಾಧ್ಯ



ಹುಣಸೂರು, ಮೇ 8– ಪರಿಶ್ರಮ ವಹಿಸಿ ಓದುವ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಬಹುದು ಎಂದು ಉಪವಿಭಾಗಾಧಿಕಾರಿ ಮಹಮದ್ ಹಾರೀಸ್ ಸುಮೇರ್ ತಿಳಿಸಿದರು.

ನಗರದ ಸರ್ಕಾರಿ ಮಹಿಳಾ ಪದವಿ ಕಾಲೇಜಿನ ಕನ್ನಡ ವಿಭಾಗದ ಸಹಯೋಗದಲ್ಲಿ ಕಾಲೇಜಿನ ಆವರಣದಲ್ಲಿ ಕನ್ನಡ ಸಾಹಿತ್ಯ ಪರಿಷತ್‌ನ ಸಂಸ್ಥಾಪನ ದಿನಾಚರಣೆ ಹಾಗೂ ಕನ್ನಡಾಂಬೆಯ ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರಕ್ಕೆ ಗಣ್ಯರಿಂದ ಪುಷ್ಪಾರ್ಚನೆ ಸಲ್ಲಿಸಿ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿ, ಯುಪಿಎಸ್ಸಿಯಲ್ಲಿ ಕನ್ನಡದಲ್ಲಿ ತೇರ್ಗಡೆ ಹೊಂದಿರುವುದು ಪ್ರಶಂಸನೀಯವಾದುದು. ನಾವು ಯಾವ ಭಾಷೆಯಲ್ಲಿ ಪ್ರಾವೀಣ್ಯತೆ ಹೊಂದಿದ್ದೇವೆಯೋ ಅದೇ ಭಾಷೆಯಲ್ಲಿ ಯುಪಿಎಸ್‌ಸಿ ಪರೀಕ್ಷೆ ಬರೆಯಬಹುದು. ಎಲ್ಲರೂ ಶ್ರಮವಹಿಸಿ ಓದಿ ಯಶಸ್ವಿಯಾಗಬೇಕು ಎಂದರು.

ಪೋಷಕರು ಮಕ್ಕಳಿಗೆ ಸಹಕಾರ ನೀಡಿ ಪ್ರೋತ್ಸಾಹಿಸಬೇಕು. ದೈಹಿಕ ಹಾಗೂ ಮಾನಸಿಕ ಶಕ್ತಿ ಮುಖ್ಯ. ವಿದ್ಯಾರ್ಥಿಗಳು ಓದಿನ ಜೊತೆಗೆ ಆಟ, ಸಹಪಠ್ಯ ಚಟುವಟಿಕೆಗಳಲ್ಲೂ ಭಾಗವಹಿಸಬೇಕು. ಕೇವಲ ಓದು ಮಾತ್ರವಲ್ಲ ಪರಿಪೂರ್ಣ ವ್ಯಕ್ತಿತ್ವ ಬೆಳೆಯಬೇಕು. ಇಂಟರ್ನೆಟ್ ಉಪಯೋಗಿಸಿ ಹೆಚ್ಚು ತಿಳಿದುಕೊಳ್ಳಿ. ಯಾವ ಭಾಷೆಯಲ್ಲಿ ಬೇಕೋ ಅದರಲ್ಲೇ ಅಭ್ಯಾಸ ಮಾಡಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಸಾಧಕರಿಗೆ ಯುಪಿಎಸ್ಸಿ ಸಾಧಕರಾದ ತಾಲೂಕಿನ ತಿಪ್ಲಾಪುರದ ಎಂ.ಲೇಖನ್, ಸ್ಪೀಕ್ ಫಾರ್ ಇಂಡಿಯ ರಾಷ್ಟ್ರಮಟ್ಟದ ಚರ್ಚಾ ಸ್ಪರ್ಧೆ ವಿಜೇತರಾದ ಹನಗೂಡಿನ ಹೆಚ್.ಪಿ.ಶ್ಯಾಮ್‌ಪ್ರಸಾದ್, ಸ್ನಾತಕೋತ್ತರ ಪದವಿಯ ಚಿನ್ನದ ಪದಕ ಹಾಗೂ ನಗದು ಬಹುಮಾನ ವಿಜೇತೆ ಕುಮಾರಿ ಎಂ.ಎ.ಅಮೃತ, ಹುಣಸೂರಿನ ಉರಗ ತಜ್ಞ ಸ್ನೇಕ್ ಶಮೀಲ್ ಅವರುಗಳನ್ನು ಸನ್ಮಾನಿಸಿ, ಅಭಿನಂದಿಸಲಾಯಿತು.

ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಪುಟ್ಟಶೆಟ್ಟಿ ವಹಿಸಿದ್ದರು. ಪುಷ್ಪನಮನವನ್ನು ಜಿಲ್ಲಾಧ್ಯಕ್ಷ ಮಡ್ಡಿಕೆರೆಗೋಪಾಲ್ ಮಾಡಿದ್ದು, ತಾಲೂಕು ಅಧ್ಯಕ್ಷ ಹೆಚ್.ಕೆ.ಮಹದೇವು, ಜಿಲ್ಲಾ ನಿಕಟಪೂರ್ವ ಅಧ್ಯಕ್ಷ ವೈ.ಡಿ.ರಾಜಣ್ಣ, ಶಿಕ್ಷಣಾಧಿಕಾರಿ ಎಸ್.ರೇವಣ್ಣ, ನಿವೃತ್ತ ಪ್ರಾಂಶುಪಾಲ, ಕಸಾಪ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಕಸಾಪ ನಿಕಟಪೂರ್ವ ಅಧ್ಯಕ್ಷ ಸೋಮಶೇಖರ್, ಕುಮಾರ್ ಅರಸೇಗೌಡ, ಚಿಲ್ಕುಂದ ಮಹೇಶ್, ಕಲಾವತಿ ಮಹದೇವಮ್ಮ, ಲೋಕೇಶ್ ಇನ್ನಿತರರು ಹಾಜರಿದ್ದರು.

ಯುಪಿಎಸ್‌ಸಿ ಪರೀಕ್ಷೆಯಲ್ಲಿ ಚಿದಾನಂದ 120ನೇ ರ್‍ಯಾಂಕ್



ಹೆಚ್.ಡಿ.ಕೋಟೆ, ಮೇ 8– ಹೆಚ್.ವಿ.ಚಿದಾನಂದ ಯುಪಿಎಸ್‌ಸಿ ಪರೀಕ್ಷೆಯಲ್ಲಿ 120ನೇ ರ್‍ಯಾಂಕ್ ಪಡೆದಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್.ಡಿ.ಕೋಟೆ ನಿವಾಸಿಯಾದ ಪಟ್ಟಣದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು ಉಪನ್ಯಾಸಕರಾದ ವೆಂಕಟಸುಬ್ಬ ನಾಯಕ, ಮಂಜುಳಾ ದಂಪತಿಗಳ ಪುತ್ರ ಎಚ್.ವಿ. ಚಿದಾನಂದ ಯುಪಿಎಸ್‌ಸಿ ಪರೀಕ್ಷೆಯಲ್ಲಿ 120ನೇ ರ್‍ಯಾಂಕ್ ಪಡೆದು ತಾಲೂಕಿಗೆ ಕೀರ್ತಿ ತಂದಿದ್ದಾರೆ.

ಕಿಡ್ನಾಪ್ ಪ್ರಕರಣದ ಹಿಂದೆ ದೊಡ್ಡವರ ಕೈವಾಡ

ಕೆ.ಆರ್.ನಗರ, ಮೇ 8– ದೂರು ನೀಡಿದ ತಕ್ಷಣ ಸತ್ಯಾಸತ್ಯತೆ ಪರಿಶೀಲಿಸದೆ ಸಂತ್ರಸ್ತೆಯನ್ನು ಅಪಹರಣ ಮಾಡಲಾಗಿದೆ ಎಂದು ಪ್ರಕರಣ ದಾಖಲಿಸಿಕೊಳ್ಳಲು ದೊಡ್ಡ ವ್ಯಕ್ತಿಗಳ ಕೈವಾಡವಿದೆ. ದೂರು ನೀಡಿದ ಯುವಕನ ಜೊತೆ ಎಂಡಿಸಿಸಿ ಬ್ಯಾಂಕಿನ ಆವರಣದಿಂದ ಪೊಲೀಸ್ ಠಾಣೆಯವರೆಗೆ ಬಂದಿರುವ ವ್ಯಕ್ತಿಗಳ ಚಹರೆ ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ಈ ಬಗ್ಗೆ ಪರಿಶೀಲನೆ ನಡೆಸಿ, ತಪ್ಪಿತಸ್ಥರಿಗೆ ಶಿಕ್ಷೆ ನೀಡುವಂತೆ ಪೊಲೀಸ್ ಇಲಾಖೆ ಮತ್ತು ಸರ್ಕಾರವನ್ನು ವಕೀಲ ತಿಮ್ಮಪ್ಪ ಒತ್ತಾಯಿಸಿದ್ದಾರೆ.

ಪಟ್ಟಣದ ಪತ್ರಕರ್ತರ ಭವನದಲ್ಲಿ ಜಂಟಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಸಂತ್ರಸ್ತ ಮಹಿಳೆಯ ಮಗ ನೀಡಿದ ದೂರಿನಲ್ಲಿ ನಮ್ಮ ಮನೆಯಿಂದ ನನ್ನ ಕಣ್ಣೆದುರಿಗೆ ಬಾಬಣ್ಣ ನಮ್ಮ ತಾಯಿಯನ್ನು ಕರೆದುಕೊಂಡು ಹೋಗಿದ್ದಾನೆ ಎಂದು ಹೇಳಿದ್ದಾನೆ. ಹಾಗಾದರೆ ಈ ಪ್ರಕರಣ ಅಪಹರಣ ಹೇಗೆ ಆಗುತ್ತದೆ ಎಂದು ಪ್ರಶ್ನಿಸಿದರು. ಆದ್ದರಿಂದ ಸಂತ್ರಸ್ತೆಯ ಮಗನ ಹಿಂದೆ ಕಾಣದ ಕೈಗಳು ಕೆಲಸ ಮಾಡಿದ್ದು, ಉದ್ದೇಶ ಪೂರ್ವಕವಾಗಿ ಅಪಹರಣ ಮಾಡಲಾಗಿದೆ ಎಂದು ದೂರು ನೀಡಲಾಗಿದೆ ಎಂದು ತಿಳಿಸಿದರು.

ಅಮಾಯಕ ಮಹಿಳೆಯರ ಭಾವಚಿತ್ರಗಳನ್ನು ಪೆನ್‌ಡ್ರೈವ್ ಮೂಲಕ ಹಂಚುವುದಲ್ಲದೆ, ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟು ಮಹಿಳೆಯರಿಗೆ ಅವಮಾನ ಮಾಡಿರುವ ವ್ಯಕ್ತಿಯ ವಿರುದ್ಧ ಕ್ರಮ ಏಕೆ ಕೈಗೊಂಡಿಲ್ಲ ಹಾಗೂ ಆತನನ್ನು ಎಲ್ಲಿ ಇಡಲಾಗಿದೆ. ಈ ಬಗ್ಗೆ ಸರ್ಕಾರ ರಚಿಸಿರುವ ಎಸ್‌ಐಟಿ ತಂಡ ಬಾಯಿ ಬಿಡುತ್ತಿಲ್ಲ ಏಕೆ? ಮೊದಲು ಆ ವ್ಯಕ್ತಿಯನ್ನು ಬಂಧಿಸಿ ಅವನನ್ನು ತನಿಖೆಗೆ ಒಳಪಡಿಸಿ ಆಗ ಸತ್ಯಾಸತ್ಯತೆ ಬಯಲಾಗುತ್ತದೆ ಎಂದು ತಿಳಿಸಿದರು.

ರಾಜ್ಯ ಸರ್ಕಾರ ಈ ಕೂಡಲೇ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಪಷ್ಟೀಕರಣ ನೀಡಬೇಕು ಹಾಗೂ ಅಪಹರಣ ದೂರು ದಾಖಲಿಸಿದ ವ್ಯಕ್ತಿಯ ಮತ್ತು ಜೊತೆಯಲ್ಲಿದ್ದವರ ವಿಚಾರಣೆ ಮಾಡಬೇಕು. ಈಗಿರುವ ಎಸ್‌ಐಟಿ ತಂಡವನ್ನು ಬದಲಿಸಿ ಪ್ರಕರಣವನ್ನು ನ್ಯಾಯಾಧೀಶರಿಗೆ ಅಥವಾ ಸಿಬಿಐಗೆ ವಹಿಸಬೇಕೆಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಹೆಚ್.ಡಿ.ಕುಮಾರಸ್ವಾಮಿ ಅಭಿಮಾನಿ ಬಳಗದ ಅಧ್ಯಕ್ಷ ಗೌತಮ್, ಜೆಡಿಎಸ್ ಮುಖಂಡ ಧರ್ಮರಾಜ್, ಕೀರ್ತಿ ಸೇರಿದಂತೆ ಇನ್ನಿತರರು ಹಾಜರಿದ್ದರು.

ವೀರಶೈವ–ಲಿಂಗಾಯಿತ ಮಹಾಸಭಾದಿಂದ ಸಭೆ

ತಿ.ನರಸೀಪುರ, ಮೇ 8– ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ತಿ.ನರಸೀಪುರ ತಾಲೂಕಿನಲ್ಲಿ 2024 ನೇ ಸಾಲಿನ ಬಸವ ಜಯಂತಿ ಕಾರ್ಯಕ್ರಮದ ಆಚರಣೆ ಕುರಿತು ಪೂರ್ವಭಾವಿ ಸಭೆಯನ್ನು ವಿವೇಕಾನಂದ ನಗರದ ವೀರಶೈವ ವಿದ್ಯಾರ್ಥಿ ನಿಲಯದಲ್ಲಿ ಮೇ 9ರಂದು ಮಧ್ಯಾಹ್ನ 3 ಗಂಟೆಗೆ ಕರೆಯಲಾಗಿದ್ದು, ತಾಲೂಕಿನ ಎಲ್ಲಾ ಸಂಘ–ಸಂಸ್ಥೆಗಳು, ಬಸವ ಬಳಗಗಳ ಒಕ್ಕೂಟ, ಎಲ್ಲಾ ಘಟಕಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಭಾಗವಹಿಸುವಂತೆ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ ತಿಳಿಸಿದ್ದಾರೆ.

ಆಶಾ ಕಾರ್ಯಕರ್ತೆ ನಾಗಮ್ಮ ನಿಧನ



ಹುಣಸೂರು, ಮೇ 8– ತಮ್ಮ ಚಿಕ್ಕಪ್ಪ ಸಾವನ್ನಪ್ಪಿ ಅಂತ್ಯಕ್ರಿಯೆ ನೆರವೇರಿಸಿದ ಬೆನ್ನ ಹಿಂದೆಯೇ ಆಶಾ ಕಾರ್ಯಕರ್ತೆಯೊಬ್ಬರು ಸಾವನ್ನಪ್ಪಿದ್ದಾರೆ.

ತಾಲೂಕಿನ ಹನಗೋಡು ಹೋಬಳಿಯ ನೇರಳಕುಪ್ಪೆ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಕಚುವಿನಹಳ್ಳಿ ಗ್ರಾಮದ ಆಶಾ ಕಾರ್ಯಕರ್ತೆ ನಾಗಮ್ಮ (38) ಮಂಗಳವಾರ ರಾತ್ರಿ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಮಂಗಳವಾರ ಮುಂಜಾನೆ ಮೃತ ನಾಗಮ್ಮನವರ ಚಿಕ್ಕಪ್ಪ ಅಂಚೆ ಇಲಾಖೆ ಮೇಲ್ವಿಚಾರಕ ಕೆ.ಎನ್.ಸುರೇಶ್ ಅವರಿಗೆ ಹೃದಯಾಘಾತವಾಗಿ ಮೈಸೂರಿನ ಆಸ್ಪತ್ರೆಯಲ್ಲಿ ನಿಧನರಾಗಿ ಸಂಜೆ ಅಂತ್ಯಕ್ರಿಯೆ ನಡೆಸಿದ ಬೆನ್ನಲ್ಲೆ ಲೋ ಬಿಪಿಯಿಂದಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಆಶಾ ಕಾರ್ಯಕರ್ತೆ ನಾಗಮ್ಮ ಮಂಗಳವಾರ ರಾತ್ರಿ ನಿಧನರಾದರು. ಬುಧವಾರ ಮಧ್ಯಾಹ್ನ ಅವರ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು.

ಕನ್ನಂಬಾಡಮ್ಮನ ಹಬ್ಬ ವಿಜೃಂಭಣೆಯಿಂದ ಆಚರಣೆ


ಕೊಂಡಾಳು ಗ್ರಾಮದಲ್ಲಿ ಮಹಿಳೆಯರು ಗ್ರಾಮದ ಪ್ರಮುಖ ಬೀದಿಗಳಲ್ಲಿ ಗ್ರಾಮದೇವತೆಗೆ ತಂಬಿಟ್ಟು ಹೊತ್ತು ಮೆರವಣಿಗೆ ಸಾಗುತ್ತಿರುವುದು.

ಹಿರೀಕ್ಯಾತನಹಳ್ಳಿ, ಮೇ 8– ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ತೊಂಡಾಳು ಗ್ರಾಮದಲ್ಲಿ ಇತಿಹಾಸ ಪ್ರಸಿದ್ಧ ಕನ್ನಂಬಾಡಮ್ಮನ ಹಬ್ಬ ಬಹಳ ವಿಜೃಂಭಣೆಯಿಂದ ಸಾವಿರಾರು ಭಕ್ತಾದಿಗಳ ಸಮ್ಮುಖದಲ್ಲಿ ನಡೆಯಿತು.

ಇದಕ್ಕೂ ಮೊದಲು ಗ್ರಾಮದ ಪೂಜಾರಿ ಮಹದೇವೇಗೌಡರ ಮನೆಯಿಂದ ದೇವಿಯ ವಿಗ್ರಹವನ್ನು ವಾದ್ಯ ತಮಟೆಗಳೊಂದಿಗೆ ಮೂಲಕ ಲಕ್ಷ್ಮಣತೀರ್ಥ ನದಿ ದಂಡೆಯಲ್ಲಿರುವ ದೇವಸ್ಥಾನಕ್ಕೆ ತರಲಾಯಿತು. ನಂತರ ಗ್ರಾಮದ ಹಿಂದಿನ ಪ್ರತೀತಿಯಂತೆ ಪರಿಶಿಷ್ಟ ಜನಾಂಗದ ಮಹಿಳೆಯರು ತಂಬಿಟ್ಟಿನ ದೀವಿಗೆಯನ್ನು ವಿವಿಧ ಪುಷ್ಪಗಳಿಂದ ಅಲಂಕರಿಸಿಕೊಂಡು ಕಳಸ ಹೊತ್ತು ಮಕ್ಕಳ ಜೊತೆ ತಮಟೆ ವಾದ್ಯದೊಂದಿಗೆ ಮೆರವಣಿಗೆಯ ಮೂಲಕ ಗ್ರಾಮದ ಹೊರವಲಯದ ಲಕ್ಷ್ಮಣತೀರ್ಥ ನದಿಯ ದಂಡೆಯ ಪಕ್ಕದಲ್ಲಿರುವ ಕನ್ನಂಬಾಡಮ್ಮ ದೇವಿಯ ಸ್ಥಳಕ್ಕೆ ಜಮಾಯಿಸಿ. ದೇವಿಗೆ ಅರಿಶಿನ ಹಚ್ಚಿ ಬೇವಿನ ಸೊಪ್ಪು ಹಾಕಿ ಎಣ್ಣೆ ಮಜ್ಜನ ಮಾಡಿ ತಂಬಿಟ್ಟಿನ ಆರತಿ ಬೆಳಗಿದರು. ತಮಟೆ ಸದ್ದಿಗೆ ಕುಣಿತ, ಹೆಜ್ಜೆ ಹಾಕಿದ ಯುವ ಸಮೂಹ ಹಬ್ಬವನ್ನು ಸಂಭ್ರಮದಿಂದ ಆಚರಿಸಿತು.

ಗದ್ದೆ ಬಯಲಿನಲ್ಲೇ ಮಾಂಸದೂಟ: ಕನ್ನಂಬಾಡಮ್ಮ ದೇವಿಗೆ ಪೂಜೆ ಸಲ್ಲಿಸಿದ ನಂತರ ಕುರಿ, ಕೋಳಿ ಬಲಿ ಕೊಟ್ಟು ಪ್ರತಿ ಕುಟುಂಬವು ಸ್ಥಳದಲ್ಲೇ ಮಾಂಸದ ಅಡುಗೆ ಮಾಡಿ ದೇವಿಗೆ ನೈವೇದ್ಯ ಮೂಲಕ ವಿಶೇಷ ಪೂಜೆ ಸಲ್ಲಿಸಿ, ಗ್ರಾಮಕ್ಕೆ ದುಷ್ಟ ಶಕ್ತಿ ನುಸುಳದಂತೆ, ರೋಗ–ರುಜಿನಗಳು ಕಾಡದಂತೆ ರಕ್ಷಿಸಲು, ಮಳೆ ಬೆಳೆ ಸಮೃದ್ಧಿಯಾಗಲು ಗ್ರಾಮಸ್ಥರು ಸಾಮೂಹಿಕವಾಗಿ ಪ್ರಾರ್ಥಿಸಿದರು. ನಂತರ ಸಂಜೆ ಕನ್ನಂಬಾಡಮ್ಮ ದೇವಿಯ ವಿಗ್ರಹವನ್ನು ಸ್ವ–ಸ್ಥಳಕ್ಕೆ ತರಲಾಯಿತು. ಸುತ್ತಮುತ್ತಲ ಗ್ರಾಮಸ್ಥರು. ನೆಂಟರಿಷ್ಟರು ಹಬ್ಬದಲ್ಲಿ ಭಾಗವಹಿಸಿ ಆತಿಥ್ಯ ಸ್ವೀಕಾರ ಮಾಡಿದರು.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಉಮೇಶ್

ಇವರು ದಿನಾಂಕ: 29.04.2024 ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 09.05.2024 ಗುರುವಾರ ಬೆಳಗ್ಗೆ 10.30 ಗಂಟೆಗೆ ಗೋಕುಲಂ ರುದ್ರಭೂಮಿಯಲ್ಲಿ ಹಾಗೂ ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮದ ಮನೆಯಲ್ಲಿ ಭೋಜನವನ್ನು ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಪತ್ನಿ ಶ್ರೀಮತಿ ಅರ್ಪಿತ, ತಾಯಿ ಶ್ರೀಮತಿ ಜಯಮ್ಮ, ಅಣ್ಣ ತಮ್ಮಂದಿರು, ಕುಟುಂಬವರ್ಗ ಹಾಗೂ ಅಪಾರ ಬಂಧುಮಿತ್ರರು.

ಸ್ಥಳ: # 2399, 5ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಪಡುವಾರಹಳ್ಳಿ, ವಿನಾಯಕನಗರ